ಜನವರಿ 2021

₹20/-

ಸುಂದರ ನಾಳೆಗೆ ಸುಮಧುರ ಬಾಳಿಗೆ

ಅನುಪಮ

Anupama Women's Monthly

ಮಹಿಳಾ ಮಾಸಿಕ

ಸೈನಿಕರು ನಮ್ಮ ಕಣ್ಣಾದರೆ, ರೈತರು ನಮ್ಮ ಕರಗಳು



ಹೊಸ ವರುಷಕ್ಕೆ ಹೊಸ ಕನಸುಗಳು

2021



SOCIAL SERVICE UNIT

JAMAAT-E-ISLAMI HIND, GULBARGA UNIT

ನಿಮ್ಮ ಪೈಕಿ ಯಾರದಾದರೂ ಮರಣದ ಸಮಯ ಬಂದಿದ್ದು ಆಗ ಅವನು– 'ನನ್ನ ಪ್ರಭೂ, ನೀನು ನನಗೆ ಇನ್ನೂ ಸ್ವಲ್ಪ ಹೆಚ್ಚು ಕಾಲಾವಧಿ ನೀಡಿರುವುದಿಲ್ಲವೇಕೆ? ಹಾಗೆ ನೀಡಿದ್ದರೆ ನಾನು ದಾನ–ಧರ್ಮ ಮಾಡುತ್ತಿದ್ದೆ ಮತ್ತು ಸಜ್ಜನರ ಸಾಲಿಗೆ ಸೇರುತ್ತಿದ್ದೆ'– ಎಂದು ಹೇಳುವುದಕ್ಕೆ ಮುಂಚೆ ನಾವು ನಿಮಗೆ ದಯಪಾಲಿಸಿರುವ ಸಂಪತ್ತಿನಿಂದ ಖರ್ಚು ಮಾಡಿರಿ. [ಪವಿತ್ರ ಕುರ್‌ಆನ್]



ಸಂಪುಟ: 11 ಸಂಚಿಕೆ: 12

ಪ್ರಧಾನ ಸಂಪಾದಕಿ
ಶಹನಾಝ್ ಎಂ.

ಸಹಸಂಪಾದಕಿಯರು
ಸಬೀಹಾ ಫಾತಿಮಾ
ಸಮೀನಾ ಯು.

ಸಂಪಾದಕ ಮಂಡಳಿ
ಸಾಜಿದಾ ಮೂಮಿನ್
ಶಹೀದಾ ಉಮರ್
ಕುಲ್ಸೂಮ್ ಅಬೂಬಕರ್

ವ್ಯವಸ್ಥಾಪಕರು
ಮುಹಮ್ಮದ್ ಮುಹ್ಸಿನ್

ಪ್ರಕಾಶಕರು
ಎಂ. ಸಾದುಲ್ಲಾ

ವಿನ್ಯಾಸ ಮತ್ತು ಮುದ್ರಣ
ಕಂಪ್ರಿಂಟ್, ಮಂಗಳೂರು-1
ದೂರವಾಣಿ: 2424758

ಕಚೇರಿ ವಿಳಾಸ

ಅನುಪಮ ಮಹಿಳಾ ಮಾಸಿಕ
ಹಿದಾಯತ್ ಸೆಂಟರ್
ಬೀಬಿ ಅಲಾಬಿ ರಸ್ತೆ
ಮಂಗಳೂರು -575001

ದೂರವಾಣಿ : 0824-2410358
8722454771
9535445101

Email:
anupamamasika@gmail.com

website:
www.anupamamonthly.com

ಒಳಪುಟಗಳಲ್ಲಿ

ಸೈನಿಕರು ನಮ್ಮ ಕಣ್ಣಾದರೆ ರೈತರು ನಮ್ಮ ಕರಗಳು 8 ಸಿಹಾನ ಬಿ.ಎಂ.

ಲೇಖನಗಳು

ಹಳ್ಳಿಯಿಂದ ದಿಲ್ಲಿಗೆ ರೈತರ ಹೆಜ್ಜೆ...	11	ಸಲಾಮ್ ಸಮ್ಮಿ
ಹೊಸ ವರುಷಕ್ಕೆ ಹೊಸ ಕನಸುಗಳು	12	ಇರ್ಷಾದ್ ಮೂಡಬಿದ್ರಿ
ಸೈಂಟಿಸ್ಟ್ ಸೂಪರ್ ಹೀರೋ	16	ಮಲ್ಲಿಕಾರ್ಜುನ ತಿಪ್ಪಾರ
ಕೊರೋನ ತಂದಿತ್ತ ಸಂಕಷ್ಟಗಳು	19	ಯಶೋದಾ ಮೋಹನ್
ಹೊಸ್ತಿಲು ದಾಟುವ ಮುನ್ನ... ಚಿಂತಿಸುವಿರಾ?	23	ಸಫಾ
ಸಮುದ್ರದ ಚಿಪ್ಪು ಹಣವಾದರೆ?	26	ರಫೀಕ್ ಮಾಸ್ಟರ್
ಕಿಡ್ನಿಯನ್ನು ಹಾಳು ಮಾಡುವ ಜೀವನ ಶೈಲಿ	31	ಡಾ। ನಿಝಾಮುದ್ದೀನ್
ಹದಿಹರೆಯ– ಪೋಷಕರಿಗೊಂದು ಸವಾಲು	43	ಪ್ರಕಾಶ ನಡಹಳ್ಳಿ
'2014ರ ಮೊದಲು' ಕೆಲವು ಪ್ರಶ್ನೆಗಳು	52	ಶಹೀದ ಉಮರ್
ಕಾವಿಯೊಳಗಿರುವ ಆಧ್ಯಾತ್ಮಿಕ ಚೈತನ್ಯ – ಇದು ಜ್ಞಾನಭಂಡಾರ	59	ಅಬ್ದುಲ್ ಸಲಾಮ್

ಕಥೆ / ಕಾದಂಬರಿ

ಅವಳ ಹೆಜ್ಜೆ [ಕಥೆ]	27	ಶಮು
ಜೀವನರಥದಿ ನವಸದಸ್ಯನಾಗಮನ [ಧಾರಾವಾಹಿ]	36	ಎಂ. ಅಶ್ರಫ್
ಬಿಸಿಲ್ಗುದುರೆ [ಕಾದಂಬರಿ] (ಭಾಗ–2)	48	ಆಯಿಶತ್ ಸಫ್ವಾನ ಯು.

Vol. No. 11, Issue No. 12, Printed & Published by **M. Sadullah**, 20-7-496, Badria 3rd Cross, Kandak, Mangalore-575001 on behalf of Sanmarga Publication Trust and Printed & Published at Comprint, Hidayath Centre, Beebi Alabi Road, Mangalore - 575001, Editor: **Shahnaz M.** **REGISTERED NO. KA/SK/MNG-477/2018-20 LICENCE TO POST SK/WPP/MNG/97/2018-20**



ನ್ಯೂಸ್ ಮೀಡಿಯಾ V/s ಸೋಶಿಯಲ್ ಮೀಡಿಯಾ

ಡಿಸೆಂಬರ್ 20ರ ಸಂಚಿಕೆಯಲ್ಲಿ ಪ್ರಕಟವಾದ ತಶ್ರೀಫಾ ಜಹಾನ್‌ರ 'ಅರ್ನಬ್ ಮತ್ತು ಮಾಧ್ಯಮ ಸ್ವಾತಂತ್ರ್ಯ' ಲೇಖನವು ಸಂದರ್ಭೋಚಿತವಾಗಿದೆ. ಈ ಮೂಲಕ ಅನುಪಮವು ಖುದ್ದು ಒಂದು ಮಾಧ್ಯಮ ವಾಗಿದ್ದು, ಮಾಧ್ಯಮ ಸ್ವಾತಂತ್ರ್ಯದ ದುರುಪ ಯೋಗದ ಕುರಿತು ಬಹಳ ಜಾಗರೂಕತೆ ಯಿಂದಿದೆ ಎಂದು ತಿಳಿದು ಬರುತ್ತೆ.

ನಿಜವಾಗಿಯೂ ದೇಶದ ಬಹುತೇಕ ರಾಷ್ಟ್ರೀಯ ಹಾಗೂ ರಾಜ್ಯ ಚಾನೆಲ್‌ಗಳು 6 ಕಾರ್ಪೊರೇಟ್ ಕಂಪೆನಿಗಳ ಹಿಡಿತದಲ್ಲಿವೆ ಎಂದು ಇದಕ್ಕೂ ಮೊದಲು ಬಂದಿದ್ದ ಸಂಗತಿಯು ವಾಸ್ತವವೆಂದು ಇದೀಗ ಮೆಲ್ಲ ಮೆಲ್ಲನೆ ನಮ್ಮ ಅರಿವಿಗೆ ಬರುತ್ತಿದೆ. ಇತಿಹಾಸದಲ್ಲಿ ಇದಕ್ಕೂ ಮೊದಲು ಕಂಡು ಕೇಳರಿಯದಂತಹ ರೈತರ ದೆಹಲಿ ಚಲೋ ಧ್ಯೇಯದ ಪ್ರತಿಭಟನೆಯನ್ನು ಕೂಡಾ ಸಕಾರಾತ್ಮಕವಾಗಿ ತೋರಿಸದ ಚಾನೆಲ್ ಗಳಿಂದ ಇನ್ನೇನನ್ನು ನಿರೀಕ್ಷಿಸಲು ಸಾಧ್ಯ.

ಅಲ್ಲಿನ ರೈತರು ಟಿವಿ ಚಾನೆಲ್‌ಗಳನ್ನು ಧಿಕ್ಕರಿಸಿ ಸೋಶಿಯಲ್ ಮಾಧ್ಯಮವನ್ನೇ ತಮ್ಮ ಧ್ವನಿಯ ಅಸ್ತ್ರವನ್ನಾಗಿ ಬಳಸು ತ್ತಿರುವುದು ಉತ್ತಮ ಬೆಳವಣಿಗೆ. ಮಾಧ್ಯಮಗಳು ಇನ್ನಾದರೂ ಇದರಿಂದ ಪಾಠ ಕಲಿಯಲಿ.

ಎ. ಫಾಝಿಲ, ಮಲಾರ್

ಸುಂದರ ಮುಖಪುಟ

ಡಿಸೆಂಬರ್ 'ಅನುಪಮ' ಮುಖಪುಟ ಸುಂದರವಾಗಿ ಮೂಡಿಬಂದಿದೆ. ಅಮೇ ರಿಕಾ ಸಂಸತ್ತು ಪ್ರವೇಶಿಸಿದ ಮೂವರು ಮಹಿಳಾ ಮಣಿಗಳನ್ನು ಓದಿದಾಗ ಹೆಮ್ಮೆ ಅನಿಸಿತು. ಮಹಿಳೆ ಮನಸ್ಸು ಮಾಡಿದರೆ ಬದಲಾವಣೆ ತರಬಲ್ಲಳು ಎಂಬುದಕ್ಕೆ ಇದೇ ಸಾಕ್ಷಿ. ಇವರಿಂದ ಉತ್ತಮ, ಜನಪರ ಆಡಳಿತ ದೊರಕಲಿ ಎಂಬ ಹಾರೈಕೆ.

ಗೀತಾ, ತುಮಕೂರು

ಉತ್ತಮ ಲೇಖನ

ಸದ್ರುದ್ದೀನ್ ವಿ. ಬರೆದ 'ಅಸಹಾಯಕ ರಿಗೆ ಆಸರೆಯಾಗುವಿರಾ?' ಲೇಖನ ಉತ್ತಮವಾಗಿತ್ತು. ಸಮಾಜದಲ್ಲಿ ಧಾರಾಳ ಸಂಖ್ಯೆಯಲ್ಲಿ ಅಸಹಾಯಕರಿರುವಾಗ ಅವರಿಗೆ ನೆರವಾಗುವುದು ಮಾತ್ರವಲ್ಲ ಅವರಿಗೆ ಸ್ಫೂರ್ತಿ ತುಂಬುವುದು, ಸಾಂತ್ವ ನದ ಮಾತುಗಳನ್ನಾಡುವುದು ಪ್ರತಿ ಯೊಬ್ಬರೂ ಮಾಡಬಹುದಾದ ಕೆಲಸ ವಾಗಿದೆ. ಇದರಲ್ಲಿ ಸಿಗುವ ಸಂತೋಷ ಬೇರ್ಯಾವುದರಲ್ಲೂ ಸಿಗಲಾರದು.

ಉಮ್ಮು ಮುಂತಹ, ಮಂಗಳೂರು

ಸಂಶಯ ನಿವಾರಣೆ

ಡಿಸೆಂಬರ್ ಸಂಚಿಕೆಯಲ್ಲಿ ಡಾ। ನಾರಾಯಣ್ ಕುಟ್ಟಿ ಬರೆದ ಕ್ಯಾನ್ಸರ್‌ಗೆ ದೀರ್ಘಕಾಲದ ಮಾನಸಿಕ ಉದ್ವೇಗ ಕಾರಣವಾಗಬಹುದು ಲೇಖನ ಹಲವು ಸಂಶಯಗಳಿಗೆ ಪರಿಹಾರ ಸೂಚಿಸಿದೆ. ಪ್ರಶ್ನೋತ್ತರ ಉಪಯುಕ್ತವಾಗಿತ್ತು. ಲೇಖಕರಿಗೆ ಧನ್ಯವಾದಗಳು.

ರಾಜಲಕ್ಷ್ಮಿ, ಬೆಂಗಳೂರು

ಮುತ್ತುರತ್ನಗಳು

ಲೇಖಕ ಅಬ್ದುಸ್ಸಲಾಮ್ ದೇರಳಕಟ್ಟೆ ಯವರ ಮುತ್ತುರತ್ನಗಳು ಅಂಕಣ ಉತ್ತಮ ವಿಚಾರಗಳನ್ನು ಹೊತ್ತು ಬರುತ್ತಿದೆ. ಡಿಸೆಂಬರ್ 'ಅನುಪಮ'ದಲ್ಲಿ ಮೂಡಿ ಬಂದ ವಿವಾಹ ಧನದ ಹೊಸ ಪರಿಕಲ್ಪನೆ ಯನ್ನು ಪರಿಚಯಿಸಿದ ಕೇರಳದ ರಾಫಿಯಾ ಹಾಗೂ ಫವಾಸ್‌ರು ಅಭಿನಂದನಾರ್ಹರು. ಲೇಖನ ತುಂಬಾ ಇಷ್ಟವಾಯಿತು.

ಸಲ್ಮಾ, ಸೌದಿ ಅರೇಬಿಯಾ

ಚಂದಾದಾರರ ಗಮನಕ್ಕೆ

'ಅನುಪಮ' ಚಂದಾ ನವೀಕರಣ ಮಾಡಬಯಸುವವರು ಅಥವಾ ಹೊಸದಾಗಿ ಚಂದಾ ಮಾಡಬಯಸು ವವರು ಚಂದಾ ಹಣವನ್ನು ಈ ಕೆಳಗಿನ ಬ್ಯಾಂಕ್ ಖಾತೆಗೆ ಜಮಾ ಮಾಡಿ 9535445101 Whatsapp ಅಥವಾ SMS ಮೂಲಕ ತಿಳಿಸಿ.

ANUPAMA MAHILA MASIKA
Syndicate Bank, Mission Street, Mangalore.
A/c. No. 01043070000966,
IFSC Code: SYNB0000104

ವಾರ್ಷಿಕ	ರೂ. 250/-
ದ್ವೈವಾರ್ಷಿಕ	ರೂ. 500/-

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

ಇದು ಈಗ ಅಗತ್ಯವಿತ್ತೇ?

ದೇಶದ ಇಂದಿನ ಆರ್ಥಿಕ ಪರಿಸ್ಥಿತಿಯನ್ನು ಅವಲೋಕಿಸುವಾಗ ಉದ್ಯೋಗ ಕಳೆದುಕೊಂಡ ಒಂದು ದೊಡ್ಡ ಸಂಖ್ಯೆಯ ನಾಗರಿಕರೇ ಬದುಕಲು ಒದ್ದಾಡುತ್ತಿರುವಾಗ, ನೆರೆ, ಸುಂಟರ ಗಾಳಿಗೆ ಹಲವು ಆಸ್ತಿ–ಪಾಸ್ತಿ ನಷ್ಟದಲ್ಲಿ ಜನರು ವಸತಿ ಇಲ್ಲದೆ ಪರದಾಡುತ್ತಿರುವಾಗ ನಮ್ಮ ಪ್ರಧಾನಿಗೆ ಹೊಸ ಸಂಸತ್ ಭವನದ ಕಟ್ಟಡ ನಿರ್ಮಿಸಲು ಸಾವಿರಾರು ಕೋಟಿಯ ಖರ್ಚಿನ ಕುರಿತು ಚಿಂತೆ ಇಲ್ಲ. ದೇಶದ ಅರ್ಧದಷ್ಟು ಜನ ಹಸಿವಿನಲ್ಲಿರುವಾಗ ಸಾವಿರ ಕೋಟಿ ರೂ. ವೆಚ್ಚದ ಸಂಸತ್ ಭವನ ಯಾಕೆ ಬೇಕು ಎಂದು ನಟ ಕಮಲ್ ಹಸನ್ ಕೇಂದ್ರ ಸರಕಾರವನ್ನು ಪ್ರಶ್ನಿಸಿರುವುದು ಸರಿಯೇ ಆಗಿದೆ.

ವಿಶೇಷವೆಂದರೆ ದೇಶದ ದೊಡ್ಡ ದೊಡ್ಡ ಶಿಲಾನ್ಯಾಸದ ಕಾರ್ಯಕ್ರಮಕ್ಕೆ ರಾಷ್ಟ್ರಪತಿಯವರ ಉಪಸ್ಥಿತಿ ಇಲ್ಲ! ನಮ್ಮ ರಾಷ್ಟ್ರಪತಿ ರಾಮನಾಥ್ ಕೋವಿಂದ್‌ರವರು ದಲಿತ ವ್ಯಕ್ತಿ ಎಂದೇ ನಿರ್ಲಕ್ಷ್ಯಕ್ಕೆ ಕಾರಣವಾಗಿರಲೂಬಹುದು. ಇಂದು ದೇಶದ ಅಗತ್ಯಗಳಲ್ಲಿ ಸಂಸತ್ ಭವನ ನಿರ್ಮಿಸುವುದು ಮುಖ್ಯವಲ್ಲ. ಒಂದು ವೇಳೆ ಹೊಸ ಆಧುನಿಕ ಸಂಸತ್ ಭವನ ನಿರ್ಮಿಸಿದರೂ ಅದರಲ್ಲಿ 'ಪ್ರಜಾಪ್ರಭುತ್ವ' ಉಸಿರಾಡುತ್ತದೆಯೇ? ಎಂಬ ಸಂಶಯವೂ ಇದೆ. ಪಟೇಲರ ಪುತ್ಥಳಿಗಾಗಿ ಸಾವಿರಾರು ಕೋಟಿ ಖರ್ಚು ಮಾಡಿದ ಸರಕಾರಕ್ಕೆ ಕಲ್ಲು, ಸಿಮೆಂಟು ಕಬ್ಬಿಣದ ಮೇಲಿರುವ ಪ್ರೀತಿಯ ಒಂದಂಶ ಮಾನವ ಜೀವನದ ಮೇಲೂ ಇರುತ್ತಿದ್ದರೆ ಒಳ್ಳೆದಿತ್ತು.

ಗೋಹತ್ಯೆ ನಿಷೇಧ ಮಸೂದೆ ಕೇವಲ ಮುಸ್ಲಿಮರಿಗೆ ಮಾತ್ರ ನಷ್ಟ, ಬೇಸರ ಉಂಟು ಮಾಡುವುದೆಂಬ ಭ್ರಮೆ ಬೇಡ. ಗೋಮಾಂಸ ತಿನ್ನದ ಬಹುಸಂಖ್ಯೆಯ ಮುಸ್ಲಿಮರು ಈ ದೇಶದಲ್ಲಿದ್ದಾರೆ. ಅದೇರೀತಿ, ದೊಡ್ಡ ಪ್ರಮಾಣದಲ್ಲಿ ದನದ ಮಾಂಸ ತಿನ್ನುವ ಮುಸ್ಲಿಮೇತರರಿದ್ದಾರೆ. ಗೋ ಕಳ್ಳತನ, ಅಕ್ರಮ ಸಾಗಾಟ, ಸತ್ತ ದನದ ಮಾಂಸ ತಿನ್ನುವುದು ಮುಸ್ಲಿಮರಿಗೆ ಧರ್ಮ ಸಮ್ಮತವೂ ಅಲ್ಲ. ಗೋಹತ್ಯೆ ನಿಷೇಧ ಕಾನೂನು ಗೋವುಗಳ ಕಳ್ಳತನ, ಅಕ್ರಮ ಸಾಗಾಟಕ್ಕೆ ಕಡಿವಾಣ ಹಾಕುವುದಾದರೆ ಈ ಕಾಯ್ದೆಯನ್ನು ಸ್ವಾಗತಿಸೋಣ. ಈ ಕಾನೂನು ಭಾರತದಾದ್ಯಂತ ಜಾರಿಗೊಳಿಸಬೇಕು. ಹಲವು ಬಿಜೆಪಿ ಆಡಳಿತ ನಡೆಸುವ ರಾಜ್ಯಗಳಲ್ಲಿ ಗೋಹತ್ಯೆಗೆ ಈಗಲೂ ಅವಕಾಶವಿರುವುದು ಸರಕಾರದ ಇಬ್ಬಂದಿತನವಾಗಿದೆ. ಮಾತ್ರವಲ್ಲ, ಈಗಲೂ ಹೊರ ರಾಷ್ಟ್ರಗಳಿಗೆ ಭಾರೀ ಪ್ರಮಾಣದಲ್ಲಿ ಗೋಮಾಂಸ ರಫ್ತಾಗುತ್ತಿದೆ. ಇವೆಲ್ಲವನ್ನೂ ನಿಷೇಧಿಸಲಿ. ಜತೆಗೆ ದನದ ಚರ್ಮದಿಂದ ತಯಾರಿಸುವ ಬೆಲ್ಟ್, ಪರ್ಸ್, ಬ್ಯಾಗ್, ಡೋಲು ಇತ್ಯಾದಿ ಎಲ್ಲಾ ವಸ್ತುಗಳನ್ನು ನಿಷೇಧಿಸಬೇಕು. ಮುಸ್ಲಿಮರು ದನದ ಮಾಂಸ ತಿನ್ನದಿದ್ದರೆ ಪಾಪಿಗಳಾವುದೂ ಇಲ್ಲ. ನಿರ್ದಿಷ್ಟ ಸಮುದಾಯವನ್ನು ಗುರಿ ಇಟ್ಟು ಕಾಯ್ದೆ, ಕಾನೂನು ತರುವ ಬಿಜೆಪಿ ಸರಕಾರ ತನ್ನ ಕಾಲ ಮೇಲೆ ತಾನೇ ಕೊಡಲಿ ಹಾಕುತ್ತಿರುವುದು ಮೂರ್ಖತನ. ಗೋ ರಕ್ಷಣೆಯ ಹೆಸರಿನಲ್ಲಿ ನಕಲಿ ಅರಕ್ಷಕರ ಸೃಷ್ಟಿಗೆ ಸರಕಾರ ಕಾರಣವಾಗುತ್ತಿದೆ. ಸಮಾಜದಲ್ಲಿ ಕ್ಷೋಭೆ ಉಂಟು ಮಾಡಲು ದಾರಿ ಕಾಣಿಸುತ್ತಿದೆ. ಏಕಾಏಕಿ ಜಾರಿಯಾದ ಈ ಮಸೂದೆಯಿಂದ ಗೋವಿಗೆ ಕಟ್ಟುವ ಹಗ್ಗವನ್ನು ರೈತನ ಕೊರಳಿಗೆ ಕಟ್ಟುವ ಮೂಲಕ ಸರಕಾರವು ಹಲವು ಕುಟುಂಬಗಳ ಕಣ್ಣೀರಿಗೆ ಕಾರಣವಾಗಬಾರದು.

ರೈತರ ಮತ್ತು ನಾಗರಿಕರ ಹಕ್ಕನ್ನು ಕಸಿಯುವ ನಿರ್ಧಾರ ಸರಕಾರ ಕೈ ಬಿಡುವುದರಲ್ಲಿ ಒಳಿತಿದೆ. ರೈತರು, ಸಾರಿಗೆ ಮುಷ್ಕರ, ಕಾರ್ಮಿಕರ ಮುಷ್ಕರ ಹೀಗೆ ಜನರು ಸಿಡಿದೇಳುತ್ತಿದ್ದರೂ ಸರಕಾರ 'ಅಚ್ಛೇದಿನ್' ಬರುತ್ತದೆ ಎಂಬ ಮಂತ್ರ ಉದುರಿಸುತ್ತಾ ಕನ್ನಡಿ ಒಳಗಿನ ಗಂಟು ತೋರಿಸಿ ಅಧಿಕಾರ ಚಲಾಯಿಸುತ್ತಿರುವುದು ನಮ್ಮ ದುರಂತ. ■

ನೀವು ಎದೆಗೆ ಗುಂಡು ಹೊಡೆದರೆ

ನೀವು ಜಲ ಫಿರಂಗಿ
ಸಿಡಿಸಬಹುದು ನಮ್ಮ ಮೈ ಮೇಲೆ
ನಾವು ಮುಂಗಾರು ಮಳೆಯ ಅರ್ಘಟವೆಂದು
ಭಾವಿಸುತ್ತೇವೆ
ಏಕೆಂದರೆ ನೀರು ನಮ್ಮ ವೈರಿಯಲ್ಲ
ನೀವು ಲಾಠಿ ಬೂಟುಗಳಿಂದ
ದಾಳಿ ಮಾಡಬಹುದು ನಮ್ಮ ಮೈ ಮೇಲೆ
ನಾವು ನಮ್ಮ ಅನ್ನ ಉಂಡ ಮಕ್ಕಳ ಸಲಿಗೆ
ಪ್ರೀತಿಯಿಂದ ಭಾವಿಸುತ್ತೇವೆ...
ಏಕೆಂದರೆ ಮಕ್ಕಳು ನಮ್ಮ ವೈರಿಗಳಲ್ಲ
ನೀವು ಅಶ್ರುವಾಯು ಸಿಡಿಸಿ
ಕಣ್ಣು ಕತ್ತಲು ಮಾಡಬಹುದು
ನಮ್ಮ ಕನಸುಗಳ ಮೇಲೆ...
ನಾವು ಮಂಜು ಕವಿದ ವಾತಾವರಣವೆಂದು
ಭಾವಿಸುತ್ತೇವೆ...
ಏಕೆಂದರೆ ಪ್ರಕೃತಿ ಎಂದೂ ನಮ್ಮ ವೈರಿಯಲ್ಲ
ಆದರೆ... ಆದರೆ
ನೀವು ದಲ್ಲಾಳಿಗಳ ಮಾತು ಕೇಳಿ
ಎದೆಗೆ ಗುಂಡು ಹೊಡೆದರೆ...
ನೆತ್ತರು ಕುಡಿದ ನೆಲ, ಬೆಳೆದು ನಿಂತ ಬೆಳೆ
ಹೋರಾಟದ ಹಾಡು ಬರೆಯುತ್ತವೆ... ಮರೆಯ ಬೇಡಿ
ಏಕೆಂದರೆ...
ಸರಕಾರ ರೊಕ್ಕ ಮುದ್ರಿಸಬಹುದೆ ಹೊರತು
ತುಂಡು ರೊಟ್ಟಿಯನ್ನಲ್ಲ ನೆನಪಿರಲಿ

■ ಅಲ್ಲಾಗಿರಿರಾಜ್ ಕನಕಗಿರಿ ■

ಸುಂದರ ನಾಳೆಗೆ ಸುಮಧುರ ಬಾಳಿಗೆ

ಅನುಪಮ

ಮಹಿಳಾ ಮಾಸಿಕ

'ನಿಮ್ಮ ಕುಟುಂಬ ಸಂಗಾತಿ: ಅನುಪಮ'

ಇದೀಗ ರಾಜ್ಯದ ಕನಿಷ್ಠ 1000

ಲೈಬ್ರರಿಗಳಿಗೆ sponsors ಬೇಕಾಗಿದ್ದಾರೆ....

ಈ ಪುಣ್ಯ ಕೆಲಸದಲ್ಲಿ ಅನುಪಮದೊಂದಿಗೆ ಕೈ ಜೋಡಿಸಿ....

ವಾರ್ಷಿಕ ಬೆಲೆ ಕೇವಲ ರೂ.250

ಸಹಕರಿಸ ಬಯಸುವವರು

9535445101 whatsapp ಮೂಲಕ ತಿಳಿಸಿ...

ಉದಾಃ ನಾನು 10 ಲೈಬ್ರರಿಗೆ Sponsor ಮಾಡುತ್ತೇನೆ... 2500/-

ನಾನು 5 ಲೈಬ್ರರಿಗೆ sponsor ಮಾಡುತ್ತೇನೆ.... 1250/-

Email: anupamamasika@gmail.com

Syndicate Bank, Mission Street, Mangalore. A/c. No. 01043070000966, IFC Code: SYNB0000104

ಸೈನಿಕರು ನಮ್ಮ ಕಣ್ಣಾದರೆ ರೈತರು ನಮ್ಮ ಕರಗಳು

■ ಸಿಹಾನ ಬಿ.ಎಂ. ■

ಭಾರತ ದೇಶದ ಐಕ್ಯತೆ ಮತ್ತು ಶಾಂತಿಯನ್ನು ಬಯಸುವವರೇ...

ಸ್ವಾತಂತ್ರ್ಯ ಹೋರಾಟಗಾರ ಹಾಗೂ ದೇಶದ ಪ್ರಧಾನ ಮಂತ್ರಿಯಾಗಿದ್ದ ಲಾಲ್ ಬಹದ್ದೂರ್ ಶಾಸ್ತ್ರಿಯವರ "ಜೈ ಜವಾನ್ ಜೈ ಕಿಸಾನ್" ಘೋಷಣೆ ಮರೆತಿರುವಿರಾ..? ಈ ಭೂಮಿಯಲ್ಲಿ ಕೃಷಿಕರು ಮತ್ತು ಸೈನಿಕರು ಇವರಿಬ್ಬರೂ ಗೌರವಿಸಲ್ಪಡುವ ವ್ಯಕ್ತಿಗಳು. ದೇಶಕ್ಕಾಗಿ ಅನ್ನ, ನೀರು, ಆಹಾರ ತ್ಯಜಿಸಿ ಕಣ್ಣಿಗೆ ಎಣ್ಣೆ ಬಿಟ್ಟು ನಿದ್ದೆಗೆಟ್ಟು ಗಡಿ ಕಾಯುವ ಸೈನಿಕರು ನಮ್ಮ ದೇಶದ ಅಭಿಮಾನಿಗಳು! ಸೈನಿಕರು ಈ ಭೂಮಿಯ ಮತ್ತು ಬದುಕಿನ ಚೆಲುವಿಗೆ, ಪೌರತ್ವಕ್ಕೆ ಕಾರಣರಾದವರು. ಕೊರೆಯುವ ಶೀತಗಾಳಿಗೆ ಮೈಯೊಡ್ಡಿ ನೆಮ್ಮದಿಯನ್ನೂ, ತಾರುಣ್ಯವನ್ನೂ ಸತತ ಅಡವಿಟ್ಟು ಸಂಸಾರದ ನೆನಪುಗಳಲ್ಲಿ, ಸುಖದ ತ್ಯಾಗಗಳಲ್ಲಿ ಕುಟುಂಬಕ್ಕಾಗಿ, ದೇಶಕ್ಕಾಗಿ ಪ್ರಾಣತೆತ್ತು ಬಾಳುತ್ತಿರುವ ವೀರ ಪರಾಕ್ರಮಿಗಳು. ಅದೇ ರೀತಿ ಹೊಟ್ಟೆಯನ್ನು ಬೆನ್ನಿಗಂಟಿಸಿ, ಬಿರುಕುಬಿರುಕಾದ ಪಾದಗಳ ಸಿಪ್ಪೆ ಕೀಳುತ್ತಾ, ಬಿಸಿಲಿನ ತೀಕ್ಷ್ಣತೆಗೂ ಕೊರೆಯುವ ಚಳಿಗೂ ಲೆಕ್ಕಿಸದೆ ಭತ್ತ ಬೆಳೆಯುವ, ಬೀಜ ಬಿತ್ತುವ, ನೇಗಿಲು ಊಳುವ ಆಹಾರ ಸಂರಕ್ಷಕರು ನಮ್ಮ ರೈತರು. ಅವರು ಹಸಿದ ಹೊಟ್ಟೆಗೆ ಉಣ ಬಡಿಸುವ ಅನ್ನದಾತರು. ಅಲ್ಪ ಬೆಲೆಗೆ ಮಹಾ

ಸಂಪತ್ತು ದಾನ ಮಾಡುವ ದಾನಶೂರರು. ಅತ್ಯಲ್ಪ ಬೆಲೆಗೆ ಮಹಾ ಪರಿಶ್ರಮದ ಫಲವನ್ನು ಸಂತೋಷದಿಂದ ದೇಶದ ಮುಕ್ಕು ಮೂಲೆಗೂ ತಲುಪಿಸಿ ಹೊಟ್ಟೆ ತುಂಬಿಸುವ ನೈಜ ಯೋಧರು. ನೂರ ಮೂವತ್ತೈದು ಕೋಟಿಗಿಂತಲೂ ಅಧಿಕ ಜನಸಂಖ್ಯೆಯಿರುವ ಭಾರತದ ಪ್ರತೀ ನಾಗರಿಕರಿಗಾಗಿ ಹಗಲು ರಾತ್ರಿ ಶ್ರಮಪಟ್ಟು ಸದ್ದಿಲ್ಲದೆ ವ್ಯಥೆಯ ಮಡುವಿನಲ್ಲೂ ಬೆವರನ್ನು ಅಮೃತವಾಗಿಸಿ ಗಳಿಗೆಗೊಮ್ಮೆ ಮರು ಜೀವನ್ನೀಯುವ ತ್ಯಾಗಿಗಳು.

"ರೈತನ ಹುಟ್ಟು ಸಾಲದಿಂದ...ಆತನ ಬದುಕು ಸಾಲದಿಂದ... ಕೊನೆಗೆ ಆತನ ಮರಣವೂ ಸಾಲದಿಂದ..." ಹಿಂದೊಮ್ಮೆ ಓದಿದ ಪಾಠದ ಭಾಗ ಇದೀಗ ಅಕ್ಷರಶಃ ನಿಜವಾಗುತ್ತಿದೆ. ಆತ ಬೆಳೆದ ಬೆಳೆಗೆ ಸೂಕ್ತ ಬೆಲೆಯಿಲ್ಲ. ಕೊಂಚ ಚೇತರಿಸಿ ಕೊಳ್ಳಲು, ನಿರಾಳವಾಗಲು ತನ್ನನ್ನು ತಾನು ಪುನರುಜ್ಜೀವಿಸಿಕೊಳ್ಳಲು ಆತನಿಗೆ ಅವಕಾಶವೇ ಕೊಡುತ್ತಿಲ್ಲ. ಮಳೆ ಹೊಯ್ಯುವುದು, ಬಿಸಿಲು ಕಾಯುವುದು, ಪ್ರಾಣಿ–ಪಕ್ಷಿ, ಕೀಟಗಳಿಂದ ಬೆಳೆಯನ್ನು ಸಂರಕ್ಷಿಸುವುದು, ನೇಗಿಲು ಹೂಳುವುದು, ಬೀಜ ಬಿತ್ತುವುದು, ಕಾಲಕ್ಕನುಗುಣವಾದ ಕೃಷಿ ಮಾಡುವುದು ಇದನ್ನೆಲ್ಲ ಚಾಚೂ ತಪ್ಪದೆ ಪಾಲಿಸುತ್ತಿದ್ದ ರೈತ ಸಮಯಕ್ಕೆ ಸರಿಯಾಗಿ ಮಳೆ ಸುರಿಯದಿದ್ದಾಗ ಅಧೀರನಾಗುತ್ತಾನೆ. ಇಳೆಗೆ ಮಳೆ ಯಾವಾಗ ಸುರಿಯುವುದು? ಸುರಿದರೂ ಅದರ ತೀವ್ರತೆ ಹೇಗಿರಬಹುದು? ನೀರ ಬವಣೆ ಉಸಿರುಗಟ್ಟಿಸಬಹುದೇ? ಎಂದು ಲೆಕ್ಕಾಚಾರ ಮಾಡುವ ಆತ ಬೆಳೆ ಬೆಳೆಯುವುದು ಕೈಯಲ್ಲಿ ಹಣದ ಗಂಟುಗಳ ಕಟ್ಟು ಹಿಡಿದಲ್ಲ. ಬದಲಾಗಿ ಯಾರ್ಯಾರದೋ ಕೈ ಕಾಲು ಹಿಡಿದು ಕಚೇರಿ, ಬ್ಯಾಂಕ್, ಫೈನಾನ್ಸ್‌ಗಳಿಗೆ ಅಲೆದಾಡಿ ಸಾಲಸೋಲ ಮಾಡಿ ಕೃಷಿ ಮಾಡುತ್ತಾನೆ.

ರೈತ ಬೆಳೆದ ಹತ್ತು ರೂಪಾಯಿಯ ಟೊಮೆಟೊ ನೂರು ರೂಪಾಯಿಗೆ ಬೆಲೆಯೇರಿಕೆಯಾದಾಗ ಹೌಹಾರಿದ ಜನರು ರಾತ್ರಿ ಬೆಳಗಾಗುವುದರೊಳಗೆ ಚಿನ್ನದ ಬೆಲೆ ನಲ್ವತ್ತು ಸಾವಿರಕ್ಕೇರಿದಾಗ ತುಟಿ ಪಿಟಿಕ್ಕೆನ್ನಲಿಲ್ಲ. ಮತ್ತಷ್ಟು ಖರೀದಿಸುವ ಹಾಗೂ ಮಾರುವ ಉತ್ಸಾಹದಲ್ಲಿ ತೊಡಗಿಸಿಕೊಂಡರು. ತನ್ನ ಆದಾಯದ ಹತ್ತರಂಶ ಇತರರ ಪಾಲಾಗುತ್ತಿರುವಾಗ ಆ ರೈತ ತಾನು ನಂಬಿದ ಸರಕಾರದ ಮೇಲೆ ನಂಬಿಕೆಯಿಟ್ಟು ದಿನ ದೂಡುತ್ತಿದ್ದಾನೆ. ಜವಾಹರಲಾಲ ನೆಹರೂರವರು ರೂಪಿಸಿದ ಪಂಚವಾರ್ಷಿಕ ಯೋಜನೆಯಡಿಯ ಸಬ್ಸಿಡಿಯ ಮೂಲಕ ಬೆಳೆ ಬೆಳೆಸುವುದು ಆತನಿಗೆ ಆಶ್ವಾಸನೆಯಾಗಿತ್ತು. ತನ್ನ ಸಾಲ ಮನ್ನಾಕ್ಕಾಗಿ ಸರಕಾರದ ಮೊರೆ ಹೋಗುತ್ತಿದ್ದಾನೆ. ಆತ ಕಾರ್ಪೊರೇಟ್ ವರ್ತಕರ ಪುಡಿಗಾಸಿನಿಂದ ಜೀವನ ನಡೆಸಲು ಬಯಸುತ್ತಿಲ್ಲ. ಅವರ ಜುಜುಬಿ ಕಾಸಿಗಾಗಿ ಹೊಲದಲ್ಲಿ ಬೆಳೆ

ಬೆಳೆಯುತ್ತಿಲ್ಲ. ಇದೀಗ ಕಾರ್ಪೊರೇಟರ್ ದಲ್ಲಾಳಿಗಳು ಅವನ ಬೆಳೆಗೆ ಬೆಲೆ ಕಲ್ಪಿಸುವ ಹೊಸ ತಿದ್ದುಪಡಿ ನಿಯಮ ಆತನ ಅಭಿಮಾನಕ್ಕೆ ಬರೆಯೆಳೆದಿದೆ. ರೈತರೆಂದರೆ ಸ್ವಾಭಿಮಾನಿಗಳು... ಬಂಡವಾಳಶಾಹಿಗಳ ಕಾಸಿಗಾಗಿ ಅಂಗಲಾಚುವ ಭಿಕ್ಷುಕರಲ್ಲ.... ಅವರು ಅನ್ನ ನೀಡುವ ಅನ್ನದಾತರು... ಈ ದೇಶದ ಆಧಾರ ಸ್ತಂಭಗಳು.... ದೇಶಕ್ಕಾಗಿ, ಮಣ್ಣಿಗಾಗಿ ಜೀವವನ್ನೇ ಬಲಿಯರ್ಪಿಸಲು ಹೊರಟಿರುವ ಯೋಧರು... ಆತ್ಮವಿಶ್ವಾಸದ ಕಣಿಗಳು... ಅವರು ನಿಮ್ಮ ದೌರ್ಜನ್ಯಕ್ಕೆ ಹೆದರಿ ಬೆನ್ನಟ್ಟುವ ಹೇಡಿಗಳಲ್ಲ... ಕೊರೋನದ ಹೆಸರಿನಲ್ಲಿ ಇತರೆಲ್ಲ ಹೊಸ ಮಸೂದೆಗಳ ವಿರುದ್ಧ ಹೋರಾಡಿದವರನ್ನು ಗಪ್ ಚಿಪ್ ಮಾಡಲೆತ್ನಿಸಿದ ನಿಮ್ಮ ಆಟದ ಮುಂದೆ ಬಗ್ಗುವವರಲ್ಲ...

ನೆನಪಿರಲಿ...

"ರೈತರು ಕಣ್ಣೀರಿಟ್ಟರೆ ಭಾರತ ಕಣ್ಣೀರಿಡುತ್ತೆ

ರೈತರು ಎದ್ದು ನಿಂತರೆ ಭಾರತ ಎದ್ದು ನಿಲ್ಲುತ್ತೆ."

ಬದುಕಿಗಾಗಿ ಮಳೆ, ಬಿಸಿಲು, ಚಳಿಯ ಲೆಕ್ಕಿಸದೆ ಜೀವ ಪಣಕ್ಕಿಟ್ಟು ಸಾಲದಿಂದ ಬೆಂದು ಹತಾಶರಾಗಿ ಆತ್ಮಹತ್ಯೆಗೈದ ರೈತರ ಸಂಖ್ಯೆ ಭಾರತ ದೇಶದಲ್ಲಿ ಲಕ್ಷ ದಾಟಿಲ್ಲವೇ...? ಕಿಂಚಿತ್ತೂ ಅದರತ್ತ ಮುಖ ಮಾಡದ ಮಾಧ್ಯಮಗಳು ಶ್ರೀಮಂತ ಉದ್ಯಮಿ ಅಥವಾ ಚಿತ್ರನಟನೊಬ್ಬ ಆತ್ಮಹತ್ಯೆ ಮಾಡಿದರೆ ಅದೊಂದು ದೊಡ್ಡ ವಾರ್ತೆಯಾಗಿ ಬಿಂಬಿಸುತ್ತದೆ. ಅಂತರ್ಜಾತಿ ಪ್ರೇಮ ವಿವಾಹ ಭಗ್ನವಾದರೆ (ಅಂತರ್ಜಾತಿ ಪ್ರೇಮ ವಿವಾಹಗಳಲ್ಲಿ ಇವೆಲ್ಲ ಸರ್ವೇ ಸಾಮಾನ್ಯ) ಜಾತಿ, ಧರ್ಮದ ಹೆಸರಿಟ್ಟು ಸಮಾಜವನ್ನು ಸಂಶಯದಲ್ಲಿ ಹೂತು ಬಿಡುವ ಯತ್ನದಲ್ಲಿ ಮಾಧ್ಯಮಗಳು ಕ್ರಿಯಾಶೀಲವಾಗುತ್ತಿರುವುದು, ದುಷ್ಟ ಶಕ್ತಿಗಳು ಈ ಸಂದರ್ಭವನ್ನು ಕೋಮು ದ್ವೇಷಿಸಲು ಬಳಸಿಕೊಳ್ಳುತ್ತಿರುವುದು, ರೈತರ 'ದಿಲ್ಲಿ ಚಲೋ' ಹೋರಾಟದಲ್ಲೂ ಕೆಲವು ಮಾನಸಿಕ ಅಸ್ವಸ್ಥರು "ರೈತ ಜಿಹಾದಿ" (ಎಲ್ಲದಕ್ಕೂ ಜಿಹಾದಿ ಎಂದು ಹೆಸ

ರಿಡುವುದು ಅದೊಂದು ಹೊಸ ರೋಗ ವಾಗಿದೆ) ಎಂಬ ತಲೆಕಟ್ಟು ಕಟ್ಟಿ ಎಂಜಲು ಮುಟ್ಟಿಸುವ ಚಿತ್ರಗಳನ್ನು ಹಾಕಿ ವ್ಯವಸ್ಥಿತ ಪ್ರಚಾರ ಮಾಡಿ ಅದರ ಮೂಲಕ ವಿಷವಿತರಣೆ ಮಾಡಿ ದೇಶಪ್ರೇಮವನ್ನು ಮೆರೆಯುತ್ತಿದ್ದಾರೆ. ಸದಾ ಕೋಮು ದ್ವೇಷವನ್ನೇ ಉಸಿರಾಗಿಸಿ ಬದುಕ ಬಯಸು ವವರೇ, ಸ್ವಲ್ಪ "ದಿಲ್ಲಿ ಚಲೋ" ಹೋರಾಟ ದತ್ತ, ಕ್ರೂರ ಹಿಂಸೆಯಲ್ಲಿ ಬೆಂದು ನರಳಿ ದಿಕ್ಕೆಟ್ಟ ರೈತ ಬಂಧುಗಳತ್ತ, ಬದುಕು ಕಳೆದುಕೊಂಡ ಸಂತ್ರಸ್ತರತ್ತ, ಹಸಿದ ಜೀವಿಗಳತ್ತ ಸ್ವಲ್ಪ ಗಮನಹರಿಸಿರಿ... ನಿಮ್ಮ ಪೊಳ್ಳು ವಾದಗಳನ್ನು ಬದಿಗಿಟ್ಟು ನೈಜತೆ ಯತ್ತ ಮುಖ ಮಾಡಿದರೆ ಸಾಕು.

ಇವತ್ತು ಲಕ್ಷಾಂತರ ರೈತರು ಮೂರು ಸ್ಥಳಗಳಿಂದ ಐನ್ನೂರಕ್ಕಿಂತಲು ಅಧಿಕ ಸಂಘಟನೆಗಳೊಂದಿಗೆ ದಿಲ್ಲಿಗೆ ಜಮಾಯಿಸಿ ಅನ್ನ, ನೀರು, ಆಹಾರ ಬಿಟ್ಟು ಹೋರಾಟ ನಡೆಸುತ್ತಾ ಪರದಾಡುತ್ತಿದ್ದಾರೆ. ಅದರಲ್ಲಿ ವೃದ್ಧರು, ಸ್ತ್ರೀಯರು, ಮಕ್ಕಳು ಕೈ ಜೋಡಿಸಿರುವರು. ದಿಲ್ಲಿಗೆ ಜಮಾಯಿಸಿದ ರೈತರನ್ನು ತಡೆಯಲು ಕಬ್ಬಿಣದ ಬ್ಯಾರಿ ಕೇಡ್ ಗಳನ್ನು ನಿಲ್ಲಿಸಿ ದೇಶಕ್ಕೆ ನುಗ್ಗುವ ಭಯೋತ್ಪಾದಕರನ್ನು, ನುಸುಳುಕೋರರನ್ನು ತಡೆಯುವ ರೀತಿಯಲ್ಲಿ ಪ್ರಹಸನ ನಡೆಸುತ್ತಿರುವುದು, ಜೊತೆಗೆ ಅಶ್ರುವಾಯು ಷೆಲ್‌ಗಳನ್ನು ಮಿಸೈಲ್ ದಾಳಿಯ ರೀತಿ ಯಲ್ಲಿ ರೈತರ ಮೇಲೆ ಬೀಸುವುದು, ಕೊರೆಯುವ ಚಳಿಯಲ್ಲೂ ಜಲಫಿರಂಗಿ ಗಳನ್ನು ಹೊಡೆಯುತ್ತಿರುವ ಹೃದಯ ವಿದ್ರಾವಕ ದೃಶ್ಯಗಳನ್ನು ಕಂಡು ಈ ಪರಿತ್ಯಕ್ತರ ಜತೆಗೆ ನಿಲ್ಲುವುದನ್ನು ಮರೆತು ಸಣ್ಣ ಸಣ್ಣ ಮಿಂಚು ಸುದ್ದಿಗಳನ್ನು ಬಿತ್ತರಿಸಿ ಮೆರೆದ ಈ ಹೊತ್ತು ಮನುಕುಲದ ಕೇಡುಗಾಲದ ಹೊತ್ತಲ್ಲದೆ ಮತ್ತೇನು? ನಿಮಗೆ ಈ ಬಡಜೀವಿಗಳ ಅಹವಾಲನ್ನು ಸರಕಾರಕ್ಕೆ ಮುಟ್ಟಿಸುವ ಪ್ರಯತ್ನ ಮಾಡ ಬಾರದೇ...? ಅವರು ತಿನ್ನಿಸಿದ ಅನ್ನದ ಅಗುಳಿನ ಋಣ ತೀರಿಸಬಾರದೇ...? ನಾಳೆ ಕೃತಕ ಆಹಾರ ಸೇವನೆಗೆ ಬಲಿ ಯಾಗುವ ಸಂಕಷ್ಟವನ್ನು ತಪ್ಪಿಸುವ ಪ್ರಯತ್ನ ಮಾಡಬಾರದೇ...? ಯಾವ ಧರ್ಮದ ದ್ವೇಷಿಗಳಾಗಿದ್ದೀರೋ ಅದೇ ಧರ್ಮದ

'ಜೈ ಜವಾನ್ ಜೈ ಕಿಸಾನ್' ಎಂದರೆ ಸೈನಿಕರಿಗೂ ಜಯವಾಗಲಿ ಮತ್ತು ಕೃಷಿಕರಿಗೂ ಜಯವಾಗಲಿ. ಜವಾನ್ ದೇಶದ ಸುರಕ್ಷತೆಗಾಗಿ ಜಯಿಸ ಬೇಕು. ಕೃಷಿಕ ಆಹಾರ ಸಾಮಗ್ರಿಗಳ ಭದ್ರತೆ ಹಾಗೂ ಸಂರಕ್ಷಣೆಗಾಗಿ ಜಯಿಸಬೇಕು.

ಇಪ್ಪತ್ತೈದು ಮಸೀದಿಗಳಲ್ಲಿ ರೈತರಿಗೆ ಅನ್ನ, ಆಹಾರ, ಆಶ್ರಯ ನೀಡಿರುವ ಚಿತ್ರಗಳು ನಿಮ್ಮ ಕಣ್ಣ ಮುಂದೆ ಸುಳಿಯಲಿಲ್ಲವೇ...? ಪೊಲೀಸರು ಹೊಡೆ ದುರುಳಿಸಲು ಯತ್ನಿಸುತ್ತಿರುವ ಅದೇ ರೈತರು ಮತ್ತೊಮ್ಮೆ ಅವರಿಗೆ ಅನ್ನ, ನೀರು ಪೂರೈಕೆ ಮಾಡುವ ದೃಶ್ಯಗಳು ನಿಮ್ಮ ಮನಸ್ಥಿತಿಯನ್ನು ಬದಲಾಯಿ ಸಿಲ್ಲವೇ...? ಇನ್ನು ಯಾರಾದರೂ ಈ ಹೊತ್ತಿನಲ್ಲಿ ಉರಿವ ಮನೆಯಲ್ಲಿ ಧರ್ಮ, ಜಾತಿ ತುರುಕಿಸಿದರೆ ಅಂತಹವರು ಈ ಭೂಮಿಯ ಮೇಲಿರಲು ನಾಲಾಯಕ್ಕರು. ಅವರ ದ್ವೇಷಕ್ಕೆ ಅವರೇ ಬೂದಿ ಯಾಗಬೇಕಷ್ಟೇ!

ಇನ್ನೂ ಹೇಳುವುದಾದರೆ ಪಂಜಾಬ್ ಮತ್ತು ಹರ್ಯಾಣದ ರೈತರೆಂದರೆ ಆತ್ಮಬಲ ಹೊತ್ತ ಧೀರರು... ಅವರು ಹಠಮಾರಿಗಳು... ಯಾರದೇ ಯಾವುದೇ ಆಮಿಷಕ್ಕೆ ಬಗ್ಗುವವರಲ್ಲ... ಅವರ ಮಾತು ಘನವುಳ್ಳದು... ಪಂಜಾಬಿಗಳೆಂದರೆ ಅವರಲ್ಲಿ ದಿಟ್ಟತನದ ಆಕರ್ಷಣೆಯಿದೆ... ಹಿಡಿದ ಕೆಲಸ ಬಿಡಲೊಲ್ಲರು... ಆದು ದರಿಂದ ಅವರಿಗೆ ಮರಣದ ಭಯವಿಲ್ಲ. ಕೊರೋನ ವೈರಸ್ ಸೋಂಕು ನೆಪವಾಗಿಸಿ ಅವರನ್ನು ಹಿಂದಕ್ಕಟ್ಟಲು ನಿಮಗೆ ಸಾಧ್ಯವಿಲ್ಲ. ಸಾವಂತು ಖಚಿತ... ಇನ್ನು ಹೋರಾಡಿ ಸಾಯುವೆವೆಂದು ಪಣತೊಟ್ಟು ಹೋರಾಟಕ್ಕಿಳಿದಿರುವರು. ಅವರ ಬೇಡಿಕೆ ಯನ್ನು ಕೇಳಿ ಅವರಿಗೆ ಬೆಂಬಲ ನೀಡ ಬಾರದೇ...? ಕಷ್ಟಕಾಲದಲ್ಲೂ ಸ್ವಾರ್ಥದ ಗುಂಗಿನಲ್ಲಿ ಮೆರೆಯುವಿರೇಕೆ..? ಇಲ್ಲೂ ಬಲಪಂಥೀಯ ದುಷ್ಟಶಕ್ತಿಗಳು ನಡೆಸು ತ್ತಿರುವ ದೌರ್ಜನ್ಯವೇ ಆಯ್ತಲ್ಲ..! ಜನರ ರಕ್ಷಣೆಗೆ ನಿಂತ ಸೈನಿಕರು, ಪೊಲೀಸರು ರೈತರ ಅಳಲನ್ನು ಸಮಾಧಾನದಿಂದ ಶಾಂತಿಯಿಂದ ಗೌರವದಿಂದ ಕೇಳಿ ಪರಿಹಾರ ಕಂಡು ಹಿಡಿಯಬೇಕು. ಅದು ಬಿಟ್ಟು ದೊಣ್ಣೆ ನಾಯಕರಾಗುವುದು ಮನಸ್ಸಿಗೆ ಬಹಳ ನೋವಾಗುತ್ತದೆ. ಕಂಬಳದ ಬಯಲಿನಲ್ಲಿ ಎತ್ತುಗಳಿಗೆ ಹೊಡೆಯುವಂತೆ ಆ ವಯೋವೃದ್ಧರ ಮೇಲೆ ಲಾಠಿಪ್ರಹಾರ ನಡೆಸುತ್ತಿರುವುದು ನೋಡುವಾಗ ಹೃದಯ ಒಡೆದು ಹೋಗುತ್ತಿದೆ. ತಿಂದ ಅನ್ನಕ್ಕೆ ತೋರುವ ಕೃತಜ್ಞತೆಯೇ ಈ ಅಶ್ರುವಾಯು, ಜಲಫಿರಂಗಿ, ಲಾಠಿ ದೊಣ್ಣೆಗಳು! ಒಟ್ಟಿನಲ್ಲಿ ಎಲ್ಲಿ ಹೋದರೂ ಎಲ್ಲಿ ನೋಡಿದರೂ ಅಮಾಯಕರ ಮೇಲೆ ನಡೆಸುವ ದಬ್ಬಾಳಿಕೆಯದೇ ಕತೆ.

ಆದರೆ ಬೇಸರವೇನೆಂದರೆ ರಾಜ್ಯ ನೀತಿಯ ನಿರ್ದೇಶನ ತತ್ವ (Directive principle of state policy) ಜಾರಿಗೆ ಬಂದ ದಿನ, ದೇಶದ ನಾಗರಿಕರಿಗೆ ಹಕ್ಕುಗಳನ್ನು ನಿರ್ದೇಶಿಸಲಾದ ದಿನದಂದೇ ಆ ವಯೋವೃದ್ಧ ರೈತರ ಮೇಲೆ ಕಿಂಚಿತ್ತೂ ಕರುಣೆಯಿಲ್ಲದೆ ಅಮಾನ ವೀಯವಾಗಿ ತಳಿಸುತ್ತಿರುವುದು. ಅವರು ಕೇಂದ್ರ ಸರಕಾರದ ವಿರುದ್ಧ ಪ್ರತಿಭಟನೆ ಗೈಯಲು ಕಾರಣವೇನೆಂದು ತಿಳಿದಿದ್ದೂ ಇಂತಹ ಸಂಕಷ್ಟದಲ್ಲಿರುವ ಹೊತ್ತು ಯಾವ ಮಾನವೀಯತೆಯುಳ್ಳವನೂ ಸ್ಪಂದಿಸ ಬೇಕಾದ ಸಂದರ್ಭವಿದು. ಕೇಂದ್ರ ಸರಕಾರ ಕೃಷಿ ಉತ್ಪನ್ನ ಮಾರಾಟ ಕಾಯ್ದೆ, ಕೃಷಿ ಉತ್ಪನ್ನಗಳ ಬೆಂಬಲ ಬೆಲೆ ಹಾಗೂ ಅವಶ್ಯಕ ಪದಾರ್ಥಗಳ ಕಾಯ್ದೆಗಳನ್ನು ತಿದ್ದುಪಡಿ ಮಾಡಿ ದೇಶದ ರೈತರ ಅಸ್ತಿತ್ವವನ್ನು ನಾಶಮಾಡುವಂತಹ ಕೃತ್ಯಕ್ಕೆ ಕೈ ಹಾಕಿದೆ. ತಾನಿನ್ನು ಶಾಶ್ವತವಾಗಿ ಕಾರ್ಪೊರೇಟ್ ದಲ್ಲಾಳಿಗಳ ಅಧೀನದಲ್ಲಿ ಬದುಕಬೇಕು. **(64ನೇ ಪುಟಕ್ಕೆ)**

ಹಳ್ಳಿಯಿಂದ ದಿಲ್ಲಿಗೆ ರೈತರ ಹೆಜ್ಜೆ...

ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರ ವಿರೋಧದ ನಡುವೆಯೂ ರಾಜ್ಯಸಭೆಯಲ್ಲಿ ರೈತ ಮಸೂದೆಯನ್ನು ಮಂಡಿಸಿದೆ. ಈ ಮಸೂದೆಯನ್ನು ವಿರೋಧಿಸಿ ದೇಶದಾದ್ಯಂತ ಭಾರೀ ಪ್ರತಿಭಟನೆ ನಡೆಯುತ್ತಿದ್ದು, ಸರ್ಕಾರ ಮಾತ್ರ ರೈತರ ನೋವಿಗೆ ಸ್ಪಂದಿಸುವ ಗೋಜಿಗೂ ಹೋಗಿಲ್ಲ. ಅಂತಿಮವಾಗಿ ಇದರಲ್ಲಿ ಲಾಭ ಯಾರಿಗೆ ನಷ್ಟ ಯಾರಿಗೆ ಎಂಬುದರ ಬಗ್ಗೆ ಲೆಕ್ಕಾಚಾರ ಹಾಕಿದಾಗ ಕಾರ್ಪೊರೇಟ್ ಕಂಪೆನಿಗಳಿಗೆಯೇ ಹೊರತು ರೈತರು ಮತ್ತು ಸಾಮಾನ್ಯರಿಗಲ್ಲ. ಅಷ್ಟೇ ಅಲ್ಲ ಜನರಿಗೆ ಇದರಿಂದ ಭಾರೀ ನಷ್ಟ ಉಂಟಾಗಲಿದೆ ಎಂದು ಕೂಡ ತಜ್ಞರು ವಿಶ್ಲೇಷಿಸುತ್ತಾರೆ. ತಾನು ಬೆಳೆದ ಬೆಳೆಗೆ ತಾನೇ ಒಡೆಯನಾಗಿದ್ದ ರೈತ ಇನ್ನುಮುಂದೆ ಕಾರ್ಪೊರೇಟ್ ಕಂಪೆನಿಗಳ ಮಾಲಿಕರ ಮುಂದೆ ಗುಲಾಮರಂತೆ ಕೈ ಕಟ್ಟಿ ನಿಂತುಕೊಂಡು ಅವರು ನಿಗದಿ ಪಡಿಸಿದ ಬೆಲೆಯನ್ನು ಒಪ್ಪಿಕೊಂಡು ಬದುಕಬೇಕು ಅಷ್ಟೇ. ಈಗಾಗಲೇ ಮಂಡಿಸಿದ ಮಸೂದೆಯ ಪ್ರಕಾರ ರೈತ ತನ್ನ ಬೆಳೆಗೆ ತಾನು ಬೆಲೆಯನ್ನು ನಿಗದಿಪಡಿಸುವಂತಿಲ್ಲ ಎಂಬುದು ಅಂತಿಮ ಸತ್ಯ.

ಈಗಿನ ರೈತ ಪರ ಎನ್ನಲಾದ ಮಸೂದೆಯಲ್ಲಿ ರೈತರಿಗಿಂತ ಸಾಮಾನ್ಯ ಜನರಿಗೆ ಹೆಚ್ಚು ಪೆಟ್ಟು ಎಂಬುದರ ಬಗ್ಗೆ ಹೆಚ್ಚಿನವರಿಗೆ ಮಾಹಿತಿ ಇಲ್ಲದಂತಿದೆ. ಇದು ಒಂದು ರೀತಿಯಲ್ಲಿ ಡಿಜಿಟಲ್ ಆಹಾರಕ್ಕೆ ಪ್ರೋತ್ಸಾಹ ನೀಡಿದಂತೆ. ಬರೀ ನೀಡುವುದು ಮಾತ್ರವಲ್ಲ ನಾವೆಲ್ಲರೂ ಭವಿಷ್ಯದಲ್ಲಿ ಅದಕ್ಕೆ ಮೊರೆ ಹೋಗಬೇಕಾದ ಪರಿಸ್ಥಿತಿಯೂ ನಿರ್ಮಾಣವಾಗುತ್ತೆ. ವಿದೇಶದಲ್ಲಿ ಜನರು 'ಫ್ರೋಝನ್ ಫುಡ್' ತಿಂದು ಬದುಕುವಂತೆ ಇಲ್ಲೂ ನಾವು ದುಬಾರಿ ಬೆಲೆ ತೆತ್ತು ಪ್ಯಾಕ್ ಮಾಡಿರೋ ಆಹಾರವನ್ನು ಸೇವಿಸಬೇಕು. ಬೀದಿ ವ್ಯಾಪಾರಿಗಳನ್ನು ಓಡಿಸುವ ಪ್ರಕ್ರಿಯೆಗಳು ಈಗಾಗಲೇ ದೇಶದಾದ್ಯಂತ ನಡೀತಿದೆ. ಎಲ್ಲೂ ಸಣ್ಣ ವ್ಯಾಪಾರಸ್ಥರು, ಬೀದಿ ವ್ಯಾಪಾರಸ್ಥರನ್ನು ಮೇಲೆ ಬರಲು ಈ ಸರ್ಕಾರ ಬಿಡುತ್ತಿಲ್ಲ... ಕಾರ್ಪೊರೇಟ್ ಕುಳಗಳನ್ನು ಸಾಕುವ ಬಹುದೊಡ್ಡ

■ ಸಲಾಮ್ ಸಮ್ಮಿ ■

ಜಾಲವಲ್ಲದೆ ಇದರಿಂದ ರೈತರಿಗೆ ನಯಾ ಪೈಸೆಯ ಲಾಭವಿಲ್ಲ.

ಈಗಾಗಲೇ ಜಿಎಸ್‌ಟಿ, ನೋಟ್ ಬ್ಯಾನ್, ಏರುತ್ತಿರುವ ತೈಲಗಳ ಬೆಲೆಯಿಂದ ಕಂಗೆಟ್ಟಿರುವ ರೈತರಿಗೆ, ಬಡ ಮತ್ತು ಮಧ್ಯಮ ವರ್ಗದವರಿಗೆ ಈ ಹೊಸ ರೈತ ಪರ ಎನ್ನಲಾದ ಮಸೂದೆಯಿಂದ ಬಹುದೊಡ್ಡ ಪೆಟ್ಟು ಕೊಟ್ಟಿದೆ ಮೋದಿ ಸರ್ಕಾರ. ಬಡವನ ರಕ್ತ ಹೀರಿ ಕುಡಿಯುತ್ತಿರುವ ಜಿಎಸ್‌ಟಿ ಈಗಾಗಲೇ ಕೋಟ್ಯಾಂತರ ಜನರ ಬದುಕಿನಲ್ಲಿ ಕತ್ತಲು ತರಿಸಿದೆ. 2014ರ ಚುನಾವಣೆಯ ಸಂದರ್ಭದಲ್ಲಿ "ಅಚ್ಛೇ ದಿನ್ ಆನೇ ವಾಲೇ ಹೈ" ಎನ್ನುತ್ತಾ ಜನರನ್ನು ಯಾಮಾರಿಸಿದ ಬಿಜೆಪಿ ಸರ್ಕಾರ ಅಚ್ಛೇ ದಿನ್ ಪದದ ಅಸಲಿ ವ್ಯಾಖ್ಯಾನ ಏನೆಂಬುದನ್ನು ತೋರಿಸಿಕೊಟ್ಟಿದೆ. ಮೊದಲೇ ದೇಶಿ ಉತ್ಪನ್ನ ಮಾರುಕಟ್ಟೆ ಕುಸಿದು ನಿರುದ್ಯೋಗ ಸಮಸ್ಯೆ ಹೆಚ್ಚಿರುವ ಈ ಸಂದರ್ಭದಲ್ಲಿ ಸರ್ಕಾರ ಸರ್ವಾಧಿಕಾರದ ಧೋರಣೆಯನ್ನು ತೋರುತ್ತಿದೆ.

ಕೊನೆಯದಾಗಿ ಸದ್ಯ ರಾಜ್ಯ ಸಭೆಯಲ್ಲಿ ಮಂಡಿಸಿರುವ ರೈತ ಪರ ಎನ್ನಲಾದ ಮಸೂದೆಯ ಕರಾಳ ಮುಖದಿಂದ ಹಲವಾರು ರೈತರು ಆತ್ಮಹತ್ಯೆ ಮಾಡಿಕೊಂಡರೆ ಇನ್ನು ಕೆಲವರು ರೈತರು ಎದೆ ಬಡಿದುಕೊಳ್ಳುತ್ತಾ ಪ್ರತಿಭಟನೆಯಲ್ಲಿ ನಿರತರಾಗಿದ್ದಾರೆ. ವಿಶೇಷವಾಗಿ ಪಂಜಾಬ್‌ನ ರೈತರು ಹಗಲು ರಾತ್ರಿಯೆನ್ನದೆ ರಸ್ತೆಯನ್ನು ತಡೆಗಟ್ಟಿ ನ್ಯಾಯಕ್ಕಾಗಿ ಕೂಗಾಡುತ್ತಿದ್ದಾರೆ. ಆದರೆ ಸರ್ಕಾರ ಮಾತ್ರ ಕಿವುಡರಂತೆ ವರ್ತಿಸಿ ಅಮಾನವೀಯ ವರ್ತನೆಯನ್ನು ತೋರುತ್ತಿದೆ. ಈಗಾಗಲೇ ಮಂಡಿಸಿದ ಕಾಯಿದೆಯಿಂದಾಗಿ ಅದರ ವಹಿಸಿಕೊಂಡು ಮಾತಾಡುವವರಿಗೆ ಪ್ರಾರಂಭದಲ್ಲಿ ಅರ್ಥವಾಗಲಾರದು. ನೋಟ್ ಬ್ಯಾನ್, ಜಿಎಸ್‌ಟಿ, ಕಾಶ್ಮೀರಿ ವಿಷಯ, ಸ್ಥಳೀಯ ಬ್ಯಾಂಕ್‌ಗಳನ್ನು ರಾಷ್ಟ್ರೀಯ ಬ್ಯಾಂಕುಗಳೊಡನೆ ವಿಲೀನ, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಖಾಸಗೀಕರಣ ವಿಚಾರದಲ್ಲೂ ಪ್ರಾರಂಭದಲ್ಲಿ ಇದೇ ನಿಲುವನ್ನು ಹೊಂದಿದವರಿಗೆ ಪ್ರಾಯಶಃ ಮನವರಿಕೆಯಾಗಿ.

ಸರ್ಕಾರದ ಜನ ವಿರೋಧಿ ನೀತಿಯನ್ನು ಕುರುಡಾಗಿ ಬೆಂಬಲಿಸಿದ ಜನರಿಗೆ ಸ್ವತಃ ತಾವೇ ಅದಕ್ಕೆ ಬಲಿಯಾದಾಗಲಷ್ಟೇ ಅರಿವಿಗೆ ಬಂದಿದ್ದು. ಅಷ್ಟೊತ್ತಿಗಾಗಲೇ ಕಾಲ ಮಿಂಚಿ ಹೋಗಿತ್ತು. ಈಗಲೂ ಅಷ್ಟೇ ಸಾಮಾಜಿಕ ಜಾಲತಾಣದಲ್ಲಿ ಕೆಲವರು ಈ ಮಸೂದೆ ರೈತ ಪರವಾಗಿದೆ ಎಂದು ವಾದಿಸುತ್ತಿದ್ದಾರೆ. ಒಂದು ವರ್ಷವೇ ಸಾಕು ರೈತ ಪರ ಮಸೂದೆ ಅರಿವಾಗಲೂ. ಒಟ್ಟಿನಲ್ಲಿ ಸರ್ಕಾರಕ್ಕೆ ಜನರ ಹಿತಕ್ಕಿಂತ ಕಾರ್ಪೊರೇಟ್ ಕಂಪೆನಿಗಳ ಹಿತವೇ ಮುಖ್ಯ ಎಂಬುದು ಬಹಳ ಸ್ಪಷ್ಟವಾಗಿ ಪ್ರಧಾನಿ ಮೋದಿ ಸಂದೇಶ ರವಾನಿಸುತ್ತಿದ್ದಾರೆ. ಇವೆಲ್ಲವನ್ನೂ ಈ ದೇಶದ ಜನ ಮರೆಯಲಾರರು ಸಮಯ ಬಂದಾಗ ತಕ್ಕುದಾದ ಉತ್ತರವನ್ನೇ ನೀಡಲಿದ್ದಾರೆ ಎಂಬುದನ್ನೂ ಸರ್ಕಾರ ಗಮನದಲ್ಲಿಟ್ಟುಕೊಂಡಿರಬೇಕು... ■

ಹೊಸ ವರುಷಕ್ಕೆ ಹೊಸ ಕನಸುಗಳು

■ ಇರ್ಷಾದ್ ಮೂಡಬಿದ್ರಿ ■

ಕಹಿ ವರುಷ ಮುಗಿಯುತ್ತ ಹೊಸ ವರುಷ ಮತ್ತೆ ಬರುತ್ತಿದೆ. ಇನ್ನೂ ಸಮಸ್ಯೆ-ಸವಾಲುಗಳು ಮುಗಿದಿಲ್ಲ. ಆದರೆ ಎಲ್ಲವನ್ನೂ ಮೆಟ್ಟಿ ನಿಲ್ಲುವ ಧೈರ್ಯ ನಮ್ಮದು. ಈ ಬಾರಿ ಬದಲಾವಣೆ-ನೆಮ್ಮದಿಗೆ ಯಾವ ತಯಾರಿ? ಬನ್ನಿ ನಿಯಮ ಸಂಕಲ್ಪಗಳನ್ನು ಹಂಚಿಕೊಳ್ಳೋಣ.

-ಸಂಪಾದಕಿ

2020 ವಿದಾಯ ಹೇಳಿ ಮರೆಯಾಗುತ್ತಿದೆ. ಮತ್ತೊಂದು ಹೊಸ ವರುಷವು ಆಗಮಿಸುತ್ತಿದೆ. ಪ್ರತಿ ವರುಷವೂ ನಾವು ಹೊಸ ಹೊಸ ನಿರೀಕ್ಷೆ-ಯೋಜನೆಗಳನ್ನು ಹಾಕಿಕೊಳ್ಳುತ್ತೇವೆ. ಅದನ್ನು ಸಾಧಿಸಬೇಕು, ಇದನ್ನು ಗೆಲ್ಲ ಬೇಕು ಅನ್ನುವ ಕನಸುಗಳನ್ನು ಕಾಣು ತ್ತೇವೆ. ಆದರೆ ಅವು ನನಸು ಆಗುವುದು ನಮ್ಮ ಛಲ ಮತ್ತು ಪರಿಶ್ರಮವನ್ನು ಅವಲಂಬಿಸಿಕೊಂಡು ಇರುತ್ತದೆ.

ಕಳೆದ ವರುಷವೂ ನಾವು ಇಂತಹ ಆಲೋಚನೆಗಳ ಅಡಿಪಾಯವನ್ನು ಹಾಕಿ ಕೊಂಡೇ ಮೆಟ್ಟಿಲುಗಳನ್ನು ಏರಿದವರು. ಆದರೆ ಮಾರ್ಚ್ ತಿಂಗಳಲ್ಲಿ ಬೆನ್ನು ಹತ್ತಿದ ಕೊರೋನಾ ಎಂಬ ಮಹಾ ಮಾರಿಯೂ ನಮ್ಮ ಎಲ್ಲಾ ಯೋಜನೆ ಗಳನ್ನು ಬುಡಮೇಲು ಮಾಡಿತು. ದೇಶ-ವಿದೇಶಗಳಲ್ಲಿ ಲಕ್ಷಾಂತರ ಮಂದಿ ಉದ್ಯೋಗವನ್ನು ಕಳೆದುಕೊಂಡರು. ಶಾಲಾ-ಕಾಲೇಜುಗಳು ಮುಚ್ಚಿ ಮಕ್ಕಳು ಮನೆ ಸೇರಿದರು. ಮಂದಿರ-ಮಸೀದಿ-ಚರ್ಚುಗಳು ಬಾಗಿಲು ಹಾಕಿಕೊಂಡವು. ದಿನನಿತ್ಯ ದುಡಿಯುವ ಕೂಲಿ ಕಾರ್ಮಿಕರು ದಿಕ್ಕಾಪಾಲಾಗಿ ದರಿದ್ರರಾದರು. ಹಾರಾಡುವ ವಿಮಾನಗಳು ಧರೆಗಿಳಿದವು. ಕೆಲವು ರಾಷ್ಟ್ರಗಳು ಆರ್ಥಿಕ ಹಿನ್ನಡೆಯಲ್ಲಿ ದಿವಾಳಿ ಎದ್ದವು. ವಿಶ್ವದ ಎಲ್ಲಾ ಹತೋಟಿ ತನ್ನಲ್ಲಿದೆಯೆಂದು ಬೀಗುತ್ತಿದ್ದ ನಾಯಕರು, ಸೂತ್ರ ಕಡಿದ ದಾರದಂತೆ ಗೋತಾ ಹೊಡೆದವು. ಪುಟ್ಟ ವೈರಾಣುಗಳ ದಾಳಿಯನ್ನು ನಿಯಂತ್ರಿಸಲಾರದೆ ಕೈ ಕಟ್ಟಿ ಶರಣರಾದರು. ಸಾಮಾನ್ಯ ಮನುಷ್ಯ ರಂತೂ ತನ್ನ ಸುತ್ತಲಿನ ಸಾವು-ನೋವಿನ ಸುದ್ದಿಗಳನ್ನು ದಿನನಿತ್ಯ ಕೇಳುತ್ತಾ ಗಾಬರಿ ಬಿದ್ದರು.

ತಾನು ತೀರಿಕೊಂಡಾಗ ತನ್ನ

ಮುಖವನ್ನು ಬಂಧು–ಬಳಗವೂ ನೋಡದೆ ಅನಾಥರಾಗುವ ಸ್ಥಿತಿಯನ್ನು ಕಂಡು, ಇಂತಹ ಸಾವಿನಿಂದ ಬದುಕಿಸು ಎಂದು ದೇವರಿಗೆ ಮೊರೆ ಇಟ್ಟರು. ಮೂಗಿನ ವರೆಗೆ ಮಾಸ್ಕ್ ಏರಿಸಿಕೊಂಡ ಪ್ರತಿಯೊಬ್ಬರೂ ಉಸಿರಾಟಕ್ಕೂ ಏದುಸಿರು ಬಿಟ್ಟರು. ಅಧಿಕಾರ, ಅಂತಸ್ತು, ಹಣ, ಬಂಗಲೆ, ಕಾರು ಎಂದು ಅಹಂ ಪಡುತ್ತಿದ್ದ ಧನಿಕರು ಇವು ಯಾವುದೂ ಪ್ರಯೋಜನವಿಲ್ಲವೆಂದು ಮನಗೊಂಡರು. ಈ ಮಹಾಮಾರಿಯು ಇಡೀ ಮನುಷ್ಯ ಜನಾಂಗವನ್ನೇ ಬೆತ್ತಲೆ ಮಾಡಿ ಕೇಕೆ ಹಾಕಿತು.

ಅಂತೂ–ಇಂತೂ 2020ರ ಸರಾಸರಿ ತೀರಾ ಸಾದ ಲೆಕ್ಕಾಚಾರ ತೆಗೆದು ನೋಡಿದರೆ, ನಾವು ಬದುಕಿ ಉಳಿದಿರುವುದೇ ದೊಡ್ಡ ಸಾಧನೆ! ಅದೇ ನಮಗೆ ಸಿಕ್ಕ ದೊಡ್ಡ ಬೋನಸ್! ಈಗ ನಾವು ಮತ್ತೆ ಹೊಸ ವರುಷಕ್ಕೆ ಕಾಲಿಡುತ್ತಿದ್ದೇವೆ. ಈ ಮಹಾಮಾರಿಯು ಇನ್ನೂ ಮುಗಿದಿಲ್ಲ. ಜಗತ್ತು ಪೂರ್ಣವಾಗಿ ಚೇತರಿಸಿಕೊಂಡಿಲ್ಲ. ಆದರೂ ನಮಗೆ ಮುನ್ನಡೆಯುವ ಭರವಸೆ ವಿಶ್ವಾಸವಿದೆ. ಅಂತಹ ಯೋಜನೆಗಳಿಗೆ ಮತ್ತೆ ಕನಸಿನ ರೆಕ್ಕೆಗಳನ್ನು ಕಟ್ಟೋಣ. ಬನ್ನಿ ಒಂದಿಷ್ಟು ನಿಯಮಗಳನ್ನೂ ಪಾಲಿಸೋಣ. ಅದನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸುವ.

ಆರೋಗ್ಯ

ಮನುಷ್ಯನಿಗೆ ಆರೋಗ್ಯವು ಮುಖ್ಯ.

ಆರೋಗ್ಯವಿದ್ದರೆ ಸಂಸಾರ, ಬಂಧು–ಬಳಗ, ಸಂತೋಷ ಮತ್ತು ಸಮಾಜ. ಅದು ಇಲ್ಲದೆ ಹೋದರೆ ತಿನ್ನಲು ಬ್ರೆಡ್ಡು ಮತ್ತು ಮಲಗಲು ಬೆಡ್ಡು ಮಾತ್ರ ಖಾತರಿ. ಇದರಿಂದ ತಪ್ಪಿಸಿಕೊಳ್ಳಲು ನಾವು ಆರೋಗ್ಯವಾಗಿರಬೇಕು. ಅದಕ್ಕೆ ಮುಖ್ಯವಾಗಿ ಬಾಯಿಯ ಚಪಲ ಮತ್ತು ಮಾನಸಿಕ ಒತ್ತಡವನ್ನೂ ಕಡಿಮೆ ಮಾಡಬೇಕು. ನಮಗಾಗಿ ನಾವು ಮುಂಜಾನೆಯು ಒಂದು ತಾಸನ್ನು ಅಗತ್ಯವಾಗಿ ಮೀಸಲು ಇಡಬೇಕು. ಅದರಲ್ಲಿ ಕಡ್ಡಾಯವಾಗಿ ವ್ಯಾಯಾಮ, ಜಿಮ್ಮು, ಧ್ಯಾನ, ಪ್ರಾರ್ಥನೆ, ಯೋಗ ಇತ್ಯಾದಿ ಮಾಡಿಕೊಳ್ಳಬೇಕು. ಸದಾ ಸೂರ್ಯೋದಯಕ್ಕೆ ಮುನ್ನವೇ ಏಳುವ ಅಭ್ಯಾಸ ರೂಢಿಸಿಕೊಂಡು ನಿಗದಿತ ಕಾರ್ಯಕ್ರಮದಂತೆ ನಡೆಯಬೇಕು.



'ಸಮಯವಿಲ್ಲ', 'ಸಮಯ ಸಾಲದು' ಅನ್ನುವ ಕುಂಟು ನೆಪದಿಂದ ನುಣುಚಿಕೊಳ್ಳಬಾರದು.

ಸಾಧ್ಯವಾದರೆ ಈ ಸಲ ಆರೋಗ್ಯ ಪಾಲಿಸಿಯೊಂದನ್ನು (ಆರೋಗ್ಯ ಕಾರ್ಡು) (ಇಲ್ಲದಿದ್ದರೆ) ಅಗತ್ಯವಾಗಿ ಮಾಡಿಸಿಕೊಳ್ಳಿರಿ. ದಿಢೀರ್ ಆಗಿ ಕಾಣಿಸಿಕೊಳ್ಳುವ ಇಂತಹ ಮಹಾ ಮಾರಿಗಳಿಗೆ ಈ ಪಾಲಿಸಿಯು ನಿಮಗೆ ರಕ್ಷಣೆ ಒದಗಿಸಬಹುದು.

ಆಸ್ಪತ್ರೆಗಳಲ್ಲಿ ರಾಜಾರೋಷವಾಗಿ ಲಕ್ಷಾಂತರ ರೂಪಾಯಿಗಳನ್ನು ದೋಚುವ ಇಂದಿನ ದಿನಗಳಲ್ಲಿ ಈ ಪಾಲಿಸಿಯ ಕಂತುಗಳು ಒಂದಿಷ್ಟು ಸಮಾಧಾನ ನೀಡಬಹುದು. ಇನ್ನೊಬ್ಬರ ಎದುರು ಕೈಚಾಚುವ–ಸಾಲ ಕೇಳುವ ಸ್ಥಿತಿಯಿಂದ ಬಚಾವ್ ಮಾಡಬಹುದು. ಉಳಿದ ಇನ್ನಿತರ ಕಾಯಿಲೆಗಳಿಗೂ ಇವು ಸಹಾಯ ಮಾಡಬಹುದು.

ಕಾಸು-ಬಾಸು

ಕಾಸು ಕೈಯಲ್ಲಿದ್ದರೆ ನಾವು ಬಾಸು. ಹೀಗಾಗಿ ಹಣ ಅನ್ನುವುದು ಅತೀ ಅಗತ್ಯ. ಈ ಸಲದ ಕೊರೋನಾ ಮಹಾಮಾರಿಯು ಸ್ಥಿತಿ–ಗತಿಯನ್ನೂ ನಾವು ಹತ್ತಿರದಿಂದ ನೋಡಿದ್ದೇವೆ. ಹೀಗಾಗಿ ಮೊದಲಿನಂತೆ ದುಂದುವೆಚ್ಚಕ್ಕೆ ಶರಣಾಗಬಾರದು. ಎಲ್ಲಿ ಅಗತ್ಯವೋ ಅಲ್ಲಿ ಖರ್ಚು ಮಾಡಿ ಉಳಿದ ಹಣವನ್ನು ಜೋಪಾನವಾಗಿ ಕಾದಿರಿಸಿಕೊಳ್ಳಬೇಕು. ಅನಗತ್ಯ ಪಾರ್ಟಿ, ಅದ್ದೂರಿಯ ಮದುವೆ,

ಸಮಾರಂಭ, ಪಿಕ್‌ನಿಕ್, ದೇಶ–ವಿದೇಶಗಳ ಸುತ್ತಾಟ, ಹೊಸ ಕಾರು, ಲ್ಯಾಪ್‌ಟಾಪ್, ಮೊಬೈಲ್ ಮುಂತಾದ ಅಲೋಚನೆಗಳಿಗೆ ಸಾಧ್ಯವಾದಷ್ಟು ಕಡಿವಾಣ ಹಾಕಬೇಕು. ಹಣವಿದ್ದಾಗ ಇದನ್ನು ಮುಂದೆಯೂ ದೊರಕಿಸಿಕೊಳ್ಳಬಾರದು.

ನಮಗೆ ಬ್ಯಾಂಕಿನ ವ್ಯವಹಾರವು ಇಷ್ಟವಿಲ್ಲದಿದ್ದರೆ ಚಿನ್ನವೋ, ಆಭರಣವೋ, ಬಂಗಾರದ ಗಟ್ಟಿಯೋ ಮಾಡಿಸಿ ಇಡಿರಿ. ಮುಂದೆ ಅದಕ್ಕೆ ದುಪ್ಪಟ್ಟು ಬೆಲೆ ಬಂದಾಗ ಮಾರಬಹುದು ಅಥವಾ ಸಂಕಷ್ಟ ಬಂದಾಗ ಅದನ್ನು ಅಡವಿಟ್ಟು ಸಾಲವೂ ಪಡೆಯಬಹುದು. ಮನೆಯಲ್ಲಿ ಹೆಣ್ಣು ಮಕ್ಕಳು ಇದ್ದಲ್ಲಿ ಚಿನ್ನದ ಹೂಡಿಕೆ ಉತ್ತಮ ಯೋಜನೆ. ಈ ವರ್ಷ ಇದಕ್ಕೆ ಗಮನ ನೀಡಿರಿ. ಚಿನ್ನ ಯಾವತ್ತೂ ನಿಮ್ಮ ಕೈ ಬಿಡದು.

ನಿರಾಶೆ:

ನೀವು ಕಾಲೇಜು ಮುಗಿಸಿ, ಉದ್ಯೋಗ ದೊರೆಯದೆ ನಿರಾಶರಾದರೆ, ಗಲ್ಫ್‌ನಿಂದ ನೌಕರಿ ಕಳೆದು ಊರಿಗೆ ಹಿಂತಿರುಗಿ ಬಂದಿದ್ದರೆ, ಉದ್ಯಮ ಆರಂಭಿಸಿ ಕೈ ಸುಟ್ಟು ಕೊಂಡಿದ್ದರೆ ಹೆಚ್ಚು ಕೊರಗ ಬೇಡಿರಿ. "ನನ್ನ ಹಣೆ ಬರಹ", "ನಾನು ನಾಲಾಯಕ್" ಎಂದು ದುಃಖಿತರಾಗ ಬೇಡಿ. ಬದುಕಿನಲ್ಲಿ ಏನು ಆಗಬೇಕೆಂದು ನಿರ್ಣಯಿಸುವವನು ಸೃಷ್ಟಿಕರ್ತ. ಹೆಚ್ಚಿನ ಭಾರವನ್ನೂ ಆತನ ಮೇಲೆ ಹಾಕಿರಿ, ಉಳಿದ ನೈಜ ಪರಿಶ್ರಮ–ಪ್ರಯತ್ನ ವನ್ನು ನೀವು ಮಾಡುತ್ತಲೇ ಇರಿ. ಸದಾ ಸಕಾರಾತ್ಮಕವಾಗಿ ಯೋಚಿಸಿರಿ. ಭರವಸೆಯನ್ನು ಕಳೆದುಕೊಳ್ಳಬೇಡಿ. ಸಂಕೋಚ ಕೀಳರಿಮೆ, ಹಿಂಜರಿಕೆಗೆ ಬಲಿಯಾಗದಿರಿ. ಆತ್ಮಹತ್ಯೆಯ ಕುರಿತು ತಪ್ಪಿಯೂ ಚಿಂತಿಸಬೇಡಿ. ನಾವು ನಮ್ಮ ಬದುಕಿನ ಅಂತಿಮ ಮಾರ್ಗವಲ್ಲ. ದೇವನು ಇಚ್ಛಿಸಿದಾಗ ನಿಮ್ಮ ಬದುಕು ಬಂಗಾರ ವಾಗಬಹುದು. ಲೈಫ್ ಕಲರ್ ಫುಲ್ ಗೊಳ್ಳಲೂ ಬಹುದು. ಅದಕ್ಕೆ ಮುಖ್ಯ ವಾಗಿ ಮಾನಸಿಕ ಧೈರ್ಯ ಇರ ಬೇಕು. ಸವಾಲುಗಳನ್ನು ಎದುರಿಸುವ ಎದೆಗಾರಿಕೆಬೇಕು. ಇವತ್ತು ಕತ್ತಲೆ ಅಂದಾಗ

ನಾಳೆ ಬೆಳಕು ಬಂದೇ ಬರುತ್ತದೆ. ಆದರೆ ಅದನ್ನು ಕಾಯುವ ತಾಳ್ಮೆ ಬೇಕು. ತಾಳಿದವನು ಖಂಡಿತ ಬಾಳಿಯಾನು!

ಸಂಬಂಧ:

ಈ ಬದುಕು ಯಾವಾಗ– ಎಲ್ಲಿ ಕೈ ಕೊಡುತ್ತದೆಂಬೆಂದು ಯಾರಿಗೂ ತಿಳಿಯದು. ಕೊರೋನಾದಂತಹ ಮಹಾ ಮಾರಿಯು ಒಂದು ವರುಷದಲ್ಲಿ ಲಕ್ಷಾಂತರ ಮಂದಿಗಳ ಉಸಿರನ್ನೇ ನಿಲ್ಲಿಸಿದೆ. ನಮ್ಮ ನಡುವೆ ಇದ್ದ ಅದೆಷ್ಟು ಆತ್ಮೀಯರು–ಬಂಧುಗಳು ಈಗಾಗಲೇ ಕಣ್ಣು ಮುಚ್ಚಿದ್ದಾರೆ. ಹೀಗಾಗಿ ಈ ಬದುಕಿಗೆ ಗ್ಯಾರೆಂಟಿ ಅನ್ನುವುದಿಲ್ಲ. ಇರುವಷ್ಟು ದಿನ ನಮ್ಮ ಹೆಂಡತಿ–ಮಕ್ಕಳ ಜೊತೆಗೆ, ಹೆತ್ತವರ ಜೊತೆಗೆ ಸುಖವಾಗಿ ಕಳೆಯುವ. ಮನೆ ಮಂದಿ ಯೊಂದಿಗೆ ನಯ–ವಿನಯದಿಂದ ವರ್ತಿಸುವ. ನಮ್ಮ ದರ್ಪ, ಸಿಟ್ಟು, ಕೋಪ, ದುಗುಡ ಯಾರಿಗೂ ನೋವು–ದುಃಖ ತಾರದಿರಲಿ. ನಮ್ಮ ನೆಮ್ಮದಿ ಯಲ್ಲಿದ್ದು ಉಳಿದವರಿಗೂ ನೆಮ್ಮದಿಯನ್ನು ನೀಡೋಣ. ಉತ್ತಮ ಜೀವನ ನಡೆಸು ವುದು ಕೂಡ ಒಂದು ಕಲೆ. ಅದನ್ನು ಈ ವರುಷ ಚೆನ್ನಾಗಿ ರೂಢಿಸಿ ಕೊಳ್ಳೋಣ. ಇರುವ ಬದುಕು ಆನಂದದಿಂದ ಅನುಭವಿಸೋಣ.

ಈ ಬಾರಿ ದೂರವಾದ ಹಳೇ ಗೆಳೆಯರ ಜೊತೆಗೆ ಚದುರಿದ ಸಂಬಂಧ ಗಳ ಜೊತೆಗೆ ನಿಕಟ ಸಂಬಂಧವನ್ನೂ ಬೆಳೆಸಿಕೊಳ್ಳೋಣ. ಮುರಿದು ಹೋದ ಸಂಬಂಧವನ್ನು ಹತ್ತಿರ ತರೋಣ. ಅವರ ಯಾವುದೇ ದ್ವೇಷ–ಹಗೆತನ ಮರೆತು ಬಿಡೋಣ. ಅವರ ಶುಭ ಸಮಾರಂಭಕ್ಕೆ, ಹಾಜರಿ ಆಗೋಣ. ಆಗಾಗ ಅವ ರೊಂದಿಗೆ ದೂರವಾಣಿಯಲ್ಲಿ ಮಾತ ನಾಡಿ ಸಂಪರ್ಕ ಇಟ್ಟುಕೊಳ್ಳೋಣ. ರಜೆಯಲ್ಲಿ ನಮ್ಮ ಮಕ್ಕಳ ಜೊತೆಗೆ ಅವರ ಮನೆಗೆ ಭೇಟಿ ನೀಡೋಣ. ನಮ್ಮ ಮಕ್ಕಳಿಗೂ ಅವರ ಸ್ನೇಹ– ಸಂಬಂಧದ ಸಂಪರ್ಕ ಬೆಳೆಯಲಿ. ಗಟ್ಟಿಯಾಗಲಿ. ಮಕ್ಕಳ ಕೈಯಲ್ಲಿ ಮೊಬೈಲು, ಟಿವಿ, ಕಂಪ್ಯೂಟರ್ ಏನೇ ಇರಲಿ. ಹಾಗೆ ಸಂಬಂಧದ ಸಂಪರ್ಕವೂ ಇರಲಿ. ಅವರ ಬದುಕಿಗೆ ಕೇವಲ ಓದು, ಟ್ಯೂಷನ್, ರ್‍ಯಾಂಕ್ ಮಾತ್ರ ಮುಖ್ಯವಲ್ಲ. ಈ ಸಂಬಂಧವೂ ಅಷ್ಟೇ ಮುಖ್ಯ. ಅದು ನಿಜವಾದ ನೆಟ್‌ವರ್ಕ್.

ಸಾಮರಸ್ಯ:

ಇವತ್ತು ನಮ್ಮ ಸುತ್ತಲಿನ ರಾಜ ಕೀಯ ವಲಯವು ಜಾತಿ–ಧರ್ಮಗಳ ನಡುವೆ ವಿಷ ಬೀಜ ಬಿತ್ತಿ, ಮತದ ರೂಪದಲ್ಲಿ ಅದರ ಫಲ ಪಡೆಯುತ್ತಿದೆ. ರಾಜಕಾರಣಿಗಳ ಈ ಕುತಂತ್ರವನ್ನು ತಿಳಿದಿದ್ದರೂ ಜನರು ಜಾಗೃತವಾಗುತ್ತಿಲ್ಲ. ಇದು ನಮ್ಮ ಸಮಾಜಕ್ಕೆ ಅತೀ ದೊಡ್ಡ ಕಂಟಕ. ಅವರು ಕಟ್ಟುವ ಧಾರ್ಮಿಕ ಅಡ್ಡ ಗೋಡೆಗಳು ನಮ್ಮ ಸಹಬಾಳ್ವೆ ಯನ್ನೇ ನಾಶಪಡಿಸುತ್ತಿದೆ.

ಇವತ್ತು ನಾವು ಈ ಗೋಡೆಗಳನ್ನೂ ಕೆಡವಿ ಹಾಕುವ ಪ್ರಯತ್ನ ಮಾಡಬೇಕು.

ಅದಕ್ಕಾಗಿ ನಾವು ನಮ್ಮ ಸಹೋದ್ಯೋಗಿಗಳ ಜೊತೆಗೆ ಅನ್ಯ ಧರ್ಮೀಯರ ನೆರೆಹೊರೆಯವರಲ್ಲಿ ಉತ್ತಮ ಬಾಂಧವ್ಯವನ್ನು ಇಟ್ಟುಕೊಳ್ಳಬೇಕು. ಅವರ ಶುಭ ಕಾರ್ಯ ಕ್ರಮವೇ ಆಗಲಿ, ಸಂತಾಪಗಳ ದಿನಗಳೇ ಆಗಲಿ, ಹೆಗಲಿಗೆ ಹೆಗಲು ನೀಡಬೇಕು. ಅವರ ಸುಖ–ದುಃಖಗಳನ್ನು ಪರಸ್ಪರ ಹಂಚಿಕೊಳ್ಳಬೇಕು. ದ್ವೇಷ ಹರಡಿಸುವರನ್ನು ತಡೆದು ಅವರಿಗೆ ತಿಳಿ ಹೇಳಬೇಕು. ಸಾಮಾಜಿಕ ಜಾಲತಾಣಗಳಲ್ಲಿ ಕಿಡಿ ಕಾರುವವರನ್ನು ಹುಡುಕಿ ಸರಿದಾರಿಗೆ ತರಬೇಕು. ಊರಿನಲ್ಲಿ ಯಾವುದೇ ಘಟನೆ ಜರುಗಿದರೂ, ಅದಕ್ಕೆ ಕೋಮುವಾದ ಬಣ್ಣ ಹಚ್ಚಬಾರದು. ಇದು ದೊಡ್ಡ ಅಪಾಯಕಾರಿ. ತಪ್ಪು ಯಾರೇ ಮಾಡಿರಲಿ, ಅದನ್ನು ಹಿರಿಯರ ಸಮಕ್ಷಮದಲ್ಲಿ ಸಮಯೋಚಿತ ಬಗೆ ಹರಿಸಬೇಕು. ಯಾವುದೇ ಭಾವೋದ್ವೇಗಕ್ಕೆ ಒಳಪಡಬಾರದು.

ನಮ್ಮ ಬದುಕು ಸಮಾಜಮುಖಿಯಾಗಲಿ. ನಮ್ಮಿಂದ ನಾವು ಸಮಾಜಕ್ಕೆ ಯಾವುದಾದರೂ ಕೊಡುಗೆಯನ್ನು ನೀಡುತ್ತಲೇ ಇರೋಣ. ಅದು ನಮ್ಮ ಆರ್ಥಿಕ ಇತಿ–ಮಿತಿಯಲ್ಲಿ ಇದ್ದರೂ ಸಾಕು. ಉದಾಹರಣೆಗೆ ಶಾಲಾ ಕಟ್ಟಡದ ದುರಸ್ಥಿಗೆ ಸಹಾಯ, ರೋಗಿಯ ಚಿಕಿತ್ಸೆಗೆ ಧನ ಸಹಾಯ, ಬಡ ವಿದ್ಯಾರ್ಥಿಯ ಶಾಲಾ ಫೀಸು, ಚಳಿಯಲ್ಲಿ ನಡುಗುವ ಭಿಕ್ಷುಕನಿಗೆ ಬೆಚ್ಚಗೆಯ ಕಂಬಳಿ... ಇತ್ಯಾದಿ ಇತ್ಯಾದಿ.

ಸಾಧ್ಯವಾದರೆ ಇಂತಹ ಸಣ್ಣ–ಪುಟ್ಟ ಸಹಾಯವನ್ನು ಈ ವರುಷ ಅತೀ ಹೆಚ್ಚು ಮಾಡಿರಿ. ಏಕೆಂದರೆ ಮಾಹಾಮಾರಿಯ ಸಂಕಷ್ಟದಲ್ಲಿ ಅನೇಕ ಮಂದಿ ಸಿಲುಕಿಕೊಂಡಿದ್ದಾರೆ. ನಿಮ್ಮ ಶ್ರೀಮಂತಿಕೆಯು ಇನ್ನೊಬ್ಬರ ಕಣ್ಣೀರು ಒರೆಸಲು ಸಹಾಯವಾದರೆ ಅದು ಸಮಾಜಕ್ಕೆ ದೊಡ್ಡ ಕೊಡುಗೆ. ಅದರಿಂದ ಸಿಗುವ ಸಂತೃಪ್ತಿ–ಆನಂದವೇ ವಿಶೇಷ–ಪ್ರಯತ್ನಿಸಿ ನೋಡಿರಿ.

ಕೊನೆಯದಾಗಿ ಹೇಳುವುದಾದರೆ, ಕಳೆದ ವರುಷದಂತೆ ಈ ವರುಷವೂ ನೀವು ಮೊಬೈಲು, ಫೋನು, ಫೇಸ್ಬುಕ್, ವಾಟ್ಸಾಪ್‌ಗಳಲ್ಲಿ ಗಾಢವಾಗಿ ಮುಳುಗಿ ಹೋಗಬೇಡಿ. ಅಮೂಲ್ಯ ಸಮಯವನ್ನೂ ಅನಗತ್ಯವಾಗಿ ಕೊಲ್ಲಬೇಡಿ. ಅದು ಆರೋಗ್ಯಕ್ಕೂ ಹಿತಕರವಲ್ಲ. ಸಂಪರ್ಕ ಸೇತುಗಳ ಬಳಕೆ ಎಷ್ಟು ಅಗತ್ಯವೋ ಅಷ್ಟೇ ಬಳಸಿರಿ. ಇದರ ಬದಲು ಉಳಿದ ಸಮಯವನ್ನು ಕ್ರಿಯಾಶೀಲ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಿರಿ. ಪತ್ರಿಕೆ–ಪುಸ್ತಕಗಳನ್ನು ಆಸಕ್ತಿಯಿಂದ ಓದಿರಿ. ಸಮಾಜ ಸೇವೆಯಲ್ಲಿ ಸಹಭಾಗಿಯಾಗಿರಿ. ನಿಮ್ಮಲ್ಲಿ ಉತ್ತಮ ಪ್ರತಿಭೆ ಇದ್ದರೆ ಅದನ್ನು ಪ್ರಪಂಚಕ್ಕೆ ತೋರಿಸಿರಿ. ಆ ಸಾಧನೆಯಲ್ಲಿ ಯಶಸ್ವಿಯಾಗಿರಿ. ವರ್ಷ ವಿಡೀ ನಿಮ್ಮ ಉತ್ಸಾಹ–ಸಂತೋಷ, ಮಂದಹಾಸ, ಲವಲವಿಕೆ ಬತ್ತದಂತೆ ನೋಡಿಕೊಳ್ಳಿರಿ. ಹೊಸ ವರುಷ ಎಲ್ಲರಿಗೂ ಶುಭ ತರಲಿ. ■

"ನಿಮ್ಮ ಮಕ್ಕಳನ್ನು ಬಡತನದ ಭೀತಿಯಿಂದ ಕೊಲ್ಲಬೇಡಿರಿ. ನಾವು ಅವರಿಗೂ ಆಹಾರ ನೀಡುವೆವು. ನಿಮಗೂ ನೀಡುವೆವು. ವಾಸ್ತವದಲ್ಲಿ ಅವರ ವಧೆಯು ಒಚಿದು ಘೋರ ಅಪರಾಧವಾಗಿದೆ. ಅಲ್ಲಾಹನು ಸನ್ಮಾನಿಸಿರುವ ಜೀವವನ್ನು ನ್ಯಾಯದಿಂದಲ್ಲದೆ ಹರಣ ಮಾಡಬೇಡಿರಿ." [ಪವಿತ್ರ ಕುರ್‌ಆನ್, 17: 31]

With best compliments from:

9900900172
6363744602

T. VAZEER AHMED

V. GINGER TRADERS

K.M. Koppal, Soraba, Shimogga Dist. 577429

WHOLESALE & RETAIL DEALERS FOR

❖ GINGER ❖ TURMERIC ❖ CASHEW NUT ❖ SOAP NUTS

ಪ್ರತಿಷ್ಠಿತ 'ಟೈಮ್' ಮ್ಯಾಗಜಿನ್ ನೀಡುತ್ತಿರುವ 'ಕಿಡ್ ಆಫ್ ದಿ ಇಯರ್' ಗೌರವಕ್ಕೆ ಪಾತ್ರಳಾದ ಇಂಡಿಯನ್-ಅಮೆರಿಕನ್ ಬಾಲೆ ಗೀತಾಂಜಲಿ ರಾವ್, ಬಹುಮುಖ ಪ್ರತಿಭಾವಂತೆ. 99

ಸೈಂಟಿಸ್ಟ್ ಸೂಪರ್ ಹೀರೋ

ಮಲ್ಲಿಕಾರ್ಜುನ ತಿಪ್ಪಾರ

ಅಮೆರಿಕದಲ್ಲಿರುವ ಭಾರತೀಯ ಸಮುದಾಯವು ಎರಡು ಹೆಮ್ಮೆಯ ಕ್ಷಣಗಳಿಗೆ ಸಾಕ್ಷಿಯಾಗುತ್ತಿದೆ. ಭಾರತೀಯ ಮೂಲದ ಕಮಲಾ ಹ್ಯಾರಿಸ್ ಅಮೆರಿಕದ ಉಪಾಧ್ಯಕ್ಷರಾಗುವ ಮೂಲಕ ಇತಿಹಾಸ ಸೃಷ್ಟಿಸಿದರೆ, ಪ್ರತಿಷ್ಠಿತ 'ಟೈಮ್' ಮ್ಯಾಗಜಿನ್ ಇದೇ ಮೊದಲ ಬಾರಿಗೆ ನೀಡುತ್ತಿರುವ 'ಕಿಡ್ಸ್ ಆಫ್ ದಿ ಇಯರ್' ಗೌರವಕ್ಕೆ ಇಂಡಿಯನ್–ಅಮೆರಿಕನ್ ಬಾಲೆ, 15ರ ಹರೆಯದ ಗೀತಾಂಜಲಿ ರಾವ್ ಅವರನ್ನು ಆಯ್ಕೆ ಮಾಡಿದೆ. ಈ ಬಾಲೆ ಮಂಗಳೂರು ಮೂಲದವಳು ಎನ್ನುವುದು ಕನ್ನಡಿಗರಾಗಿ ನಮಗೆ ಮತ್ತೊಂದು ಹೆಮ್ಮೆಯ ಕೋಡು!

ಗೀತಾಂಜಲಿ ರಾವ್ ಪ್ರತಿಭೆ ಯಾವುದೇ ಒಂದಕ್ಕೆ ಸೀಮಿತವಾಗಿಲ್ಲ. ಆಕೆ ಸಂಶೋಧಕಿ, ವಿಜ್ಞಾನಿ, ಫೆನ್ಸರ್, ಡ್ಯಾನ್ಸರ್, ಸಿಂಗರ್, ಬೇಕರ್, ಟೆಡ್ ಸ್ಪೀಕರ್... ಹೀಗೆ ಪಟ್ಟಿ ಬೆಳೆಯುತ್ತದೆ. ಅಮೆರಿಕದ ಕೊಲೊರಡೊದ ಡೆನೆವರ್‌ನಲ್ಲಿ ವಾಸವಾಗಿರುವ ಗೀತಾಂಜಲಿ 'ಟೈಮ್' ಮುಖಪುಟದಲ್ಲಿ ರಾರಾಜಿಸುವ ಖುಷಿಯ ಕ್ಷಣ ಸಲೀಸಾಗಿ ಸಿಕ್ಕಿದಲ್ಲ. ಅಮೆರಿಕದ ಐದು ಸಾವಿರಕ್ಕೂ ಹೆಚ್ಚು ಸ್ಪರ್ಧಾರ್ಥಿಗಳನ್ನು ಹಿಂದಿಕ್ಕಿ ಗೆದ್ದಿದ್ದಾಳೆ ಮತ್ತು ಈ ಗೌರವಕ್ಕೆ ಯಾವುದೇ ದೃಷ್ಟಿಯಿಂದ ನೋಡಿದರೂ ಆಕೆ ಸೂಕ್ತ ಆಯ್ಕೆಯೂ ಹೌದು.

ಹಾಲಿವುಡ್‌ನ ಖ್ಯಾತ ನಟಿ ಎಂಜೆಲಿನಾ ಜೋಲಿ ಅವರು ಗೀತಾಂಜಲಿ ರಾವ್ ಅವರನ್ನು ಸಂದರ್ಶಿಸಿದ್ದು, ಅದರಲ್ಲಿ ಆಕೆ ತನ್ನ ಈ ಗುರಿ, ಮುಂದಿನ ಯೋಜನೆಗಳು, ಹಲವು ಸಂಶೋಧನೆಗಳಿಗೆ ಕಾರಣವಾದ ಸಂಗತಿಗಳು, ಸ್ಫೂರ್ತಿ ನೀಡಿದ ನಾಯಕರು, ಸಾಗಬೇಕಿರುವ ದಾರಿ... ಹೀಗೆ – ಮಾತುಗಳನ್ನು ಹರವಿಟ್ಟಿದ್ದಾಳೆ. ಗೀತಾಂಜಲಿಯ ಸಾಧನೆಗೆ ಆಕೆಯ ತಂದೆ ರಾಮ್ ರಾವ್ ಮತ್ತು ತಾಯಿ ಭಾರತಿ ಅವರ ಸಂಪೂರ್ಣ ಬೆಂಬಲವೂ ಇದೆ. ಯಾವುದೇ ಮಕ್ಕಳು ಹೊಸದಕ್ಕೆ ತುಡಿದಾಗ ಅದಕ್ಕೆ ಪೋಷಕರು ಅಗತ್ಯ ಬೆಂಬಲ ನೀಡಿದರೆ ಅದ್ಭುತ ಸೃಷ್ಟಿಯಾಗುತ್ತದೆ ಎಂಬುದಕ್ಕೆ ಗೀತಾಂಜಲಿ ಉದಾಹರಣೆ.

ಚಿಕ್ಕ ವಯಸ್ಸಾದರೂ ಆಕೆಯಲ್ಲಿರುವ ವಿಚಾರ ಸ್ಪಷ್ಟತೆ, ನಿರ್ದಿಷ್ಟ ಗುರಿಯೆಡೆಗಿನ ಬದ್ಧತೆ ನಿಮ್ಮನ್ನು ವಿಸ್ಮಯಗೊಳಿಸುತ್ತದೆ. ವಯಸ್ಸಿಗೆ ಮೀರಿದ ಯೋಚನಾ ಸರಣಿ ಹಾಗೂ ಸಮಾಜಕ್ಕೆ ಏನಾದರೂ ಕೊಡಬೇಕು ಎನ್ನುವ ತುಡಿತವೇ ಆಕೆಯ ಸಂಶೋಧನೆ, ಆವಿಷ್ಕಾರಗಳಿಗೆ ಕಾರಣವಾಗಿದೆ.

ಕುಡಿಯುವ ನೀರಿನಲ್ಲಿ ಅಪಾಯಕಾರಿ ಮಟ್ಟದಲ್ಲಿದ್ದ ಸೀಸದ ಸಮಸ್ಯೆಯನ್ನು ಅಮೆರಿಕದ ಮಿಶಿಗನ್, ಫಿಂಟ್ ವಾಸಿಗಳು ಎದುರಿಸುತ್ತಿದ್ದರು. ಈ ಸಮಸ್ಯೆಗೆ ಪರಿಹಾರ ಯೋಚಿಸಿದ ಗೀತಾಂಜಲಿ, 'ಟೆಥಿಸ್' ಎಂಬ ಸಾಧನವನ್ನು ಅಭಿವೃದ್ಧಿ ಪಡಿಸಿದಳು. ಇದು ಕಾರ್ಬನ್ ನ್ಯಾನೋಟ್ಯೂಬ್ ಆಗಿದ್ದು, ನೀರಿನಲ್ಲಿರುವ ಸೀಸದ ಪ್ರಮಾಣ ಎಷ್ಟಿದೆ ಎಂಬುದನ್ನು ಪತ್ತೆ ಹಚ್ಚಿ ಕುಡಿಯಲು ನೀರು ಯೋಗ್ಯವಾಗಿದೆಯೇ ಎಂಬುದನ್ನು ಸುರಕ್ಷಿತ, ಸ್ವಲ್ಪ ಕಲುಷಿತ ಮತ್ತು ಯೋಗ್ಯವಲ್ಲ ಎಂದು ವಿಂಗಡಿಸಿ ಮಾಹಿತಿಯನ್ನು ಸ್ಮಾರ್ಟ್ ಫೋನ್‌ನ ಆ್ಯಪ್‌ಗೆ ರವಾನಿಸುತ್ತದೆ. ಈ ಸಾಧನ ಆಕೆಗೆ 2017ರಲ್ಲಿ ಡಿಸ್ಕವರಿ ಎಜುಕೇಷನ್ 3ಎಂ ಯಂಗ್ ಸೈಂಟಿಸ್ಟ್ ಚಾಲೆಂಜ್ ಗೆಲ್ಲಲು ಅವಕಾಶ ಕಲ್ಪಿಸಿತು. ಕೈಂಡ್ಲೀ(Kindly) ಎನ್ನುವ ಆ್ಯಪ್ ಅನ್ನು ಗೀತಾಂಜಲಿ ಅಭಿವೃದ್ಧಿಪಡಿಸಿದ್ದಾಳೆ. ಕೃತಕ ಬುದ್ಧಿಮತ್ತೆ (ಎಐ) ಆಧರಿತ ಈ ಆ್ಯಪ್ ಸೈಬರ್‌ಬುಲ್ಲಿ ಚಟುವಟಿಕೆಯನ್ನು ಪತ್ತೆ ಹಚ್ಚುತ್ತದೆ. ಗೀತಾಂಜಲಿಯ ಮತ್ತೊಂದು ಆವಿಷ್ಕಾರವು ಹ್ಯೂಮನ್ ಜೆನೆಟಿಕ್ಸ್ (ಮಾನವ ತಳಿಶಾಸ್ತ್ರ) ಸಂಬಂಧಿಸಿದ್ದು ಮತ್ತು ಮಾದಕ ವ್ಯಸನಿಯಾಗುವುದನ್ನು ಪತ್ತೆ ಹಚ್ಚುತ್ತದೆ.

ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಗಣಿತ(ಸ್ಟೆಮ್)ನಲ್ಲಿ ಅಪಾರ ನಂಬಿಕೆ ಹೊಂದಿರುವ ಗೀತಾಂಜಲಿ, ಸ್ಟೆಮ್ ಸಂಸ್ಥೆಗಳಲ್ಲಿರುವ ಹುಡುಗಿಯರು, ಸ್ಕೂಲ್ ವಿದ್ಯಾರ್ಥಿಗಳು, ಶಾಂಘೈ ಇಂಟರ್‌ನ್ಯಾಷನಲ್ ಯೂಥ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ ಗ್ರೂಪ್, ಲಂಡನ್‌ನ ರಾಯಲ್ ಅಕಾಡೆಮಿ ಆಫ್ ಎಂಜನಿಯರಿಂಗ್ ಸಂಸ್ಥೆಗಳಲ್ಲಿ ನಾವೀನ್ಯತಾ ಕಾರ್ಯಾಗಾರಗಳನ್ನು ಮಾಡುವುದನ್ನು ಇಷ್ಟಪಡುತ್ತಾಳೆ. ವಾರಾಂತ್ಯದಲ್ಲಿ ಈ ಕ್ಲಾಸುಗಳಿಗೆ ಜಗತ್ತಿನಾದ್ಯಂತ 28 ಸಾವಿರಕ್ಕೂ ಹೆಚ್ಚು ಪೂರ್ವ ಪ್ರಾಥಮಿಕ, ಪ್ರಾಥಮಿಕ, ಹೈಸ್ಕೂಲು ವಿದ್ಯಾರ್ಥಿಗಳು ಪಾಲ್ಗೊಳ್ಳುತ್ತಾರೆ ಮತ್ತು ಗೀತಾಂಜಲಿ ತಾನು ಕಂಡುಕೊಂಡ ಪ್ರಕ್ರಿಯೆ ಹಾಗೂ ಸಾಧನಗಳ ಬಗ್ಗೆ ಮಾಹಿತಿ ನೀಡುತ್ತಾಳೆ.

"ಪ್ರತಿ ಸಮಸ್ಯೆಗೂ ಪರಿಹಾರ ಕಂಡುಕೊಳ್ಳಲು ಹೋಗಬಾರದು. ನಿಮ್ಮನ್ನು ಪ್ರಚೋದಿಸುವ ಸಮಸ್ಯೆಯೊಂದರ ಮೇಲೆ ಮಾತ್ರವೇ ಗಮನ ಕೇಂದ್ರೀಕರಿಸಿ. ಒಂದು ವೇಳೆ ಇಷ್ಟೆಲ್ಲ ಮಾಡಲು ನನಗೆ ಸಾಧ್ಯವಾಗಿದ್ದರೆ, ಯಾರಾದರೂ ಇದನ್ನು ಮಾಡಬಹುದಲ್ಲವೇ" ಎನ್ನುತ್ತಾ ಇತರರನ್ನು ಹುರಿದುಂಬಿಸುವ ಔದಾರ್ಯ ಗೀತಾಂಜಲಿಗಿದೆ. "ಇಷ್ಟು ಚಿಕ್ಕ ವಯಸ್ಸಿನಲ್ಲೇ ದೊಡ್ಡ ಸಾಧನೆ ಮಾಡಿದ್ದೀಯಲ್ಲ ನಿನಗೆ ಯಾರು ಸ್ಫೂರ್ತಿ?" ಎಂದು ಕೇಳಿದರೆ, ಮೇರಿ ಕ್ಯೂರಿ ತನ್ನ ಅತಿದೊಡ್ಡ ಸ್ಫೂರ್ತಿ ಎನ್ನುತ್ತಾಳೆ ಬಟ್ಟಲು ಕಂಗಳ ಗೀತಾಂಜಲಿ. ಜೊತೆಗೆ, ತಂದೆ ತಾಯಿ, ಭಾರತದಲ್ಲಿರುವ ಕುಟುಂಬದ ಸದಸ್ಯರ ಬೆಂಬಲವನ್ನು ಸ್ಮರಿಸುತ್ತಾಳೆ, ಫ್ರೆಂಚ್

ಪ್ರಾಧ್ಯಾಪಕ ಮತ್ತು ಮೈಕ್ರೋ ಬಯಾಲಜಿ, ಜೆನೆಟಿಕ್ಸ್ ಮತ್ತು ಬಯೋಕೆಮಿಸ್ಟ್ರಿ ಸಂಶೋಧಕ ಎಮ್ಮಾನುಯೆಲ್ ಮೇರಿ ಚಾರ್ಪೆಂಟಿಯರ್ ಮತ್ತು ಅಮೆರಿಕದ ಜೀವ ರಾಸಾಯನಿಕ ವಿಜ್ಞಾನಿ ಜೆನ್ನಿಫರ್ ಆನ್ ಡೌಡನಾ ಗೀತಾಂಜಲಿ ಮೇಲೆ ಬಹಳಷ್ಟು ಪ್ರಭಾವ ಬೀರಿದ್ದಾರೆ.

ಜಗತ್ತಿನ ಹಲವು ಮಕ್ಕಳಿಗೆ 'ರೋಲ್ ಮಾಡೆಲ್' ಆಗಿರುವ ಗೀತಾಂಜಲಿ ಭಾರತದ ಇಂದಿರಾ ಗಾಂಧಿ ಎಂದರೆ ಅಚ್ಚುಮೆಚ್ಚು ಮತ್ತು ಸ್ಫೂರ್ತಿಯ ಸೆಲೆ. "ಭಾರತದಲ್ಲಿ ನನಗೆ ಸ್ಫೂರ್ತಿದಾಯಕ ವ್ಯಕ್ತಿ ಎಂದರೆ ಇಂದಿರಾ ಗಾಂಧಿ, ಇಂದಿರಾ ಬರ್ತ್‌ಡೇ ದಿನವೇ ನನ್ನದು ಕೂಡ" ಎನ್ನುತ್ತಾಳೆ ಗೀತಾಂಜಲಿ. ಇಂದಿರಾ ಅವರ ಕೆಲಸ, ತೋರಿದ ದಿಟ್ಟ ನಾಯಕತ್ವದ ಬಗ್ಗೆ ಅಪಾರ ಮೆಚ್ಚುಗೆ, ಅವರು ಸಾಗಿದ ದಾರಿಯಲ್ಲೇ ಸಾಗಿ, ಅವರಷ್ಟೇ ಶಕ್ತಿಶಾಲಿ ವ್ಯಕ್ತಿತ್ವ ರೂಪಿಸಿಕೊಳ್ಳುವ ಇಂಗಿತ ಹೊರ ಹಾಕುತ್ತಾಳೆ. ಇಂದಿರಾ ಹೊರತು ಪಡಿಸಿ, ನಟ ಶಾರುಖ್ ಖಾನ್ ಬಗ್ಗೆಯೂ ಗೀತಾಂಜಲಿಗೆ ಅಭಿಮಾನವಿದೆ. ತಾನು ಈವರೆಗೆ ಭೇಟಿ ಮಾಡಿದವರ ಪೈಕಿ ಅತ್ಯಂತ ನಿಸ್ವಾರ್ಥ ವ್ಯಕ್ತಿ ಎಂದು 'ಕಿಂಗ್ ಖಾನ್'ರನ್ನು ಶ್ಲಾಘಿಸುತ್ತಾಳೆ. ಶಾರುಖ್ ನಡೆಸಿಕೊಟ್ಟ ಟೆಡ್ ಟಾಕ್‌ನಲ್ಲೂ ಗೀತಾಂಜಲಿ ಮಾತನಾಡಿದ ಅನುಭವವನ್ನು ನೆನಪಿಸಿಕೊಳ್ಳುತ್ತಾಳೆ. ಹಾಲಿವುಡ್‌ನಲ್ಲೂ ಹೆಸರು ಮಾಡುತ್ತಿರುವ ಭಾರತದ ನಟಿ ಪ್ರಿಯಾಂಕಾ ಚೋಪ್ರಾ ಅವರ ಬಗ್ಗೆ ಗೀತಾಂಜಲಿಗೆ ಪ್ರೀತಿ ಇದೆ.

ಗೀತಾಂಜಲಿಯ ಆಸಕ್ತಿ ವಿಜ್ಞಾನ, ಸಂಶೋಧನೆಗೆ ಸೀಮಿತವಾಗಿಲ್ಲ. ಆಕೆಗೆ ನಾನಾ ಆಸಕ್ತಿ. ಪ್ರತಿಯೊಂದನ್ನು ಕುತೂಹಲದಿಂದ ನೋಡುವ ಬೆರಗು ಸ್ವಭಾವ ಅವಳದ್ದು, ಪ್ರತಿಯೊಂದರಲ್ಲೂ ಆಸಕ್ತಿ ತಾಳಿ ಅದನ್ನು ಒಲಿಸಿಕೊಳ್ಳುತ್ತಾಳೆ. ಪಿಯಾನೋ ವಾದನ, ಭಾರತೀಯ ನೃತ್ಯ, ಗಾಯನ, ಈಜು ಮತ್ತು ಫೆನ್ಸಿಂಗ್ ಗೀತಾಂಜಲಿಯ ಆಸಕ್ತಿಯ ಕ್ಷೇತ್ರಗಳು. ಒಂಭತ್ತು ವರ್ಷದವಳಿದ್ದಾಗಲೇ ಶಾಸ್ತ್ರೀಯ ಸಂಗೀತ ಅಭ್ಯಾಸ ಆರಂಭಿಸಿದಳು. ಕೋವಿಡ್ ಕ್ವಾರಂಟೈನ್‌ನಲ್ಲಿ ಸಮಯವನ್ನು ಹೊಸ ಕಲಿಕೆಗೆ ಸದುಪಯೋಗಪಡಿಸಿಕೊಂಡೆ ಎಂದು ಏಂಜೆಲೀನಾ ಜೋಲಿ ನಡೆಸಿದ ಸಂದರ್ಶನದಲ್ಲಿ ತಿಳಿಸಿದ್ದಾಳೆ. ಇದೇ ಸಮಯದಲ್ಲಿ ತಾನು ಹೇಗೆ ಬೇಕಿಂಗ್ ಕಲಿತೆ ಎಂಬುದನ್ನು ರಸವತ್ತಾಗಿ ವಿವರಿಸಿದ್ದಾಳೆ.

ತೀರಾ ಚಿಕ್ಕ ವಯಸ್ಸಿಗೆ ಜಗತ್ತಿನಾದ್ಯಂತ ಪ್ರಸಿದ್ಧಿ ಪಡೆದಿರುವ ಗೀತಾಂಜಲಿ ಮುಂದೇನು ಮಾಡುತ್ತಾಳೆ ಎಂಬ ಪ್ರಶ್ನೆ ಸಹಜ. ನಯೀ ಬಾತ್ ಟೆಡ್ ಟಾಕ್‌ನಲ್ಲಿ ತನ್ನ ಮುಂದಿರುವ ಗುರಿಯನ್ನು ಸೂಪರ್ ಹೀರೋಗಳೊಂದಿಗೆ ಸಮೀಕರಿಸಿ ವಿವರಿಸಿದ್ದಾಳೆ. ಕಾಮಿಕ್ ಅಥವಾ ಸಿನಿಮಾದಲ್ಲಿ ಸೂಪರ್ ಹೀರೋಗಳು ಎತ್ತರದ ಕಟ್ಟಡಗಳಿಂದ ಕಟ್ಟಡಕ್ಕೆ ನೆಗೆಯುತ್ತಾರೆ; ತಾಂತ್ರಿಕ ಗ್ಯಾಜೆಟ್‌ಗಳನ್ನು ಬಳಸುತ್ತಾರೆ; ಅತಿಮಾನುಷ ಶಕ್ತಿ ಹೊಂದಿರುತ್ತಾರೆ. ಆದರೆ, ಅವರ ಮುಖ್ಯ ಕೆಲಸ ಜೀವಗಳನ್ನು ರಕ್ಷಿಸುವುದೇ ಆಗಿರುತ್ತದೆ. ವಿಜ್ಞಾನಿಗಳೂ ಹಾಗೆಯೇ, ವಿಜ್ಞಾನಿಗಳು ಯಾವಾಗಲೂ ಸಮಸ್ಯೆಗೆ ಪರಿಹಾರ ಸೂಚಿಸುತ್ತಾರೆ; ಜನರ ಸಂಕಟಕ್ಕೆ ನೆರವಾಗುತ್ತಾರೆ. ತಾನು 'ಸೈಂಟಿಸ್ಟ್ ಸೂಪರ್ ಹೀರೊ' ಆಗಬೇಕು. ನಿಜ ಜಗತ್ತಿನ ಸಮಸ್ಯೆಗಳನ್ನು ಪರಿಹರಿಸುತ್ತಾ, ಜೀವಗಳನ್ನು ರಕ್ಷಿಸಬೇಕು ಎನ್ನುವುದು ಆಕೆಯ ಆಂತರ್ಯದ ಮಾತುಗಳು. ಅವಳ ಮುಂದಿನ ಗುರಿ, ಯೋಜನೆಗಳೇನೆಂಬುದು ನಿಮಗೀಗ ಸ್ಪಷ್ಟವಾಗಿರಬೇಕು ಅಲ್ಲವೇ?

ಕೃಪೆ: ವಿಜಯ ಕರ್ನಾಟಕ

ಹೆಣ್ಣಿಂದು ಕೊಂದೀರಿ ನನ್ನನ್ನ

ಈಗಷ್ಟೆ ಹೊಟ್ಟೆಯಲ್ಲಿ
ಚಿತ್ತದ ಬೀಜ ನಾನು
ಈ ಧರೆಗೆ ಬರುವ ಮೊದಲೇ
ಹೆಣ್ಣಿಂದು ಕೊಂದೀರಿ ನನ್ನನ್ನ

ಹೂವಿನಂತೆ ಅರಳುವ ಮುನ್ನ
ಬುಡ ಸಮೇತ ಕಿತ್ತು
ಹಾಕಿದೀರಿ ನನ್ನನ್ನ
ನನಗೂ ಒಂದು ಮನಸ್ಸಿದೆ
ಪ್ರೀತಿ ಹಂಚುವ ಕನಸಿದೆ.

ಹೆಣ್ಣೆಂದು ಗೊತ್ತಾದ ಕೂಡಲೇ
ಹೂಣ ಹಾಕಿದೀರಿ ನನ್ನನ್ನ
ನನಗೂ ಒಂದು ಬದುಕಿದೆ
ಬಾಳಬೇಕೆಂಬ ಹಂಬಲವಿದೆ

ಹೆಣ್ಣು ಭ್ರೂಣ ಹತ್ಯೆ ಜಗದಲಿ
ಗಂಡು ಎಂಬ ಮಾತು
ಬಾಯಲ್ಲಿ
ಸಮಾನತೆ ಬರಲಿ ಜಗದಲಿ
ಹೆಣ್ಣಿಂದು ಕೊಂದೀರಿ ನನ್ನನ್ನ

ದೀಪ ಜಿ.ಎಸ್., ಸೊರಬ

ಕೊರೋನ ತಂದಿತ್ತ ಸಂಕಷ್ಟಗಳು

ಯಶೋದಾ ಮೋಹನ್,
ಮಂಗಳೂರು

ವಿಶ್ವವ್ಯಾಪಿ ಆತಂಕವಾದ ಕೊರೋನ ತಂದಿತ್ತ ಸಂಕಷ್ಟಗಳೂ ವಿಶ್ವತೋಮುಖ. ಸೃಜನಶೀಲ ಜಗತ್ತಿನ ಬಾಹ್ಯ ಚಟುವಟಿಕೆ ಗಳು ಒಮ್ಮಿಂದೊಮ್ಮೆಗೆ ಸ್ತಬ್ಧವಾಗುವುದು ಅಂದರೆ ಬದುಕು ಮಗುಚಿ ಬಿದ್ದಂತೆ... ಇಡೀ ಜಗತ್ತು ಏಕಕಾಲದಲ್ಲಿ ಲಾಕ್‌ಡೌನ್ ಆಗಿರುವುದು, ಸಾಮಾಜಿಕ ಅಂತರವಿಟ್ಟುಕೊಳ್ಳುವ, ಉಸಿರುಗಟ್ಟಿ ಬದುಕುವ ಅನಿವಾರ್ಯತೆ ಬಂದಿದ್ದೇ 'ಕೊರೋನ' ಎನ್ನುವ ವೈರಾಣು ವೊಂದು ಹುಟ್ಟಿಸಿದ ಅತಿ ದೊಡ್ಡ ಸಂಕಷ್ಟವೆನ್ನಬಹುದು.

ಆರಂಭದ ದಿನಗಳಲ್ಲಿ ಕೇವಲ ಮಾಧ್ಯಮದ ಸುದ್ದಿಯಾಗಿ ತಟ್ಟಿದ ಈ ಮಾರಕ ರೋಗ ಹುಟ್ಟಿ, ಹಬ್ಬಿದ ದೇಶಗಳಿಗೆಲ್ಲ ಶಿಕ್ಷಣಕ್ಕೆ, ಉದ್ಯೋಗಕ್ಕೆಂದು ಮಕ್ಕಳನ್ನು ಕಳುಹಿಸಿರುವ ಹೆತ್ತವರನ್ನು ಆತಂಕಕ್ಕೀಡು ಮಾಡಿತು. ಖಾಯಿಲೆ ಇಡೀ ಜಗತ್ತಿಗೆ ಹಬ್ಬಿದಾಗ ಭಯ ಸಾರ್ವತ್ರಿಕವಾಯ್ತು. ಪ್ರಧಾನಿಯವರಿಂದ ಲಾಕ್‌ಡೌನ್‌ಗೆ ಕರೆ ಬಂದ ನಂತರ ಭಯದ ಜೊತೆಗೆ ಸಾವಿರ ಸಂಕಷ್ಟಗಳು. ಆತಂಕದಿಂದ ಎಚ್ಚರಿಕೆಯ ಕಡೆಗಿನ ಪ್ರಯಾಣದ ನಡುವಿನ ಘಟ್ಟಗಳೇ ನಡುಕ ಹತ್ತಿಸಿದ್ದು. ವಿದ್ಯುನ್ಮಾನ ಮಾಧ್ಯಮಗಳಲ್ಲಿ ತಡವುವ, ತಬ್ಬುವ ಸಂದೇಶಗಳ ಜತೆ ಮಿತಿಮೀರಿದ ಭಯೋತ್ಪಾದನೆಯೂ ರವಾನಿಸಲ್ಪಟ್ಟು ಜನತೆ ಕಂಗಾಲು. ಅರೆ ಮತ್ತು ಅತಿ ಮಾಹಿತಿಗಳು ಪರಿಸ್ಥಿತಿಯನ್ನು ಗುರುತಿಸುವಲ್ಲಿ ಮತ್ತು ನಿಭಾಯಿಸುವಲ್ಲಿ ಸೋತಿತು. ಸೋಂಕೇ ಒಂದು ಸಂಕಷ್ಟವಾಗಿರುವಾಗ ಸೋಂಕಿನ ಪರಿ

ಣಾಮವಾಗಿ ಇಡಿಯ ಜಗತ್ತೇ ಆರ್ಥಿಕ, ರಾಜಕೀಯ, ಸಾಮಾಜಿಕ, ಮಾನಸಿಕ ಮತ್ತು ಕೌಟುಂಬಿಕವಾಗಿ ವಿವಿಧ ಸಂಕಷ್ಟಗಳಿಗೆ ಮುಖಾಮುಖಿಯಾಯಿತು. ಒಂದೇ ಮಾತಿನಲ್ಲಿ ಹೇಳುವುದಾದರೆ ಬದುಕಿನ ಆವರ್ತನಗಳು, ಭವಿಷ್ಯದ ಯೋಜನೆಗಳು, ಹೂಡಿಕೆಗಳು, ಸಿದ್ಧತೆಗಳು ಎಲ್ಲವೂ ಗತಿ ಕಳಕೊಂಡವು.

ಸೋಂಕು

ಔಷಧಿಯಿನ್ನೂ ಸಿದ್ಧವಿಲ್ಲದ ಮತ್ತು ಅತಿ ಶೀಘ್ರವಾಗಿ ಹರಡಬಹುದಾದ ಕೊರೋನಾಕ್ಕೆ ಸಂಬಂಧಿಸಿದಂತೆ ತಿಳುವಳಿಕೆ ಮತ್ತು ಸವಲತ್ತುಗಳ ಕೊರತೆಯಿಂದ ಆರಂಭದ ದಿನಗಳಲ್ಲಿ ಸೋಂಕಿತರು ಬಹಳ ಕಷ್ಟ ಅನುಭವಿಸಿದರು. ಸೋಂಕು ನಿರ್ಣಯದ ಹಂತಗಳು ಕೂಡ ಹೊಸ ಸವಾಲೇ.. ಸೋಂಕಿತರ ಮೃತದೇಹವು ಗೌರವಪೂರ್ಣ ವಿದಾಯವನ್ನೂ ಪಡೆಯಲಾಗದೇ ಅಂತಿಮ ಸಂಸ್ಕಾರಕ್ಕೂ ಸ್ಮಶಾನದಿಂದ ಸ್ಮಶಾನಕ್ಕೆ ಅಲೆಯುವ ದಯನೀಯ ಪರಿಸ್ಥಿತಿಯುಂಟಾಯಿತು. ಸತ್ತವರ ಸಂಬಂಧಿಕರು ಅಗಲಿಕೆಯ ನೋವಿನೊಂದಿಗೆ, ಅಸಹಾಯ, ಅವಮಾನಗಳನ್ನು ಅನುಭವಿಸಿದರು. ತಮ್ಮವರನ್ನು ಕಳಕೊಂಡ ದಾರುಣ ಸಮಯದಲ್ಲಿ ಆತ್ಮೀಯರ ಸಾಂಗತ್ಯ, ಸಾಂತ್ವನಗಳನ್ನು ಪಡೆಯಲಾಗದೆ ಏಕಾಂತದ ಹಿಂಸೆ ಅನುಭವಿಸಬೇಕಾಯ್ತು. ವೈದ್ಯರುಗಳು ಮತ್ತು ಶುಶ್ರೂಷಕಿಯರು, ಆಶಾ ಕಾರ್ಯಕರ್ತೆಯರು, ಪೋಲೀಸರು ಕರ್ತವ್ಯ ನಿರತರಾಗಲೇ ಬೇಕಿತ್ತು. ಸುರಕ್ಷಾ ಸಲಕರಣೆಗಳನ್ನು ಧರಿಸಿಕೊಂಡು ಇಡೀ ದಿನ ಶೌಚಕ್ಕೂ ತೆರಳಲಾಗದೆ ಹಿಂಸೆ ಅನುಭವಿಸುತ್ತ ರೋಗಿಗಳ ಆರೈಕೆಗೆ ತೊಡಗಿದವರಿಗೆ ಮನೆ, ಮಂದಿ ಮಕ್ಕಳಿಂದ ಅಂತರ ಕಾಯ್ದುಕೊಳ್ಳಬೇಕಾದ ಅನಿವಾರ್ಯತೆಯ ಭಾವನಾತ್ಮಕ ನೋವು. ಪಿಪಿಇ ಕಿಟ್ ಮತ್ತು ಇತರ ಬಯೋ ಮೆಡಿಕಲ್ ತ್ಯಾಜ್ಯಗಳ ನಿರ್ವಹಣೆಯೂ ಹೊರೆಯೆನಿಸಿತು. ಎಷ್ಟೋ ಅಮೂಲ್ಯ ಜೀವಗಳು ರೋಗಿಗಳನ್ನು ಉಪಚರಿಸುತ್ತಲೇ ರೋಗಕ್ಕೆ ಬಲಿಯಾದವು. ಎಲ್ಲರೂ ಮನೆಯೊಳಗೇ ಸುರಕ್ಷವಾಗಿರುವಾಗ ಜನರಿಗೋಸ್ಕರ ಕನಿಷ್ಠ ವೇತನ ಮತ್ತು ಸವಲತ್ತುಗಳನ್ನು ಪಡೆದು ಮನೆಮನೆಗೆ ಭೇಟಿ ಕೊಟ್ಟು ಮುನ್ನೆಚ್ಚರಿಕೆ ಮತ್ತು ತಿಳುವಳಿಕೆ ನೀಡಲು ಶ್ರಮಿಸಿದ ಆಶಾ ಕಾರ್ಯಕರ್ತೆಯರು ಜನರಿಂದಲೇ ಕಿರುಕುಳ ಅನುಭವಿಸಿದರು. ಗ್ರಾಮಾಂತರ ವಿದ್ಯಾರ್ಥಿಗಳ ಹಿತ ಬಯಸಿ ಯೋಜಿಸಲ್ಪಟ್ಟ 'ವಿದ್ಯಾಗಮ'ವು ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕಿಯರಿಗೆ ಸೋಂಕು ಹರಡಲು ಕಾರಣವಾಯ್ತು.

ಆರ್ಥಿಕ

ಕೊರೋನಾ ಮತ್ತು ಅದನ್ನೆದುರಿಸಲು ಮಾಡಿದ ಲಾಕ್‌ಡೌನ್ ಪ್ರಕ್ರಿಯೆಯು ಅಂತಾರಾಷ್ಟ್ರೀಯ ವಿದ್ಯಮಾನಗಳ ಮೇಲೆ ಬಹಳಷ್ಟು ಪರಿಣಾಮ ಬೀರಿತು. ಜಾಗತಿಕ ವಿದ್ಯಮಾನಗಳು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಹೋಗುತ್ತಿರುವ ವರ್ತಮಾನ ಕಾಲಘಟ್ಟದಲ್ಲಿ ಎಲ್ಲ ಆತಂಕಗಳೂ ಸಮಾನವಾಗಿ ವಿತರಿಸಲ್ಪಡುತ್ತದೆ. ದೇಶದ ಆರ್ಥಿಕತೆಯಲ್ಲಿ ಹಿರಿಯ ಪಾತ್ರ ವಹಿಸುವ ಆಮದು ರಫ್ತು ಸಂಬಂಧಗಳು, ವಿದೇಶೀ ಬಂಡವಾಳಗಳು ಲಾಕ್‌ಡೌನ್ ಅವಧಿಯಲ್ಲಿ ಸ್ತಬ್ಧವಾಗಿ ಆರ್ಥಿಕ ವ್ಯವಸ್ಥೆಯನ್ನು ದುರ್ಬಲಗೊಳಿಸಿತು. ವ್ಯಾಪಾರ ಕ್ಷೇತ್ರ ನಷ್ಟಕ್ಕೊಳಗಾಯಿತು. ಚೀನದೊಂದಿಗಿನ ವಾಣಿಜ್ಯ ವ್ಯವಹಾರ ಸ್ಥಗಿತಗೊಂಡಿದ್ದರಿಂದ ದೇಶದ ಇಲೆಕ್ಟ್ರಾನಿಕ್, ಕೃಷಿ, ಕೈಗಾರಿಕಾ ಕ್ಷೇತ್ರವು ನಿಸ್ತೇಜವಾಯ್ತು. ಕೈಗೆಟುಕುವ ದರದಲ್ಲಿ ಲಭ್ಯವಾಗುತ್ತಿದ್ದ ಚೀನೀ ಸರಕುಗಳಿಗೆ ದೇಶದಲ್ಲಿ ಮಾರುಕಟ್ಟೆ ಇಲ್ಲವಾಗಿ ಸಾಮಾನ್ಯರು ಬಳಲಿದರು. ರಾಜ್ಯದಿಂದ ರಫ್ತಾಗುತ್ತಿದ್ದ ಕೃಷಿ ಉತ್ಪನ್ನಗಳಿಗೆ ಬೇಡಿಕೆಯಿಲ್ಲದೆ ದುಡಿದವರು ನಷ್ಟ ಅನುಭವಿಸಿದರು. ಗಳಿಕೆಯಿಲ್ಲದ ಸಮಾಜದಲ್ಲಿ ಖರೀದಿಯ ಸಾಮರ್ಥ್ಯವೂ ಕ್ಷೀಣಿಸಿತು. ಉತ್ಪಾದನೆಗಳು ಬೇಡಿಕೆ ಕಳಕೊಂಡು ಉತ್ಪಾದಕರು ನಷ್ಟ ಅನುಭವಿಸಿದರು. ಒಟ್ಟಾರೆ ಆವರ್ತನದ ಏರುಪೇರು ಇಡೀ ಜಗತ್ತನ್ನೇ ಆರ್ಥಿಕ ಸಂಕಷ್ಟದ ಹಾದಿಯಲ್ಲಿ ತಂದು ನಿಲ್ಲಿಸಿತು. ರಾಷ್ಟ್ರ ಬೊಕ್ಕಸದಿಂದ ಹಿಡಿದು ಜನ ಸಾಮಾನ್ಯರ ತುತ್ತಿನ ಚೀಲದವರೆಗೂ ದಾರಿದ್ರ್ಯ ಆವರಿಸಿತು.

ಗಲ್ಫ್ ದೇಶಗಳಲ್ಲಿ ಉದ್ಯೋಗವಿಲ್ಲದೆ ಪರದಾಡುತ್ತಿರುವ ಭಾರತೀಯರು ಕ್ವಾರಂಟೈನ್ ಒಪ್ಪಂದದೊಂದಿಗೆ ಸ್ವದೇಶಕ್ಕೆ ತಲುಪಿದರೂ ಕ್ವಾರಂಟೈನ್ ಅವಧಿಯ ಖರ್ಚು ನಿಭಾಯಿಸಲೂ ಅಶಕ್ತರಾದರು. ಅವರಿಗೆ ಆಶ್ರಯವಿತ್ತ ಹೊಟೇಲುಗಳವರೂ ನಷ್ಟ ಅನುಭವಿಸಬೇಕಾಯ್ತು. ಆಹಾರ ವಸ್ತುಗಳ ಆಮದು ರಫ್ತು ವಹಿವಾಟು ನಿಂತು ಹೋಗಿ ನಾವು ಅವಲಂಬಿಸಿಕೊಂಡ ಹೊರದೇಶದ ಆಹಾರ ವಸ್ತುಗಳ ಕೊರತೆಯುಂಟಾಯ್ತು. ಆಯಾ ಕಾಲಘಟ್ಟದ ಇಳುವರಿಗೆ ಮತ್ತು ಮಾರುಕಟ್ಟೆಯ ಆವರ್ತನಕ್ಕೆ ಧಕ್ಕೆಯುಂಟಾಗಿ ಸಂರಕ್ಷಿಸಿಡಲಾಗದ ಹಣ್ಣು, ತರಕಾರಿಗಳು ಹಾಳಾಗಿ ರೈತ ಹಾಕಿದ ಬಂಡವಾಳವೂ ಕಳೆದು ಹೋಯ್ತು. ಇನ್ನೊಂದೆಡೆಯಲ್ಲಿ ದಿನಗೂಲಿಗೆ ದುಡಿಯುವ ಎಲ್ಲಾ ವರ್ಗದ, ಕ್ಷೇತ್ರದ ಕಾರ್ಮಿಕರು ಗಳಿಕೆಯಿಲ್ಲದೆ ಕಂಗೆಟ್ಟರು. ಉದ್ಯೋಗದ ಭರವಸೆಯಿಂದ ಸಾಲ ತೆಗೆದುಕೊಂಡವರು ಕಂತು ತೀರಿಸುವ ದಾರಿ ಕಾಣದೆ ಖಿನ್ನತೆಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡು ತಮ್ಮೆಲ್ಲ ಹೊರೆ, ಹೊಣೆಯನ್ನು ನಂಬಿದವರ ಮೇಲೆ ಹಾಕಿದ್ದಲ್ಲದೆ ತಮ್ಮ ಅಗಲಿಕೆಯ ನೋವನ್ನೂ ಕೊಟ್ಟು ಹೋದರು. ಹಬ್ಬ–ಹರಿದಿನಗಳು, ಮದುವೆ ಉತ್ಸವಗಳ ಸಂಭ್ರಮಕ್ಕೆ ಸಿದ್ಧವಾಗುವ ಎಲ್ಲ ಉತ್ಪನ್ನಗಳಿಗೂ ಬೇಡಿಕೆಯಿಲ್ಲವಾಯ್ತು. ಈ ಸಡಗರಗಳಿಗೆ ಹೊಂದಿಕೊಂಡಿದ್ದ ಎಲ್ಲಾ ಕೆಲಸಗಾರರು, ಕಲಾವಿದರು ಸಂಪಾದನೆಯ ಉತ್ತುಂಗದ ದಿನಗಳಲ್ಲೇ ಕೆಲಸವಿಲ್ಲದೆ ಕೂತರು. ಪ್ರದರ್ಶನಕ್ಕೆ ಸಿದ್ಧವಾದ ಚಲನಚಿತ್ರಗಳು ಹೊರಬರದೆ ಬಂಡವಾಳ ಹಾಕಿದವರು ಆತಂಕಕ್ಕೊಳಗಾದರು. ಲಾಕ್‌ಡೌನ್ ಕಳೆದ ನಂತರವೂ ಮುಂಜಾಗ್ರತೆಯ ದೃಷ್ಟಿಯಿಂದ ಜನರು ಹೊರ ಓಡಾಟವನ್ನು ತಪ್ಪಿಸುತ್ತ ಆನ್‌ಲೈನ್ ಖರೀದಿಯನ್ನು ಮುಂದುವರಿಸಿದ್ದರಿಂದ ಸ್ಥಳೀಯ ಮಾರಾಟಗಾರರಿಗೆ ವ್ಯಾಪಾರ ಕಡಿಮೆಯಾಯ್ತು.

ಸಾಮಾಜಿಕ ಮತ್ತು ಮಾನಸಿಕ

ಕೊರೋನ ಕಾಯಿಲೆಯು ತಂದಿತ್ತ ದೊಡ್ಡ ಸಂಕಷ್ಟವೇ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು. ಬೆರೆತು ಬಾಳಿದ ಮನಗಳು ದ್ವೀಪವಾಗಿ ಬಳಲಿದುವು. ವಾರ್ಷಿಕ ಆವರ್ತನದ ಚಟುವಟಿಕೆಗಳು, ಧಾರ್ಮಿಕ ಕಾರ್ಯಕ್ರಮಗಳು, ಕುಟುಂಬ ದೊಳಗಿನ ಶುಭಕಾರ್ಯಗಳು ಎಲ್ಲವೂ ನಿಂತು ಹೋಗಿ ಸಂಬಂಧಿಕರು ಆಪ್ತ ಸಾಂಗತ್ಯ ಕಳಕೊಂಡರು. ಸಭಾ ಕಾರ್ಯ ಕ್ರಮಗಳು, ಪಾಠ ಪ್ರವಚನಗಳು ಆನ್‌ಲೈನ್ ಮುಖಾಂತರ ಏರ್ಪಟ್ಟು ಪರಸ್ಪರ ಆಪ್ತ ಒಡನಾಟವಿಲ್ಲದೆ, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವೆ ನೇರ ಸಂಪರ್ಕದ ಅನುಬಂಧವಿಲ್ಲದೆ ಮಾನಸಿಕವಾಗಿ ಒತ್ತಡ ಕ್ಕೊಳಗಾಗಬೇಕಾಯ್ತು. ರೋಗದ ವಿರುದ್ಧ ತೆಗೆದುಕೊಂಡ ಎಚ್ಚರಿಕೆಗಳು ರೋಗಿಯ ವಿರುದ್ಧವೆಂದು ಅರ್ಥೈಸಲ್ಪಟ್ಟು ಸಂಬಂಧ

ಗಳು ಹದಗೆಟ್ಟುವು. ಅತಿ ಜಾಗರೂಕತೆ ಮತ್ತು ಅಜಾಗರೂಕ ಧೋರಣೆಗಳಿಂದ ವೈಮನಸ್ಸು ಬೆಳೆಯಿತು. ವಿದೇಶ ಸಂಪರ್ಕ ಗಳು ರದ್ದಾಗಿ ಸಂಬಂಧಪಟ್ಟ ವರಿಗೆ ಆತಂಕ ಹೆಚ್ಚಾಯ್ತು. ವಿದೇಶಕ್ಕೆ ಸೀಮಿತ ಅವಧಿಯಲ್ಲಿ ಉದ್ಯೋಗಕ್ಕೆ ಹೋದವರು ಅಲ್ಲಿರಲಾರದೆ ಇಲ್ಲಿಗೆ ಬರಲಾರದೆ ಬಳಲಿದರು. ಅನಾರೋಗ್ಯ, ತೀರಾ ಹತ್ತಿರದವರ ಸಾವಿನ ಸಂದರ್ಭದಲ್ಲೂ ಮನೆ ಸೇರಲಾರದೆ, ಅಂತಿಮ ದರ್ಶನ ಪಡೆಯುವ ಭಾಗ್ಯವೂ ಇಲ್ಲದಂತಾಯ್ತು. ಹೊರದೇಶದಿಂದ ಹಿಂದಿರುಗಿದವರನ್ನು ಇಲ್ಲಿನವರು ಸಂಶಯದಿಂದ ಅಸ್ಪೃಶ್ಯರಂತೆ ಕಂಡಾಗ ಅವರು ತಾಯ್ನೆಲದಲ್ಲೂ ಅನಾಥ ಪ್ರಜ್ಞೆಯನ್ನು ಅನುಭವಿಸಬೇಕಾಯ್ತು. ಹೊರ ದೇಶದಿಂದ ಬಂದ ಕೆಲವರ ಬೇಜವಾ ಬ್ದಾರಿಯಿಂದ ದೇಶದೊಳಗೆ ಖಾಯಿಲೆ ಇನ್ನಷ್ಟು ಹಬ್ಬಿಕೊಂಡದ್ದೂ ಸುಳ್ಳಲ್ಲ. ಬೇಸಿಗೆಯ ರಜಾದಿನಗಳಿಗೆಂದು ಮಾಡಿದ ಯೋಜನೆಗಳು, ರಾಷ್ಟ್ರಮಟ್ಟದ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರೀಡೆಗಳು ರದ್ದಾದುವು. ತರಬೇತಾದ ಕ್ರೀಡಾಳುಗಳ ಪರಿಶ್ರಮ ನಿಷ್ಫಲವಾಯಿತು. ಗ್ರಾಮೀಣ ವಿದ್ಯಾರ್ಥಿಗಳಿಗೆ ಅಂತರ್ಜಾಲದ ತರಗತಿ ಗಳಿಗೆ ಸೇರಿಕೊಳ್ಳುವ ಅನುಕೂಲತೆಯಿಲ್ಲದೆ ಕಷ್ಟವಾಗಿ ಚಿಂತೆಗೀಡಾದರು. ಸಂಘ–ಸಂಸ್ಥೆಗಳು ಹಂಚಿದ ಆಹಾರ ವಸ್ತು ಗಳು ಬಡವರಿಗೆ ತಲುಪಿದರೂ ಮಧ್ಯಮ ವರ್ಗದ ಜನತೆ ದುಡಿಮೆಯೂ ಇಲ್ಲದೆ ಬಾಯಿಬಿಟ್ಟು ಕೇಳಲೂ ಆಗದೆ ಹಿಂಸೆ ಅನುಭವಿಸಿದರು.

ರಾಜಕೀಯ

ದೇಶ ಎದುರಿಸುವ ಯಾವುದೇ ಸಂಕಷ್ಟಗಳ ಪರಿಹಾರ ಯೋಜನೆಗಳಿಗೆ ಪಕ್ಷಭೇದ ಮರೆತು ಪ್ರಜೆಗಳು ಸಹ ಕರಿಸಬೇಕು. ಆದರೆ ಕೊರೋನಾವೆನ್ನುವ ಸಂಕಷ್ಟವೂ ಸರ್ಕಾರವನ್ನು ಟೀಕಿಸಲು ಉಪಯೋಗಿಸಲ್ಪಟ್ಟಿತು. ಆರ್ಥಿಕ ಹಿಂಜರಿ ತವು ಪರಿಹಾರ ಕಾರ್ಯಕ್ಕೆ ದೊಡ್ಡ ತೊಡಕಾಯ್ತು. ಈಗಾಗಲೇ ನಿರ್ಧರಿಸ ಲ್ಪಟ್ಟ ಪ್ರಗತಿಪರ ಯೋಜನೆಗಳು ನಿಂತು ಹೋಗಿ ಫಲಾಪೇಕ್ಷಿತರು ನಿರಾಸೆ ಅನು ಭವಿಸಿದರು. ದೇಶ 'ಗರೀಬಿ ಕಲ್ಯಾಣ' ಯೋಜನೆಯಂಥ ಹೊಸ ಹೊರೆ ಹೊರಬೇಕಾಯ್ತು. ಸ್ಥಗಿತಗೊಂಡ ಯೋಜನೆಗಳಿಗೆ ನಿಯೋಜಿತರಾದವರು ಉದ್ಯೋಗ ಕಳಕೊಂಡರು. ಇಡಿಯ ಜಗತ್ತಿನ ತಲ್ಲಣದೊಂದಿಗೆ ಸ್ತಬ್ಧಗೊಂಡ ಬದುಕಿನ ಬೇಗೆಯಲ್ಲೂ ಸಮಯಸಾಧಕರು ತಮ್ಮ ಬೇಳೆ ಬೇಯಿಸಿಕೊಳ್ಳಲು ಬಳಸಿ ಕೊಂಡದ್ದು ವಿಪರ್ಯಾಸ. ತರಗತಿಗಳನ್ನು ಕಳೆದುಕೊಂಡ ವಿದ್ಯಾರ್ಥಿಗಳಿಗೆ ಸುಲಭ ವಾಗಲು ಆಲೋಚಿಸಿದ ಪಠ್ಯಕ್ರಮದ ಕಡಿತದಲ್ಲೂ ರಾಜಕೀಯ ಧೋರಣೆ ಪ್ರವೇಶಿಸಿ ವಿದ್ಯಾರ್ಥಿಗಳು ಕಷ್ಟ ಅನುಭವಿಸಬೇಕಾಯ್ತು.

ಕೌಟುಂಬಿಕ

ಲಾಕ್‌ಡೌನ್ ಪ್ರಕ್ರಿಯೆಯಲ್ಲಿ ಅತಿ ಯಾಗಿ ಬಳಲಿದವರು ಗೃಹಿಣಿಯರು. ಎಲ್ಲರೂ ಮನೆಯೊಳಗೆ ವಿರಾಮ ಪಡಕೊಂಡರೆ ಸಂಕಷ್ಟದ ಎಲ್ಲ ಸಂತಪ್ತ ರನ್ನು ಆಕೆ ಮನೆಯಲ್ಲೇ ಸಂಬಾಳಿಸ ಬೇಕಾಯಿತು. ಮನೆಯಲ್ಲಿದ್ದೇ ಕೆಲಸ ಮಾಡುವವರು, ಕೆಲಸ ಕಳಕೊಂಡವರು, ವಿದ್ಯಾರ್ಥಿಗಳು, ಪರವೂರುಗಳಿಂದ ಹಿಂದಿರುಗಿದವರು, ಸಣ್ಣ ಮಕ್ಕಳು ಎಲ್ಲರ ಅತಂತ್ರ ತುಮುಲಗಳಿಗೆ ಒಂದೇ ಸೂರಿನಡಿಯಲ್ಲಿ ಮುಖಾಮುಖಿಯಾಗ ಬೇಕಿತ್ತು ಆಕೆ. ಬೆಳಗಿನ ಹೊತ್ತು ಎಲ್ಲರ ಅವಶ್ಯಕತೆ ಗಳನ್ನು ನಿಭಾಯಿಸಿ ಕಳಿಸಿದ ನಂತರದ ಸ್ವಂತದ ಸಮಯಾವಕಾಶ ವನ್ನು ಕಳಕೊಂಡ ಆಕೆಗೆ ಈಗ ಹೆಚ್ಚುವರಿ ದುಡಿಮೆ. ಮನೆಯಲ್ಲೇ ಬಂಧಿಯಾದ ಪುಟ್ಟ ಮಕ್ಕಳಿಗೆ ಪರಿಸ್ಥಿತಿಯನ್ನು ಮನದಟ್ಟು ಮಾಡಿಸುವುದು, ಇನ್ನೂ ಪರೀಕ್ಷೆ ಮುಗಿಯದ ವಿದ್ಯಾರ್ಥಿಗಳ ದ್ವಂದ್ವವನ್ನು ನಿಭಾಯಿಸುವುದು, ಆನ್‌ಲೈನ್ ತರಗತಿಗಳ ಬಗ್ಗೆ ಗಮನವಿರಿಸುವುದು, ಕೆಲಸ ಕಳೆದುಕೊಂಡವರ, ವ್ಯವಹಾರ ಸ್ಥಗಿತ ಗೊಳಿಸಿ ಮನೆಯಲ್ಲೇ ಉಳಿದವರ ಅಭದ್ರ ಭಾವಗಳಿಗೆ ಆಸರೆಯಾಗುವುದು,

ಮನೆಯನ್ನೇ ಕಛೇರಿ ಮಾಡಿಕೊಂಡವರ ಅಗತ್ಯಗಳನ್ನು ಪೂರೈಸುವುದು ಮುಂತಾದ ಎಲ್ಲ ಸವಾಲುಗಳೂ ಅವಳಿಗೆದುರಾದುವು. ಮನೆಯಲ್ಲೇ ಕೆಲಸ ಮಾಡುವ ಮಂದಿಯಿರುವ ಮನೆಯ ಗೃಹಿಣಿಯ ಸಂಕಷ್ಟ ಹೇಳತೀರುವಂಥದ್ದಲ್ಲ. ಇಡೀ ದಿನ ಮನೆಯಲ್ಲೇ ಇರುವವರಿಗೆ ಹೊತ್ತು ಹೊತ್ತು ಬೇಯಿಸಿ ಹಾಕುವ ಹೆಚ್ಚುವರಿ ಕೆಲಸದ ಜೊತೆಗೆ ನಿಶ್ಶಬ್ದವನ್ನೂ ಪಾಲಿಸಬೇಕಿತ್ತು. ಧ್ವನಿಯೆತ್ತಿ ಮಾತನಾಡುವಂತಿಲ್ಲ... ನೆರೆಕರೆಯವರೊಂದಿಗೆ ಎಂದಿನಂತೆ ಲೋಕಾಭಿರಾಮವಿಲ್ಲ. ತಮ್ಮ ನಿತ್ಯದ ರೇಡಿಯೋ ಟಿವಿ ಕಾರ್ಯಕ್ರಮಗಳನ್ನು ಅನುಸರಿಸುವಂತಿಲ್ಲ. ಮಾತ್ರವಲ್ಲ ಅಡುಗೆ ಮನೆಯ ಸದ್ದುಗಳನ್ನೂ ಆಕೆ ನಿಯಂತ್ರಿಸಿಕೊಳ್ಳಬೇಕಾಯ್ತು. ಸಂಕಟದ ಸಮಯದಲ್ಲಿ ಮನೆಮಂದಿ ತನ್ನ ಕಣ್ಣೆವೆಯಲ್ಲಿ ಇರುವ ಸಮಾಧಾನ ಒಂದು ಕಡೆಯಾದರೆ ಆಕೆ ಮಾತ್ರ ತಾನೊಂದು ಸದ್ದು ಮಾಡದೆ ದುಡಿಯುವ ಯಂತ್ರವಾಗಿ ಬಳಲಿದಳು. "ಶಾಲೆಗೆ ಹೋಗುವ ಸಣ್ಣ ಮಕ್ಕಳಾಗಲೀ, ಶಾಲೆಗೆ ಹೋಗದಿದ್ದರೂ ರಜಾದಿನಗಳಲ್ಲಿ ಪಾರ್ಕು, ಮಾಲ್, ಬೀಚ್ ಎಂದು ಸುತ್ತುವ ಮಕ್ಕಳಿಗಾಗಲೀ ಮನೆಯಲ್ಲೇ ಉಳಿದುಕೊಳ್ಳಬೇಕಾದ ಅನಿವಾರ್ಯತೆಯನ್ನು ತಿಳಿಹೇಳುವುದೇ ಒಂದು ಸವಾಲು.

ಕೆಲವು ಕಡೆ ಕೆಲಸ, ಮನರಂಜನೆಯಿಲ್ಲದೆ ಹೊತ್ತು ಹೋಗದ ಗಂಡಸರಿಂದ ಮಡದಿ ಲೈಂಗಿಕ ಹಿಂಸೆಯನ್ನನುಭವಿಸಿದ ಉದಾಹರಣೆಗಳಿದ್ದರೆ ಇನ್ನು ಕೆಲವು ಬಾರಿ ಹೆಂಡತಿಯನ್ನು ಸಹಿಸಲಾಗದೇ ಮನೆಯನ್ನು ರಣರಂಗವಾಗಿಸಿದ ಉದಾಹರಣೆಯೂ ಇವೆ. ಉತ್ತರ ಭಾರತದಲ್ಲಿ ಇಪ್ಪತ್ತನಾಲ್ಕು ಗಂಟೆ ಹೆಂಡತಿಯ ಮುಖ ನೋಡುವುದೂ ಕ್ರೂರ ಹಿಂಸೆಯೆಂದು ಕೋರ್ಟಿಗೆ ಹೋದ ಘಟನೆಯೂ ನಡೆಯಿತು. ಮಕ್ಕಳು ಪರೀಕ್ಷೆಗೆ ಸಿದ್ಧವಾಗಬೇಕೋ ಬೇಡವೋ ಎನ್ನುವ ದ್ವಂದ್ವದಲ್ಲಿ ವಾರ್ಷಿಕ ರಜಾ ಅವಧಿಯನ್ನೂ ಆತಂಕದಲ್ಲೇ ಕಳೆಯಬೇಕಾಯ್ತು.

ಬದುಕನ್ನು ಹೆಚ್ಚು ದಿನ ಗೋಡೆಯೊಳಗಡೆ ಬಂಧಿಸಿಡಲಾಗದೆ ಅವರವರ ಆರೋಗ್ಯದ ಜವಾಬ್ದಾರಿಯನ್ನು ಅವರವರ ಮೇಲೆ ಬಿಟ್ಟು ಸದ್ಯ ಲಾಕ್‌ಡೌನ್ ರದ್ದಾಗಿದ್ದರೂ ಪರಿಸ್ಥಿತಿ ಸುಧಾರಿಸಿಲ್ಲ. ಜನರು ನಿಧಾನವಾಗಿ ಎಂದಿನ ಚಟುವಟಿಕೆಗಳತ್ತ ಹೊರಳುತ್ತಿದ್ದರೂ ಬದುಕು ಇನ್ನೂ ಸಹಜ ಸ್ಥಿತಿಗೆ ಮರಳಿಲ್ಲ. ಕೊರೋನ ನಿರೋಧಕ ಲಸಿಕೆಗಳನ್ನು ಕಂಡುಕೊಳ್ಳುವವರೆಗೂ ಬದುಕು ಹಿಂದಿನಂತೆ ಆಗಲಾರದು. ಜಗತ್ತು ಕೊರೋನ ವೈರಸನ್ನು ಗೆಲ್ಲುವವರೆಗೆ ಎಷ್ಟು ಬದುಕುಗಳು ಕಳೆದು ಹೋಗುವುದೋ. ಅವು ಮತ್ತೆ ಮರಳಿ ಬಾರದು. ಕಳೆದ ಜೀವಗಳಿಗೊಂದು ಶೃದ್ಧಾಂಜಲಿ ಅರ್ಪಿಸುತ್ತಾ ಉಳಿದವರ ಪಾಲಿಗಾದರೂ ಹಿಂದಿನ ಸಹಜ ದಿನಚರಿಗಳು ಮರಳಿ ಸಿಗಲಿ ಎಂದು ಆಶಿಸೋಣ. ■

ನಾವು ಮಾನವನನ್ನು ಮಣ್ಣಿನ ಸತ್ವದಿಂದ ಸೃಷ್ಟಿಸಿದೆವು. ತರುವಾಯ ಅದನ್ನು ಒಂದು ಸುರಕ್ಷಿತ ಸ್ಥಳದಲ್ಲಿ ತೊಟ್ಟಿಕ್ಕಿದ ಹನಿಯಾಗಿ ಮಾರ್ಪಡಿಸಿದೆವು. ಅನಂತರ ಆ ಹನಿಗೆ ಮಾಂಸಪಿಂಡದ ರೂಪ ಕೊಟ್ಟೆವು. ಬಳಿಕ ಮಾಂಸಪಿಂಡವನ್ನು ಮಾಂಸಖಂಡವನ್ನಾಗಿ ಮಾಡಿದೆವು. ಅಮೇಲೆ ಮಾಂಸಖಂಡವನ್ನು ಎಲುಬುಗಳಾಗಿ ಮಾಡಿದೆವು. ತರುವಾಯ ಎಲುಬುಗಳ ಮೇಲೆ ಮಾಂಸ ತೊಡಿಸಿದೆವು. ಆ ಬಳಿಕ ಅದನ್ನೊಂದು ಬೇರೆಯೇ ಸೃಷ್ಟಿಯನ್ನಾಗಿ ಮಾಡಿ ನಿಲ್ಲಿಸಿದೆವು. ಅಲ್ಲಾಹನು ಮಹಾ ಸಮೃದ್ಧನು; ಸಕಲ ಶಿಲ್ಪಿಗಳಿಗಿಂತ ಶ್ರೇಷ್ಠ ಶಿಲ್ಪಿ.

(ಪವಿತ್ರ ಕುರ್‌ಆನ್, 23:12-14)

With best compliments from

ARAFAT SHAHNA

Gulbarga

ಹೊಸ್ತಿಲು ದಾಟುವ ಮುನ್ನ... ಚಿಂತಿಸುವಿರಾ?

(ಒಂದು ಪ್ರೇಮ ಕಥೆ)

ಮನಸ್ಸು ಎಂಬ ಬಿಸಿಲ್ಗುದುರೆಯನ್ನು ಏರಿ ಬದುಕಿನಲ್ಲಿ ಎಡವಿ ಬೀಳುವ ಹುಚ್ಚುತನಕ್ಕೆ ಬಲಿಪಶು ಆಗದಿರಿ ಮಹಿಳೆಯರೇ. ಈ ಲೇಖನ ಬರೆಯಲು ನನಗೆ ಪ್ರೇರಣೆ ಆದದ್ದು 'ಆಸಿಯಾ' ಎಂಬ ಹೆಣ್ಣು. ಕರ್ನಾಟಕದ ಸುದ್ದಿ ಮಾಧ್ಯಮದಲ್ಲಿ ಹೆಚ್ಚಿನವರ ಆಸಕ್ತಿಯ ಸುದ್ದಿಗೆ 'ಆಸಿಯಾ' ವಸ್ತುವಾಗಿದ್ದರು. ತಪ್ಪುಗಳೆಲ್ಲಾ ಹೆಣ್ಣಿನಿಂದಲೇ ಸಂಭವಿಸುತ್ತದೆ, ಪುರುಷ ಮಾತ್ರ ಸಜ್ಜನ! ಎಂಬಂತಹ ದೃಷ್ಟಿಕೋನದ ಈ ಸಮಾಜದಲ್ಲಿ ಓರ್ವ ಅಸಹಾಯಕ ಹೆಣ್ಣನ್ನು ಬೀದಿಗೆ ತಳ್ಳಿದ ಪುರುಷನ ಕುರಿತು ರೋಷ ಮೂಡುತ್ತದೆ. ಆಸಿಯಾ ಎಂಬ ಮಹಿಳೆ ಕೇರಳದ ಕಣ್ಣೂರಿನ 'ತೀಯಾ' ಎಂಬ ಹಿಂದೂ ಸಮುದಾಯದವಳು. ಪ್ರತಿಷ್ಠಿತ, ಶ್ರೀಮಂತ ಉದ್ಯಮಿಯ ಪತ್ನಿಯಾಗಿದ್ದ ಶಾಂತಿ ಎಂಬ ಮೂಲ ಹೆಸರಿನ ಈ ವಿವಾಹಿತೆ ಇಂದು ಮುಸ್ಲಿಮಳಾಗಿ ಧರ್ಮ ಬದಲಾಯಿಸಿ

ಕೊಂಡಿರುತ್ತಾಳೆ. ಮೊದಲ ಪತಿಯೊಂದಿಗೆ ಹತ್ತು ವರ್ಷದ ದಾಂಪತ್ಯ ಜೀವನ. ಮಕ್ಕಳೂ ಆಗಿರಲಿಲ್ಲ. ಪತಿ ಬಿಸಿನೆಸ್ ನಲ್ಲಿ ಮುಳುಗಿದ್ದು ಬಾಳಸಂಗಾತಿಗಾಗಿ ಆತನ ಬಳಿ ಸಮಯವೇ ಇರಲಿಲ್ಲ ಎಂಬ ದೂರು ಇವಳದು. ಏಕಾಂಗಿಯಾದ ಅವಳಿಗೆ ಫೇಸ್‌ಬುಕ್‌ನಲ್ಲಿ ಓರ್ವ ಯುವಕನ ಪರಿಚಯ ಆಗುತ್ತದೆ. ಪರಿಚಯ ಕ್ರಮೇಣ 'ಪ್ರೇಮ'ಕ್ಕೆ ತಿರುಗುತ್ತದೆ. ವಯಸ್ಸಲ್ಲಿ ಕಿರಿಯವನಾದ ಈ ಯುವಕ ಪ್ರತಿಷ್ಠಿತ ಮುಸ್ಲಿಮ್ ಕುಟುಂಬದವನು. ಈ ಜೋಡಿಯ 'ಪ್ರೇಮ'ದ ವಿಷಯ ಶಾಂತಿಯ ಪತಿಗೆ ತಿಳಿಯುತ್ತದೆ. ಅಲ್ಲಿಂದ ಅವರ ಮಧ್ಯೆ ಜಗಳ ಆರಂಭವಾಯಿತು. ಪತಿಗೆ ವಿಷಯ ತಿಳಿದ ನಂತರ ಮಾನಸಿಕವಾಗಿ ಕಂಗೆಟ್ಟ ಆಸಿಯಾಳಿಗೆ ಪ್ರೇಮಿ ಯುವಕ ಮನೆ ತೊರೆದು ಬರುವಂತೆಯೂ, ಅವಳನ್ನು ತನ್ನ ಸಮುದಾಯಕ್ಕೆ ಮತಾಂತರ ಮಾಡಿಸಿ ವಿವಾಹ

ಆಗುವುದಾಗಿ ಭರವಸೆ ಕೊಡುತ್ತಾನೆ. ಪ್ರೇಮಿ ಯುವಕನ ಮಾತನ್ನು ನಂಬಿ ಕೊಂಡ ಶಾಂತಿ ಮನೆಯ 'ಹೊಸ್ತಿಲು' ದಾಟುತ್ತಾಳೆ. ತನ್ನ ಗೌರವಾನ್ವಿತ ಕುಟುಂಬ, ಪತಿ, ವೈಭವದ ಮನೆ, ಸಂಪತ್ತು ಎಲ್ಲವನ್ನೂ ತೊರೆದು ಪ್ರೀತಿಯನ್ನು ನಂಬಿದ ಶಾಂತಿಯು 'ಆಸಿಯಾ'ಳಾಗಿ ಹೊಸ ಬದುಕಿಗೆ ಕಾಲಿಡುತ್ತಾಳೆ. ಬರು ವಾಗ ಅವಳಲ್ಲಿ ಕೆಲವು ವರ್ಷಕ್ಕೆ ಖರ್ಚಿಗೆ ಬೇಕಾದ ಸಂಪತ್ತು ಇತ್ತು. ಯುವಕ ತನ್ನ ಸಂಪ್ರದಾಯದಂತೇ ಅವಳನ್ನು 'ನಿಕಾಹ್' ಮಾಡಿಕೊಳ್ಳುತ್ತಾನೆ. ಈ ವಿವಾಹಕ್ಕೆ ಆತನ ಕುಟುಂಬದಿಂದಲೂ ವಿರೋಧ ಇತ್ತು. ಪ್ರೇಮ ಕುರುಡು ಎಂಬಂತೇ ಯಾರದೇ ಮಾತು, ಬುದ್ಧಿ ವಾದ ಆ ಸಮಯದಲ್ಲಿ ಮೆದುಳಿಗೆ ಹೋಗುವುದಿಲ್ಲ. ಈ ವಿವಾಹದ ಸಾಕ್ಷಿಗೆ ಮಸೀದಿಯಿಂದ 'ದಾಖಲೆ' ಪತ್ರ ಕೂಡಾ ದೊರೆಯುತ್ತದೆ ಎಂದು ಆಸಿಯಾಳಿಗೆ ತಿಳಿದಿರಲಿಲ್ಲ. ಇದು ದೊಡ್ಡ ಸಮಸ್ಯೆ ಯಾಗಿ ಭವಿಷ್ಯದಲ್ಲಿ ಕಾಡಿಸಬಹುದು ಎಂದೂ ಅವಳಿಗೆ ಬಹುಶಃ ತಿಳಿದಿರ ಲಿಲ್ಲವೇನೋ. ಇಬ್ರಾಹೀಮ್ ಎಂಬ ಈ ಯುವಕನೊಂದಿಗೆ ಬಹಳ ಸಂತಸದ ದಾಂಪತ್ಯ ಜೀವನ ಆರಂಭ ಮಾಡಿದ ಆಸಿಯಾಳಿಗೆ ಮೂರುವರೆ ವರ್ಷದ ತನಕ ಯಾವುದೇ ಸಂಕಷ್ಟಗಳು ಎದು ರಾಗಿರಲಿಲ್ಲ. ಇದೀಗ ಆಕೆಯ ಕೈಯಲ್ಲಿದ್ದ ಹಣ, ಸಂಪತ್ತು ಎಲ್ಲಾ ಕರಗಿ ಹೋಗಿ, ಕೆಲವು ಆರ್ಥಿಕ ಸಂಕಷ್ಟಗಳು ಕಾಡ ಲಾರಂಭಿಸಿದಾಗ ಒಂದು ದಿನ ಪತಿ ಯೊಂದಿಗೆ ಆತನ ಹೆತ್ತವರ ಮನೆಗೇ ಬದುಕು ಸಾಗಿಸಲು ಹೆಜ್ಜೆ ಇಡುತ್ತಾಳೆ. ಅತ್ತೆ–ಮಾವ, ಬಾವನ ಮನೆಯಲ್ಲಿ ಅವಳಿಗೆ ಗೌರವ ಸಿಗುವುದಿಲ್ಲ. ಅಲ್ಲಿ ಅವಳಿಗೆ ಮಾನಸಿಕ ಹಿಂಸೆ ಸಿಗುತ್ತದೆ. ಒಂದಿನ ಆ ಮನೆಯವರು ಅವಳನ್ನು ಹೊರಗೆ ಹಾಕುತ್ತಾರೆ. ಆಕೆ ಅಂಗಳಕ್ಕೆ ಬೀಳು ತ್ತಾಳೆ. ಮನೆ ಮಗ (ಪತಿ) ಒಳಗೆ. ಸೊಸೆ ಹೊರಗೆ! ಅಲ್ಲಿಂದ ಅವಳ ಬದುಕಿನ ದಿಕ್ಕು ಹಳಿ ತಪ್ಪಿದ ಬಂಡಿ ಯಂತೇ ಓಲಾಡುತ್ತಾ ಸಾಗುತ್ತದೆ.

'ಪತಿ'ಯನ್ನು ಅಪಾರವಾಗಿ ಪ್ರೀತಿಸು ತ್ತಿದ್ದ ಆಸಿಯಾಳಿಗೆ ತನ್ನ ಪತಿಯು ಆತನ ಕುಟುಂಬದೊಳಗೆ ಅಡಗಿಕೊಂಡದ್ದು ತೀವ್ರ ನೋವು, ಆಘಾತ ತರುತ್ತದೆ. 'ಪತಿ'ಗಾಗಿ ಕಣ್ಣೀರು ಹಾಕುತ್ತಾ ಬೇಡಿ ಕೊಳ್ಳುತ್ತಾರೆ. ಬೀದಿಗೆ ಬಿದ್ದ ಅಸಹಾಯಕ ಹೆಣ್ಣು ಇಂದು ಎಲ್ಲವನ್ನೂ ಕಳೆದು ಕೊಂಡಿದ್ದಾಳೆ. ಕನಸನ್ನು ಹುಟ್ಟಿಸಿ ಬೆಳ ಕಿಗೆ ಕರೆತಂದವನೇ ಇಂದು ಕತ್ತಲೆಯ ಕೂಪಕ್ಕೆ ಅವಳನ್ನು 'ಒಂಟಿ' ಆಗಿ ಬಿಟ್ಟು ಬಿಟ್ಟಿದ್ದಾನೆ. ಆಸಿಯಾ ಮುಸ್ಲಿಮ್ ಸಂಪ್ರದಾಯಸ್ಥಳಂತೇ ಬುರ್ಖಾ ಧರಿಸಿ, ನವಾರುನ್ ಮಾಡಿ ಧಾರ್ಮಿಕ ನಂಬಿಕೆಯೊಂದಿಗೆ ಬದಲಾಗಿದ್ದ ಹೆಣ್ಣನ್ನು ಇಂದು 'ಬೀದಿ'ಗೆ ತಳ್ಳಿದ ಈ ಯುವಕ ನನ್ನು 'ಮುಸ್ಲಿಮ್' ಎಂದು ಕರೆಯಲು ಅಸಹ್ಯವಾಗುತ್ತದೆ. ವಿವಾಹಿತ ಹೆಣ್ಣನ್ನು ಪ್ರೇಮಿಸುತ್ತಾ ಅವಳ ದಾಂಪತ್ಯ ಜೀವನಕ್ಕೆ ಕೊಳ್ಳಿ ಇಟ್ಟು ಅವಳನ್ನು ತನ್ನೆಡೆಗೆ ಸೆಳೆದುಕೊಂಡು ನಂಬಿಕೆಯ ದ್ರೋಹ ಎಸಗಿದ ಈ 'ಪಾಪಿ'ಗೆ ಶಿಕ್ಷೆ ಸಿಗಲೇ ಬೇಕು. ಇವನು ಮಾಡಿದ ತಪ್ಪಿಗೆ ಆತನ ಕುಟುಂಬದವರನ್ನು ಟೀಕಿಸು ವುದು, ಶಿಕ್ಷೆಗೆ ಗುರಿಪಡಿಸುವುದು ನ್ಯಾಯವಲ್ಲ. ಇಂದು ಆಸಿಯಾ ಸಮಾಜದ ಎಲ್ಲಾ ಸಂಘ ಸಂಸ್ಥೆ, ನ್ಯಾಯಾಲಯದ ಮೊರೆ ಹೋಗಿ 'ನ್ಯಾಯ' ಕೇಳುತ್ತಿದ್ದಾಳೆ. "ತನಗೆ ಪತಿ ಬೇಕು" ಎಂಬ ಮಾತೇ ಆಕೆಯ ಅಂತಿಮ ಆಸೆ. ಎಲ್ಲಿಯೂ ತನಗೆ ನ್ಯಾಯ ಸಿಗುತ್ತಾ ಇಲ್ಲ, ಪತಿಯೂ ತನ್ನನ್ನು ಕಡೆಗಣಿಸಿ ಕುಟುಂಬದಲ್ಲಿ ಅಡಗಿ ದ್ದಾನೆಂದು ಅರಿವಾದಾಗ ಆಸಿಯಾ ಕೊನೆಯದಾಗಿ 'ಆತ್ಮಹತ್ಯೆ'ಯ ನಿರ್ಧಾರ ಮಾಡುತ್ತಾಳೆ. ಹಿಂದೂ ಸಂಘದ ಸೇವಾ ಮುಂದಾಳುಗಳು ಆಕೆಯ ಈ ನಿರ್ಧಾರ ವನ್ನು ಬದಲಾಯಿಸಲು ಮನ ಒಲಿಸು ವಲ್ಲಿ ಸಫಲರಾಗಿದ್ದಾರೆ. ಆತ್ಮಹತ್ಯೆಯ ನಿರ್ಧಾರ ಕೈ ಬಿಡುತ್ತಾಳೆ. ಆಕೆ ತನ್ನ 'ಮಾತೃ' ಧರ್ಮಕ್ಕೆ ಹಿಂದಿರುಗಬೇಕೆಂದು ಅವರು ಕೇಳಿಕೊಳ್ಳುತ್ತಿದ್ದಾರೆ. ಸಹಜ ವಾಗಿಯೇ ಈ ಮಾತು ಸರಿ ಅನಿಸು ತ್ತದೆ. ಓರ್ವ ಹೆಣ್ಣನ್ನು ಬೀದಿಗೆ ತಳ್ಳಿದ ಕುಟುಂಬ ಮತ್ತು ಸಮುದಾಯಕ್ಕೆ ಅವಳಿಗೆ 'ನ್ಯಾಯ' ಕೊಡಲು ಸಾಧ್ಯ ಇಲ್ಲದೇ ಹೋದಾಗ ಆಕೆ ತನ್ನ ಕುಟುಂಬಕ್ಕೆ ಮರಳಿ ಹೋಗಲಿ ಎಂದು ಹೇಳುವುದ ರಲ್ಲಿ ತಪ್ಪಿಲ್ಲ ತಾನೆ. ಒಲ್ಲದ ಪತಿಯನ್ನು ಮರಳಿ ಪಡೆಯಲು ಆಸಿಯಾ ದೃಢ ವಾಗಿ ನಿಂತಿರುವುದು ಆಕೆಯ ನಂಬಿಕೆಗೆ ಸಾಕ್ಷಿ. ಇಲ್ಲಿ 'ಪತಿ'ಗೆ ಶಿಕ್ಷೆ ಸಿಗುವುದೂ ಅವಳಿಗೆ ಬೇಕಿಲ್ಲ. ಪತಿಯನ್ನು ಆತನ ಮನೆಯವರೆ ಬಚ್ಚಿಟ್ಟಿದ್ದಾರೆ. ಬಲವಂತ ಮತ್ತು ಬೆದರಿಕೆಯಿಂದ ಕೂಡಿ ಇಟ್ಟಿದ್ದಾ ರೆಂದು ಅವಳು ದೂರುತ್ತಿದ್ದಾಳೆ. ಇಲ್ಲಿ ಆಕೆಯ ಮುಗ್ಧತನ ಪ್ರಕಟವಾಗುತ್ತದೆ. ಅವಳಿಗೆ ತನ್ನ 'ಪತಿ'ಯ ಮೇಲೆ ಇನ್ನೂ ನಂಬಿಕೆ, ಪ್ರೀತಿ, ಗೌರವ ಇದೆ. ಒಬ್ಬ ಪ್ರೌಢ ಪುರುಷನಿಗೆ ತನ್ನ ಪತ್ನಿ ಅಥವಾ ಪ್ರೇಯಸಿಯ ಮೇಲೆ ಒಂದು ಸಾಸಿವೆ ಯಷ್ಟಾದರೂ ಪ್ರೀತಿ–ಕರುಣೆ ಹೃದಯದಲ್ಲಿ ಇದ್ದರೆ ಆತನನ್ನು ಕಟ್ಟಿ ಹಾಕಿದರೂ ಅವನು ಯಾವುದೇ ವಿಧಾನದಲ್ಲಾದರೂ ಅವಳನ್ನು ಸೇರಲು, ಮಾತನಾಡಿಸಲು ಖಂಡಿತಾ ಪ್ರಯತ್ನ ಪಡುತ್ತಾನೆ. ಪ್ರೀತಿಯೇ ಇಲ್ಲದ ಹೃದಯಕ್ಕೆ ಕಟ್ಟಿ ಹಾಕಲು 'ಹಗ್ಗ'ದ ಅಗತ್ಯವೂ ಇರಬೇಕಾಗಿಲ್ಲ. ಅವನಿಗೆ ಈಗ ಆಸಿಯಾಳ ಅಗತ್ಯ ಇಲ್ಲ. ಬಾಳೆ ತಿಂದು ಸಿಪ್ಪೆಯನ್ನು ಬಿಸಾಡಿ ದಂತೇ ಹೆಣ್ಣಿನ ಬದುಕಲ್ಲಿ ಆಟ ಆಡುವ ಇಂತಹ ಕದೀಮರಿಗೆ ಈ ಸಮಾಜದಲ್ಲಿ 'ಬರ' ಇಲ್ಲ. ಇಂತಹ ಬುದ್ಧಿ ಕೆಟ್ಟ ಸ್ವಾರ್ಥಿ ಯುವಕರಿಂದ ಸಮುದಾಯ ಮತ್ತು ಕುಟುಂಬವು ತಲೆತಗ್ಗಿಸಬೇಕಾಗು ತ್ತದೆ. ಇಂದಿನ ಕೋಮುದ್ವೇಷದ ರಾಜ ಕಾರಣಿಗಳಿಗೆ ಈ ಘಟನೆಯು 'ಲವ್ ಜಿಹಾದ್' ಆಗಿ ಕಾಣಿಸುವುದರಲ್ಲಿ ಸಂಶಯವಿಲ್ಲ. ಇಲ್ಲಿ 'ಜಿಹಾದ್' ಎಂಬ ಪದವನ್ನು ಸೇರಿಸುವ ಅಗತ್ಯ ಇಲ್ಲ. 'ಪಾಗಲ್ ಲವ್' (ಹುಚ್ಚು ಪ್ರೇಮ)ಕ್ಕೆ ಧರ್ಮವನ್ನು ನಿಂದಿಸುವ ಕೋಮು ದ್ವೇಷಿಗಳಿಗೆ ಹೇಳಬೇಕಾಗಿರುವುದು ಚಪ್ಪಾಳೆ ಶಬ್ದಕ್ಕೆ ಎರಡೂ ಕೈ ಸೇರ ಬೇಕು. ಇಲ್ಲಿ 'ಶಾಂತಿ' ಎಂಬ ವಿವಾ ಹಿತೆ ಮಹಿಳೆ ಫೇಸ್‌ಬುಕ್‌ನಲ್ಲಿ ಅಪರಿ ಚಿತ ಯುವಕನೊಂದಿಗೆ 'ಪ್ರೇಮ' ದಲ್ಲಿ ವ್ಯವಹರಿಸುವಾಗ ಈ ಪ್ರಸಂಗ ಮುಂದೆ ಗಂಡಾಂತರ ತರಬಹುದು

ಎಂಬ ಅರಿವು ಇರಬೇಕಾಗಿತ್ತು. ಪತಿಯು ತನಗೆ 'ಟೈಮ್' ನೀಡದಿದ್ದರೆ ಅನ್ಯರ ಜೊತೆ ಸರಸ ಆಡುವುದು ಸರಿಯೇ? ಅರಿಯದೇ ತಪ್ಪು ಸಂಭವಿಸಿದಾಗ ಕೂಡಲೇ ಅದನ್ನು ತ್ಯಜಿಸಿ ತನ್ನ ದಾಂಪತ್ಯದ ಬದುಕು ಹಳಿ ತಪ್ಪದಂತೇ ತನ್ನನ್ನು ತಿದ್ದಿಕೊಂಡು ಸುಧಾರಿಸುವ ಪ್ರಯತ್ನ ಮಾಡಬಹುದಿತ್ತು. ಗೊತ್ತು, ಗುರಿ ಇಲ್ಲದ ರಾಜ್ಯಕ್ಕೆ, ಅಪರಿಚಿತ ಸಮುದಾಯಕ್ಕೆ ಹೆಜ್ಜೆ ಹಾಕುವ ಧೈರ್ಯ ತಗೊಂಡ 'ಶಾಂತಿ'ಯ ತಪ್ಪು ಕೂಡಾ ಯುವಕ ನಷ್ಟೇ ಬುದ್ಧಿಹೀನ ಕಾರ್ಯವಲ್ಲವೇ? 'ಪತ್ನಿ' ದಾರಿ ತಪ್ಪಲು ಆಕೆಯ ಬಗ್ಗೆ ಚಿಂತಿಸದ, ಅವಳನ್ನು ನಿರ್ಲಕ್ಷಿಸುವ, ಸಮಯವನ್ನು ಮೀಸಲಿರಿಸದ ಬಿಝಿ ಲೈಫ್‌ನ ಪತಿರಾಯರೂ ಕಾರಣ ಎನ್ನುವುದೂ ಅಷ್ಟೇ ಸತ್ಯ. ಮಕ್ಕಳಿಲ್ಲದ ಹೆಣ್ಣಿಗೆ ಪತಿಯ ಕರುಣೆ, ಪ್ರೀತಿ, ಸಾಂತ್ವನ ಅವಶ್ಯಕವಾಗುತ್ತದೆ. ತನ್ನ ಮನದಾಳದ ನೋವಿಗೆ ಪತಿಯು ಸ್ಪಂದಿಸದಾಗ ಮನಸ್ಸನ್ನೇ ಹಗುರ ಮಾಡಿಕೊಳ್ಳಲು ಹಾಗೂ ಇತರರಿಂದ ಅನುಕಂಪಕ್ಕೆ ಹಾತೊರೆಯುವ ಮನಸ್ಸು ಅನ್ಯ ಪುರುಷನ ಸವಿ ಸವಿ ಮಾತಿಗೆ ಮರಳಾಗಲೂ ಬಹುದು. ಬದುಕಿನಲ್ಲಿ ತಿಂದು, ಕುಡಿದು, ಹಾಯಾಗಿರುವ ಯಾವುದೇ ಆರ್ಥಿಕ ಅಥವಾ ದೈಹಿಕ ಮಾನಸಿಕ ಸಂಕಷ್ಟಗಳೇ ಇಲ್ಲದ ಸಂತೃಪ್ತ ಮಹಿಳೆಯರಿಗೆ ಫೇಸ್‌ಬುಕ್, ಮೊಬೈಲ್‌ನಲ್ಲಿ ಸಮಯ ಕಳೆಯುವುದೇ ಖುಷಿ ಕೊಡುತ್ತದೆ. ಇಂತಹವರನ್ನೇ 'ಗಾಳ' ಹಾಕಿ ಹಿಡಿಯಲು ಕೆಲವು ಬೇಟೆಗಾರರೂ ಸೋಶಿಯಲ್ ಮೀಡಿಯಾದಲ್ಲಿ ಈಜುತ್ತಾ ಇರುತ್ತಾರೆ. ಅಂತಹ ಓರ್ವ ಈ ಇಬ್ರಾಹೀಮ್ ಎಂಬ ಬೇಟೆಗಾರನಿಗೆ ಈ ಒಂಟಿ ಮೀನು ಮಾಧ್ಯಮದ ಸಮುದ್ರದಲ್ಲಿ ಗಾಳ ಹಾಕುವಾಗ ಸಿಕ್ಕಿತು. ನಾವು ತಪ್ಪನ್ನು ಹುಡುಕುವಾಗ ಕೇವಲ ವ್ಯಕ್ತಿಯನ್ನು ಮಾತ್ರ ವೀಕ್ಷಿಸಬೇಕೇ ಹೊರತು ಆತನ ಧರ್ಮಕ್ಕೆ ನಿಂದನೆ ಮಾಡುವುದು ನ್ಯಾಯವಲ್ಲ. 'ಪ್ರೀತಿ' ಎಂಬುದು ಧರ್ಮ, ಜಾತಿ, ಸಿರಿವಂತಿಕೆ, ಸೌಂದರ್ಯದ ಆಧಾರದಲ್ಲಿ ಹುಟ್ಟುವುದಿಲ್ಲ. "ಪ್ರೀತಿಸಿದರೆ ಭಯಪಡದಿರು ಜಗಕೆ..." ಎಂದು ಅನುಭವಸ್ಥರು ಹೇಳ್ತಾರೆ. ಆದ್ರೆ ಭಯ ತೊರೆದು 'ಪ್ರೀತಿ'ಯ ಹಿಂದೆ ಹೊಸ್ತಿಲು ದಾಟಿ ಬಂದವರು ಕೊನೆಗೆ ಕೆರೆ, ನೇಣು, ರೈಲ್ವೇ ಹಳಿ, ವಿಷಗಳ ಮೊರೆ ಹೋಗುವ ದುರಂತದ ಹಾದಿಯನ್ನು ತುಳಿಯುವುದು ಇತ್ತೀಚೆಗೆ ಹೆಚ್ಚುತ್ತಿದೆ. ಪ್ರೇಮಿಗಳ ಆತ್ಮಹತ್ಯೆ ಈ ವರ್ಷ ಹೆಚ್ಚಿದೆ ಎಂದು ಸುದ್ದಿ ತಿಳಿಸುತ್ತದೆ. ಹಿರಿಯರನ್ನೂ, ಸಮುದಾಯವನ್ನೂ ಕಡೆಗಣಿಸಿ ಹಗಲು ಕಂಡ ಬಾವಿಗೆ ಇರುಳು ಬೀಳುವ ಇಂದಿನ ಯುವ ಪ್ರೇಮಿಗಳಿಗೆ ಇಂತಹ ಕೆಲವು ಪ್ರೇಮ ಕಥೆಗಳು ಪಾಠವಾಗಲಿ ಎಂದು ಆಶಿಸುತ್ತೇನೆ. 'ಮೋಸ' ಅನ್ಯಾಯಕ್ಕೆ ಬಾಳಿಕೆ ಇಲ್ಲ. ಆಸಿಯಾಳಿಗೆ ನ್ಯಾಯ ಸಿಗಲಿ ಎಂದೇ ಹಾರೈಸುತ್ತೇನೆ. ■

ಫಲಗಳು ಪಕ್ವವಾಗದೆ ಅವುಗಳ ವ್ಯಾಪಾರ ಮಾಡಬೇಡಿರಿ. ಯಾಕೆಂದರೆ ಪಕ್ವವಾಗುವ ಮೊದಲೇ ಫಲಗಳು ನಾಶ ಹೊಂದಿದರೆ ಖರೀದಿಸಿದವ ಸಂಕಷ್ಟಕ್ಕೆ ಒಳಗಾಗುತ್ತಾನೆ. [ಪ್ರವಾದಿ ಮುಹಮ್ಮದ್(ಸ)]

With best compliments from

A.K. FRUITS & SONS

SORABA

ತನ್ನ ಕೈಯ ದುಡಿಮೆಯಿಂದ ಉಣ್ಣುವವನಿಗಿಂತ ಉತ್ತಮ ಆಹಾರ ಯಾರೂ ತಿಂದಿಲ್ಲ. [ಪ್ರವಾದಿ ಮುಹಮ್ಮದ್(ಸ)]

SAS

With best compliments from

DR. S. ABDUL SAMAD
Mob: 7899607771
9448093994

KEVA Wellness Center

Off.: #857/2, Nittuvalli Main Road, J.K. Medicals Upstairs, Near 8th Cross, K.T.J. Nagar, Davangere-02

ಸಮುದ್ರದ ಚಿಪ್ಪು ಹಣವಾದರೆ?

■ ರಫೀಕ್ ಮಾಸ್ಟರ್ ■

ಒಬ್ಬ ಪುಟ್ಟ ಬಾಲಕ ತನ್ನ ತಂಗಿಯೊಂದಿಗೆ ಮಾರುಕಟ್ಟೆಯಲ್ಲಿ ನಡೆಯುತ್ತಿದ್ದ. ಹಿಂತಿರುಗಿ ನೋಡಿದರೆ ತಂಗಿ ಕಾಣುತ್ತಿಲ್ಲ. ಅವಳು ಒಂದು ಆಟಿಕೆಯ ಅಂಗಡಿಯ ಮುಂದೆ ನಿಂತು ಸುಂದರವಾದ ಗೊಂಬೆಯೊಂದನ್ನು ನೋಡುತ್ತಿದ್ದಾಳೆ. ತಂಗಿಯ ಆಸೆಯನ್ನು ಅರಿತು ಒಬ್ಬ ಜವಾಬ್ದಾರಿಯುತ ಅಣ್ಣನಾಗಿ ಆ ಗೊಂಬೆಯನ್ನು ತಂಗಿಗೆ ತೆಗೆದುಕೊಡುತ್ತಾನೆ. ತಂಗಿಗೆ ಬಹಳ ಖುಷಿಯಾಗುತ್ತದೆ.

ಬಾಲಕನ ವಯಸ್ಸಿಗೂ ಮೀರಿದ ವರ್ತನೆಯನ್ನು ಅಂಗಡಿ ಮಾಲಕ ಬಹಳ ಕುತೂಹಲದಿಂದ ಗಮನಿಸುತ್ತಿದ್ದ. ಬಾಲಕ ತಂಗಿಯ ಕೈಹಿಡಿದುಕೊಂಡು ಕ್ಯಾಶ್ ಕೌಂಟರ್‌ಗೆ ಬಂದು ಗೊಂಬೆಯ ಕ್ರಯ ಕೇಳುತ್ತಾನೆ.. ಬದುಕಿನಲ್ಲಿ ಬಹಳಷ್ಟು ಸಮಸ್ಯೆಗಳನ್ನು ಎದುರಿಸಿದ್ದ ಆ ಶಾಂತ ಸ್ವಭಾವದ ಅಂಗಡಿ ಮಾಲಕ ಬಾಲಕನಲ್ಲಿ ಕೇಳುತ್ತಾನೆ, "ನಿನಗೆ ಏನು ಕೊಡಬಹುದು?" ಆಗ ಆ ಬಾಲಕ ಸಮುದ್ರದ ಬದಿಯಲ್ಲಿ ತಾನು ಸಂಗ್ರಹಿಸಿದ್ದ ಚಿಪ್ಪನ್ನು ತನ್ನ ಕಿಸೆಯಿಂದ ತೆಗೆದು ಕೊಡುತ್ತಾನೆ. ಅಂಗಡಿ ಮಾಲಕ ನೋಟುಗಳನ್ನು ಎನಿಸಿದಂತೆ ಎಲ್ಲಾ ಚಿಪ್ಪುಗಳನ್ನು ಎನಿಸುತ್ತಾನೆ. ನಂತರ ಅದರಲ್ಲಿ 4 ಚಿಪ್ಪುಗಳನ್ನು ಮಾತ್ರ ತಗೊಂಡು ಉಳಿದ ಎಲ್ಲಾ ಚಿಪ್ಪುಗಳನ್ನು ಬಾಲಕನಿಗೆ ವಾಪಾಸು ಕೊಡುತ್ತಾನೆ. ಬಾಲಕ ಉಳಿದ ಚಿಪ್ಪುಗಳನ್ನು ತನ್ನ ಕಿಸೆಗೆ ತುಂಬಿಸಿಕೊಂಡು ತಂಗಿಯೊಂದಿಗೆ ತುಂಬಾ ಸಂತೋಷದಿಂದ ಅಂಗಡಿಯಿಂದ ಹೊರ ನಡೆಯುತ್ತಾನೆ.

ಇದನ್ನೆಲ್ಲ ಗಮನಿಸುತ್ತಿದ್ದ ಅಂಗಡಿ ಕೆಲಸದವ ಮಾಲಕನಲ್ಲಿ ಕೇಳುತ್ತಾನೆ, "ಕೇವಲ 4 ಚಿಪ್ಪಿಗೆ ಅಷ್ಟೊಂದು ಬೆಲೆಬಾಳುವ ಗೊಂಬೆಯನ್ನು ಯಾಕೆ ಕೊಟ್ಟಿರಿ?" ಆಗ ಅಂಗಡಿ ಮಾಲಕ ನಗುತ್ತಾ ಹೇಳ್ತಾನೆ, "ನಮಗೆ ಅದು ಸಮುದ್ರದ ಚಿಪ್ಪುಗಳು. ಆದರೆ ಆ ಬಾಲಕನಿಗೆ ಅದು ಅತಿ ಅಮೂಲ್ಯವಾದ ವಸ್ತುಗಳು". ಈಗ ಅವನಿಗೆ ಹಣ ಅಂದರೆ ಏನು ಅಂತ ಗೊತ್ತಿರಲಿಕ್ಕಿಲ್ಲ. ಆದ್ರೆ ಬೆಳೆಯುತ್ತಾ ಅವನಿಗೆ ಹಣ ಅಂದರೆ ಏನು ಅಂತ ಗೊತ್ತಾಗುತ್ತೆ. ಆಗ ಅವನು ಹಣ ಕೊಡದೆ ಕೇವಲ ಚಿಪ್ಪು ಕೊಟ್ಟು ಗೊಂಬೆ ಖರೀದಿ ಮಾಡಿದ್ದನ್ನು ಹಾಗೂ ಆ ಗೊಂಬೆ ಕೊಟ್ಟ ನನ್ನನ್ನು ನೆನಪಿಸಿಕೊಳ್ತಾನೆ. ಮತ್ತು ಈ ಜಗತ್ತು ತುಂಬಾ ಎಷ್ಟು ಒಳ್ಳೆಯವರಿಂದ ಕೂಡಿದೆ ಎಂದು ಆಲೋಚಿಸುತ್ತಾನೆ.

ಅದು ಅವನಲ್ಲಿ ಉತ್ತಮ ಮನೋಭಾವವನ್ನು ಬೆಳೆಸುತ್ತದೆ ಹಾಗೂ ಪ್ರತಿಯಾಗಿ ತಾನೂ ಕೂಡ ಇದೇ ರೀತಿ ಉತ್ತಮನಾಗಬೇಕೆಂಬ ಪ್ರೇರಣೆಯನ್ನು ನೀಡುತ್ತದೆ.

ನಾವು ಈ ಜಗತ್ತಿಗೆ ಯಾವ ಭಾವನೆಗಳನ್ನು ಸುರಿಯುತ್ತೇವೆಯೋ ಅದು ಇನ್ನಷ್ಟು ಹರಡುತ್ತದೆ. ನಾವು ಒಳ್ಳೆಯದು ಮಾಡಿದರೆ ಜಗತ್ತಿನಾದ್ಯಂತ ಒಳ್ಳೆಯದೇ ಹರಡುತ್ತದೆ. ಕೆಟ್ಟದು ಮಾಡಿದರೆ ಕೆಟ್ಟದ್ದೇ ಹರಿಯುತ್ತದೆ. ■



ಅಳಲ ಹಿಡ್ಕಿ

ಕಥೆ

ಕಥಾ ಸಂಕಲನ– 1

■ ಶಮು ■

ಹಲೋ... ನೀವು ಮನೆಕೆಲಸಕ್ಕೆ ಹೆಂಗಸು ಬೇಕು ಎಂದು ಹೇಳಿದ್ದೀರಲ್ಲಾ...? ಸಂಜೆ ವೇಳೆಗೆ ಭಾಗ್ಯ ಎಂಬ ಹೆಸರಿನ ಮಹಿಳೆ ಬರುತ್ತಾಳೆ... ತಿಂಗಳಿಗೆ ಹತ್ತು ಸಾವಿರ. ನಿಮ್ಮ ಮನೆಯಲ್ಲೇ ಉಳಿದುಕೊಳ್ಳುತ್ತಾಳೆ. ತುಂಬಾ ಚುರುಕಿನ ಒಳ್ಳೆಯ ಹೆಣ್ಣು... ನನ್ನ ಕಮೀಶನ್ ನನಗೆ ಕೊಡಿ... ಬ್ರೋಕರ್‌ನ ಧ್ವನಿಗೆ ನಾನು ಸಂಬಳ ಅಧಿಕ ಅನಿಸುತ್ತದೆ... ಏಳೆಂಟು... ಆದ್ರೆ ಒಳ್ಳೆಯದು ಅಂದೆ. ಸರಿ... ಮ್ಯಾಡಮ್... ನೀವು ಅವಳೊಂದಿಗೇ ಮಾತಾಡಿ ಸೆಟ್ ಮಾಡಿಕೊಳ್ಳಿ... ಎಂದು ಕಾಲ್ ಕಟ್ ಮಾಡಿದ.

ಅಂತೂ ಕೆಲಸದಾಕೆ ಸಿಕ್ಕಿದಳಲ್ಲ... ಎಂದು ನೆಮ್ಮದಿ ಆಗಿತ್ತು. ಸಂಜೆ ವೇಳೆಗೆ ಭಾಗ್ಯ ಬಾಗಿಲ ಬಳಿ ಬಂದು ನಿಂತಳು. ಒಂದು ಕ್ಷಣ ನಾನು ಅನುಮಾನ ಗೊಂಡೆ. ಈಕೆ ಕೆಲಸದಾಕೆ ಆಗಿರಲಿಕ್ಕಿಲ್ಲ... ಅವಳ ರೂಪ ಕಂಡು ಅಚ್ಚರಿ ಯಿಂದಲೇ ನೀನು ಮನೆ ಕೆಲಸವನ್ನು ಮಾಡಬಲ್ಲಿಯಾ? ಎಂದೆ.

ಹೌದು... ಮ್ಯಾಡಮ್. ನನಗೆ ಕೆಲಸದ ಅಗತ್ಯ ಇದೆ. ನೀವು 'ಇಲ್ಲ' ಅನ್ನಬೇಡಿ... ಎಂದಳು ಹೆದರುತ್ತಾ...

ಅವಳನ್ನು ಮನೆ ಒಳಗೆ ಕರೆದು ಸೋಫಾದಲ್ಲಿ ಕುಳಿತುಕೊಳ್ಳಲು ಹೇಳಿದಾಗ ನೆಲದಲ್ಲೇ ಕಾಲು ಮಡಚಿ ಕುಳಿತಳು. ನಾನು ಅವಳ ಸುಂದರ ಮುಖ, ಹೊಳೆಯುವ ಮೈ ಬಣ್ಣ, ಎತ್ತರವಾದ ಮೈಕಟ್ಟು ನೋಡುತ್ತಾ... ನೀನು ಮೊದಲು

ಎಲ್ಲಿ ಕೆಲಸ ಮಾಡುತ್ತಾ ಇದ್ದೆ? ಅಲ್ಲೇಕೆ... ಕೆಲಸ ಬಿಟ್ಟೆ? ನಿನಗೆ ಮದುವೆ ಆಗಿದ್ಯಾ...? ಎಂದೆ. ಬಹುಶಃ ನನ್ನ ಪ್ರಶ್ನೆಗಳು ಉದ್ದವಾಯಿತೇನೋ... ಒಂದು ಕ್ಷಣ ನನ್ನನ್ನೇ ದಿಟ್ಟಿಸಿ ಮೌನವಾದಳು.

ಮ್ಯಾಡಮ್... ನಾನು ಇದೇ ಮೊದಲು ಮನೆ ಕೆಲಸಕ್ಕೆ ಬಂದಿರುವುದು. ನಾನು ಈ ಊರಿನವಳಲ್ಲ. ಉತ್ತರ ಭಾರತದವಳು. ಮದುವೆ ಆಗಿದೆ. ಎರಡು ಮಕ್ಕಳಿದ್ದಾರೆ. ಅವರನ್ನು ಓದಿಸಲು ನನಗೆ ಕೆಲಸದ ಅಗತ್ಯ ಇದೆ. ದಯಮಾಡಿ ನನಗೆ ಕೆಲಸ ಕೊಡಿ... ಎಂದಳು ದೀನಳಾಗಿ.

ಸರಿ... ನಾನು ಕೆಲಸಕ್ಕೇ ನಿನ್ನನ್ನು ಕರೆದದ್ದು. ಚಿಂತಿಸಬೇಡ. ಏನೇನು ಕೆಲಸ ಆಗಬೇಕು ನಿನಗೆ ನಾಳೆ ತಿಳಿಸುತ್ತೇನೆ. ಈಗ ನಿನ್ನ ಉಳಿದುಕೊಳ್ಳುವ ರೂಮು ತೋರಿಸ್ತೇನೆ... ಬಾ... ಎಂದ್ಹೇಳಿ ಮನೆಯ ಹಿಂದಿರುವ ಸರ್ವೆಂಟ್ ರೂಮಿಗೆ ಕರೆದೊಯ್ದೆ. ಆಕೆ ತನ್ನ ಭಾರವಾದ ಒಂದು ಬ್ಯಾಗನ್ನು ಹೊತ್ತು ಹಿಂಬಾಲಿಸಿದಳು.

ಭಾಗ್ಯ ನಮ್ಮ ಮನೆಗೆ ಬಂದು ಅದಾಗಲೇ ತಿಂಗಳಾಯಿತು. ಬೇಗನೇ ಎಲ್ಲಾ ಕೆಲಸ ಕಲಿತುಕೊಂಡಿದ್ದಳು. ಅವಳ ಉತ್ತರ ಭಾರತದ ಅಡುಗೆಯ ರುಚಿಯನ್ನೂ ನಮಗೆ ಆಹಾರ ತಯಾರಿಸಿ ತಿನ್ನಿಸಿದಳು. ಒಂದಿನ ಭಾಗ್ಯ ತುಂಬಾ ಅತ್ತುಕೊಂಡಂತೇ ಕಣ್ಣು ಊದಿ ಕೆಂಪಗೆ ಕಾಣಿಸಿಕೊಂಡಾಗ ಅವಳನ್ನು ವಿಚಾರಿಸಿದೆ. ಆದಾಗಲೇ ಭಾಗ್ಯಳಿಗೆ ನನ್ನೊಂದಿಗೆ ಏನೋ ನಂಬಿಕೆ, ಒಳ್ಳೆಯ ಅಭಿಪ್ರಾಯ ಹುಟ್ಟಿಕೊಂಡಿತು. ನಾನು ಸಮಾಜ ಸೇವಕಿ ಮತ್ತು ಕಥೆಗಾರ್ತಿ ಎಂದು ಅವಳು ತಿಳಿದುಕೊಂಡಿದ್ದಳು.

ಮ್ಯಾಡಮ್... ಎಂದು ನನ್ನನ್ನು ಕರೆಯಬೇಡ... ನಿನಗೆ ಇಷ್ಟವಾದ್ರೆ ನನ್ನನ್ನು 'ಅಕ್ಕಾ' ಎಂದೇ ಕರೆ ಎಂದ್ಹೇಳಿದ್ದೆ... ಆತ್ಮೀಯತೆಯಿಂದ.

ಅಕ್ಕಾ... ನಾನು ನಿನ್ನೆ ರಾತ್ರಿ ಇಡೀ ನಿದ್ರೆ ಮಾಡಲಿಲ್ಲ. ನನ್ನ ಊರಿನಿಂದ ಫೋನ್ ಬಂದಿತ್ತು. ನನ್ನ ಆಂಟಿ... ಕಾಲ್ ಮಾಡಿದ್ದರು. ಅವರ ಮಾತು ಕೇಳಿ ಅತ್ತೂ... ಅತ್ತೂ... ಬೆಳಿಗ್ಗೆ ತನಕ ನಿದ್ರಿಸಲಿಲ್ಲ ಎಂದಳು.

ಯಾಕೆ... ಅಂತಹದ್ದು? ನಿನ್ನ ಆಂಟಿ ಏನು ಹೇಳಿದಳು... ದುಃಖಿಸಲು...! ನಾನು ಕೇಳಿದಾಗ,

ನಮ್ಮೂರಿನಲ್ಲಿ ನನ್ನ ಬಗ್ಗೆ ಜನರು ಕೆಟ್ಟದಾಗಿ ಮಾತನಾಡುತ್ತಿದ್ದಾರಂತೆ. ನಾನು ಗಂಡನನ್ನು ಬಿಟ್ಟು ಪ್ರಿಯಕರನೊಂದಿಗೆ ಪರಾರಿಯಾಗಿರುತ್ತೇನೆಂದು ಹೇಳುತ್ತಿದ್ದಾರೆ. ನನ್ನ ಆಂಟಿಗೆ ನಾನು ಕೆಲಸ ಹುಡುಕಿ ಬಂದಿರುವುದು ತಿಳಿದಿದೆ. ನಾನು ಅಂತಹ ದಾರಿತಪ್ಪಿದ ಹೆಣ್ಣಲ್ಲ. ಮಾನ ಮರ್ಯಾದೆಗಾಗಿ ಜೀವ ಬಿಡಲೂ ನಾನು ಸಿದ್ಧ ಎಂದಳು.

ನನಗೆ ಅವಳ ಮಾತು ಕೇಳಿ ಹಲವು ಪ್ರಶ್ನೆ ಹುಟ್ಟಿಕೊಂಡಿತು. ಏನಿವಳ ಕಥೆ?! ಕೆಲಸ ಹುಡುಕಿ ಇಷ್ಟು ದೂರಕ್ಕೆ ಒಂಟಿಯಾಗಿ ಬಂದಿದ್ದಾಳೆ? ಗಂಡ ಇದ್ದಾನೆ, ಮಕ್ಕಳಿವೆ, ದೊಡ್ಡ ಕುಟುಂಬ ಬಳಗವಿದೆ... ಇಂತಹ ಸುಂದರಿ ಹೆಣ್ಣು ಹೀಗೆ ಬಂದರೆ ಅವಳನ್ನು ಯಾರು ಕೂಡಾ ದುರುಪಯೋಗಿಸಬಹುದು...? ಸೌಂದರ್ಯವೇ ಹೆಣ್ಣಿನ ಮೊದಲ ಶತ್ರು.... ನಾನು ಚಿಂತಿಸುತ್ತಿರುವುದನ್ನು ಸೂಕ್ಷ್ಮವಾಗಿ ಅರಿತ ಭಾಗ್ಯ ನನ್ನ ಬಳಿ ಬಂದು, "ಅಕ್ಕಾ... ನೀವೂ ನನ್ನನ್ನು ಕೆಟ್ಟ ಹೆಂಗಸು, ಓಡಿ ಬಂದವಳೆಂದು ತಿಳಿಯಬೇಡಿ. ನಾನು ನನ್ನ ಮಕ್ಕಳಿಗಾಗಿ ಊರು ತೊರೆದು ಬಂದೆ. ನಮ್ಮೂರಿನಲ್ಲಿ ಮನೆ ಕೆಲಸ ಮಾಡಿದರೆ ಕುಟುಂಬಕ್ಕೆ ಮರ್ಯಾದೆ ಇರಲ್ಲ... ನಾವು ಕೃಷಿಕರು. ನನ್ನ ಪತಿ ರೈತ. ಒಂದು ಸಮಯದಲ್ಲಿ ತುಂಬಾ

ಹದಿನೈದು ವರ್ಷಕ್ಕೆ ಮದುವೆ ಬೇಡ ಎಂದು ಅತ್ತು ಕೂಗಿ ರಂಪಾಟ ಮಾಡಿ ಉಪವಾಸ ಮಲಗಿದ್ದೆ. ಆದ್ರೆ ಅಮ್ಮನಿಗೆ ಆರೋಗ್ಯ ಹೆಚ್ಚು ಕೆಡುತ್ತಾ ಹೋದಾಗ 'ನಾನು ಸಾಯುವ ಮೊದಲು ಮದುವೆ ಆಗು' ಎಂದು ಹಠ ಹಿಡಿಯತೊಡಗಿದಳು. ಅಳುತ್ತಲೇ ಹಸೆಮಣೆ ಏರಿದ್ದೆ.

ಅನುಕೂಲತೆಯಿಂದ ಬದುಕಿದ್ದ ಕುಟುಂಬ. ಇಂದು ಭೂಮಿ ಕಳೆದುಕೊಂಡು ಬೇರೆಯವರ ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದಾರೆ ನನ್ನ ಪತಿ. ನನ್ನ ಇಬ್ಬರು ಮಕ್ಕಳು ಹೈಸ್ಕೂಲ್ ಓದುತ್ತಿದ್ದಾರೆ. ಅವರಿಗೆ ಉನ್ನತ ಶಿಕ್ಷಣ ಪಡೆಯುವ ಆಸೆ. ದಕ್ಷಿಣ ಭಾರತದಲ್ಲಿ ಒಳ್ಳೆಯ ಸಂಬಳವಿದೆ ಎಂದು ನನ್ನ ಗೆಳತಿ ನನ್ನನ್ನು ಇಲ್ಲಿಗೆ ಕರೆತಂದಳು. ಅವಳು ಒಂದು ಶ್ರೀಮಂತರ ಮನೆಯಲ್ಲಿ ಹಲವು ವರ್ಷದಿಂದ ಕೆಲಸ ಮಾಡುತ್ತಾ ಊರಲ್ಲಿ ಮನೆ ಕೂಡಾ ಕಟ್ಟಿಸಿದ್ದಾಳೆ. ನಾನೂ ಕನಸನ್ನು ಹೊತ್ತು ಇಲ್ಲಿಗೆ ಬಂದೆ. ನನ್ನ ಪತಿಗೆ, ಮಕ್ಕಳಿಗೆ ತಿಳಿದಿದೆ ಈ ಊರಿಗೆ ನಾನು ಬಂದಿರುವುದು... ಅವರೇ ನನ್ನನ್ನು ರೈಲು ಹತ್ತಿಸಿದ್ದರು. ಪ್ರಿಯಕರ ಯಾರೂ ಇಲ್ಲ ನನಗೆ. ಇರುತ್ತಿದ್ದರೆ ನಾನು ಮದುವೆಯ ದಿನವೇ ಓಡಿ ಹೋಗುತ್ತಿದ್ದೆ. ಮೂಕ ಗಂಡನ ಸಹವಾಸ ಬೇಡವೆಂದೂ... ಆಕೆ ತಲೆತಗ್ಗಿಸಿ ಕಣ್ಣೊರೆಸಿಕೊಂಡಳು.

ನಾನು ಅವಳ ಕೊನೆಯ 'ಮೂಕ' ಎಂಬ ಪದ ಕೇಳಿ ಅಚ್ಚರಿಯಿಂದ ಹುಬ್ಬೇರಿಸಿದೆ.

ಅಕ್ಕಾ... ನನ್ನ ಪತಿ ಮೂಗ. ಮಾತನಾಡಲು ಆಗದ ಹುಟ್ಟು ಮೂಗ.

ನೀನು... ಇಷ್ಟೊಂದು ಸೌಂದರ್ಯವತಿಯಾಗಿದ್ದು, ಚುರುಕಿನ ಹೆಣ್ಣಾಗಿ ಈ ಮದುವೆಗೆ ಒಪ್ಪಿದೆಯಾ? ನಾನು ಕೂತುಹಲದಿಂದ ಕೇಳಿದೆ.

ಇಲ್ಲ... ಅಕ್ಕಾ, ನನಗೆ ಮದುವೆ ಆದಾಗ ಹದಿನೈದು ವರ್ಷ. ನಾನು ಕಾಲೇಜು ಕಲಿಯಬೇಕೆಂಬ ಕನಸು ಕಾಣುತ್ತಿದ್ದೆ. ವಯಸ್ಸಿಗೆ ಹೆಚ್ಚು ಉದ್ದ, ದಪ್ಪವಾಗಿ ನಾನು ದೊಡ್ಡವಳಂತೆ ಬೆಳೆದು ನಿಂತಾಗ ನನ್ನನ್ನು ವಿವಾಹ ಆಗಲು ನಮ್ಮೂರಿನ ಜಮೀನ್ದಾರರ ಮಗ ಆಸೆ ಪಟ್ಟ. ನನ್ನ ರೂಪಕ್ಕೆ ಮರಳಾದ ಆ ಯುವಕನಿಗೆ ಮಗಳನ್ನು ಕೊಡಲು ಅಪ್ಪನಿಗೆ ಮನಸ್ಸಿರಲಿಲ್ಲ. ಕಾರಣ ಪೋಲಿ ಹುಡುಗ, ಜೂಜುಕೋರ. ದುಡ್ಡಿನ ಪವರ್‌ನಿಂದ ಆಗಾಗ ಜೈಲಿನಿಂದ ಹೊರಗೆ ಬರುತ್ತಿದ್ದ. ಅಪ್ಪ ತೀರಿಕೊಂಡಾಗ ಅಮ್ಮನಿಗೆ ತುಂಬಾ ಭಯ ಹುಟ್ಟಿತು. ಹೇಗಾದರೂ ನನ್ನನ್ನು

ವಿವಾಹ ಮಾಡಿ ದೂರ ಕಳಿಸಿ ಬಿಟ್ಟರೆ ಈ ರೌಡಿಯ ಬೆದರಿಕೆ ನಿಲ್ಲಬಹುದು ಎಂದು ಚಿಂತಿಸಿದರು. ನನಗೆ ಪಕ್ಕದ ಊರಿನ ರೈತ ಕುಟುಂಬದ ಯುವಕನ ಸಂಬಂಧ ಬಂದಾಗ ಅಮ್ಮ ಖುಷಿ ಗೊಂಡರು. ಯುವಕ ನೋಡಲು ಚೆನ್ನಾಗಿ ದ್ದಾನೆ. ತುಂಬಿದ ಕುಟುಂಬ. ಕೃಷಿ ಇದೆ. ಅಮ್ಮ ರೋಗಿ ಮಹಿಳೆಯಾಗಿದ್ದಳು. ತಾನು ಸಾಯುವ ಮೊದಲು ಮಗಳಿಗೆ ಮದುವೆ ಮಾಡಿ ಬಿಡಬೇಕೆಂಬ ಚಿಂತೆ ಆಕೆಗೆ. ನನಗೆ ಗಂಡು ಬಂದು ನೋಡಿ ಹೋದಾಗ ಆತ ಮೂಗ ಎಂದು ನಮಗೆ ಯಾರಿಗೂ ತಿಳಿಯಲಿಲ್ಲ. ನನಗೆ 'ಮದುವೆ' ಬಗ್ಗೆ ಏನೂ ತಿಳಿಯದ ಚಿಕ್ಕ ವಯಸ್ಸು. ಹದಿನೈದು ವರ್ಷಕ್ಕೆ ಮದುವೆ ಬೇಡ ಎಂದು ಅತ್ತು ಕೂಗಿ ರಂಪಾಟ ಮಾಡಿ ಉಪವಾಸ ಮಲಗಿದ್ದೆ. ಆದ್ರೆ ಅಮ್ಮನಿಗೆ ಆರೋಗ್ಯ ಹೆಚ್ಚು ಕೆಡುತ್ತಾ ಹೋದಾಗ ನಾನು ಸಾಯುವ ಮೊದಲು ಮದುವೆ ಆಗು ಎಂದು ಹಠ ಹಿಡಿಯ ತೊಡಗಿದಳು. ಅಳುತ್ತಲೇ ಹಸೆಮಣೆ ಏರಿದ್ದೆ. ಮದುಮಗಳಾಗಿ ಮೊದಲ ರಾತ್ರಿ ಗಂಡನ ರೂಮಿಗೆ ಬಂದ ನನಗೆ ಮದುಮಗ ಮೂಗ ಎಂದು ತಿಳಿದಾಗ ನಾನು ಬೆಚ್ಚಿಬಿದ್ದೆ. ರೂಮಿನಿಂದ ಹೊರಗೆ ಓಡಿ ಬಂದ ನನ್ನನ್ನು ನಾದಿನಿಯರು ತಲೆಗೂದಲು ಹಿಡಿದು ರೂಮಿನೊಳಗೆ ತಳ್ಳಿದರು. ದೃಢಕಾಯ ಶರೀರದ ನನ್ನ ಪತಿ ಕೈ ಸನ್ನೆ ಹಾವಭಾವದಿಂದ ನನಗೆ ಸಮಾಧಾನ ಮಾಡಲು ಪ್ರಯತ್ನಿಸಿದರು. ನನ್ನ ಬದುಕೇ ನುಚ್ಚುನೂರಾದ ಮೂಕ ಸಂಕಟದಲ್ಲಿ ನಾನು ಕಣ್ಣೀರು ಹಾಕುತ್ತಾ ಕುಳಿತೆ. ಮೈ ಸ್ಪರ್ಶಿಸಲು ಬಂದ ಪತಿ ಯನ್ನು ದೂರ ತಳ್ಳಿದಾಗ ಆತನ ಬಲವಾದ ಕೈಯು ನನ್ನ ಕೋಮಲವಾದ ಕಪಾಳಕ್ಕೆ ಬಿದ್ದ ರಭಸಕ್ಕೆ ನಾನು ಮೂರ್ಛೆ ತಪ್ಪಿ ಬಿದ್ದೆ. ಪ್ರತೀ ರಾತ್ರಿ ಆತ ನನ್ನನ್ನು ಹೊಡೆಯುತ್ತಿದ್ದ. ಅತ್ಯಾಚಾರವೇ ನಡೆಯು ತ್ತಿತ್ತು. ಮನಸ್ಸು ಒಲ್ಲದ, ಪ್ರೀತಿಯೇ ಹುಟ್ಟದ ಬಾಳಸಂಗಾತಿಯೊಂದಿಗೆ ನಾನು ಬದುಕಬೇಕಾಯಿತು. ಅಳಿಯನಿಗೆ ಮಾತು ಬರುವುದಿಲ್ಲ ಎಂಬ ಸತ್ಯ ತಿಳಿದಾಗ ಅಮ್ಮ ಕುಸಿದು ಬಿದ್ದಳು. ಜಮೀನ್ದಾರನ ಮಗನೇ ನನಗೆ ಈ ಸಂಬಂಧ ಗಟ್ಟಿ ಗೊಳಿಸಲು ಬ್ರೋಕರ್‌ಗೆ ಹಣ ನೀಡಿದ್ದ ಎಂದು ತಿಳಿಯಿತು. ತನಗೆ ಸಿಗದ ಹೆಣ್ಣು ಮೂಗನಿಗೆ ಮದುವೆ ಆಗಿ ಹೋಗಲು ಆತ ತಂತ್ರ ಹೂಡಿದ್ದ. ಅಮ್ಮನನ್ನೂ ಕಳೆದುಕೊಂಡ ನಾನು ಅನಾಥಳಾದೆ. ಇನ್ನು ಎಲ್ಲಿಗೆ ಹೋಗಲಿ? ಯಾರೂ ನನ್ನವರಿಲ್ಲ... ಇದು ನನ್ನ ಭಾಗ್ಯ. ಹಣೆ ಬರಹ... ಎಂದು ಬದುಕನ್ನು ಒಪ್ಪಿಕೊಂಡೆ. ನನಗೆ ಪತಿಯ ಮೇಲೆ ಎಂದೂ ಪ್ರೀತಿ ಹುಟ್ಟಲಿಲ್ಲ. ಆದ್ರೆ... ಅವರು ದುಷ್ಟನಾಗಿರ ಲಿಲ್ಲ. ನನ್ನನ್ನು ತುಂಬಾ ಪ್ರೀತಿಸಿದರು. ಪ್ರತೀ ರಾತ್ರಿ ನಾನು ಒಲ್ಲದ ಮನಸ್ಸಿ ನಿಂದಲೇ ಅವರ ಬಳಿ ಇರುತ್ತಿದ್ದೆ. ನನ್ನ ಮೊದಲ ಮಗುವನ್ನು ಹುಟ್ಟಿದ ಕೂಡಲೇ ನನ್ನ ಅತ್ತೆಯವರು ಹಾಲು ಕುಡಿಸಲೂ ಅವಕಾಶ ಕೊಡದೇ ಎತ್ತಿಕೊಂಡು ಹೊರಗೆ

"ತೂಕದಲ್ಲಿ ಕಡಿತಗೊಳಿಸಿ ಕೊಡುವವರಿಗೆ ವಿನಾಶವಿದೆ. ಅವರು ಜನರಿಂದ ಪಡೆಯುವಾಗ ಸಂಪೂರ್ಣವಾಗಿ ಪಡೆಯುತ್ತಾರೆ ಮತ್ತು ಅಳತೆ ಮಾಡಿ ಅಥವಾ ತೂಕ ಮಾಡಿ (ಜನರಿಗೆ) ಕೊಡುವಾಗ ಕಡಿಮೆ ಕೊಡುತ್ತಾರೆ." [ಪವಿತ್ರ ಕುರ್‌ಆನ್: 83: 1–3]

WITH BEST WISHES FROM;

AYYUB KHAN SAGAR

SHIMOGA

WITH BEST COMPLIMENTS FROM

TANVEER

Mob: 9986712711

SAGAR FOOTWEAR

DEALERS IN ALL KINDS OF FOOTWEAR

Down Floor, Sagar Laboratory, J.C. Road, SAGAR-577401, Karnataka

ಹೋದಾಗ ನಾನು ದಿಗ್ಭ್ರಮೆಯಿಂದ ಚೀರಾಡಿದೆ. ಅತ್ತೆಯು ನನ್ನ ಬಾಯಿಯನ್ನು ಅದುಮಿ ದುರುಗುಟ್ಟಿ ಹೇಳಿದರು, ಈ ಮಗುವನ್ನು ನೀನು ಹೆರಲೇ ಇಲ್ಲ ಎಂದು ತಿಳಿಯಬೇಕು. ನಿನಗೆ ಎರಡನೇ ಮಗು ಹುಟ್ಟಿದರೆ ಅದನ್ನು ನೀನೇ ಬೆಳೆಸು. ಆದ್ರೆ... ಈ ಗಂಡು ಮಗುವನ್ನು ನಿನ್ನ ನಾದಿನಿಗೆ ಉಡುಗೊರೆ ಆಗಿ ನೀಡು. ಆಕೆಗೆ ವಿವಾಹ ಆಗಿ ಹಲವು ವರ್ಷ ಆಯಿತು. ಮಗುವಿಗಾಗಿ ಕೊರಗಿ ಸಾಯುತ್ತಿರುವ ನನ್ನ ಮಗಳ ಮಡಿಲಿಗೆ ಈ ಮಗುವನ್ನು ನಾನು ಹಾಕುತ್ತೇನೆ... ಇದನ್ನು ಮರೆತು ಬಿಡು... ಎಂದಾಗ ನಾನು ನನ್ನ ಬಳಿ ನಿಂತ ಪತಿಯ ಕೈಗಳನ್ನು ಹಿಡಿದು ಜೋರಾಗಿ ಅತ್ತು ಕೊಂಡೆ. ಒಂಭತ್ತು ತಿಂಗಳು ಗರ್ಭದಲ್ಲಿಟ್ಟು ನನ್ನ ರಕ್ತವನ್ನು ನೀಡಿ ನೋವು ತಿಂದು ಜನ್ಮ ನೀಡಿದ್ದೆ. ನನ್ನ ಮಡಿಲನ್ನು ಬರಿದು ಮಾಡಬೇಡಿ... ಎಂದು ಗೋಗರೆದೆ. ಪತಿ ಮಾತ್ರ ಕಲ್ಲಿನಂತೇ ತಣ್ಣಗೆ ಕುಳಿತಿ ದ್ದರು. ಅಮ್ಮನ ಮುಂದೆ ಕುರಿಯಂತೇ ಕುಳಿತ ಪತಿಯನ್ನು ಕಂಡು ತಿರಸ್ಕಾರ ಹುಟ್ಟಿತು. ಮಗುವನ್ನು ಕಳೆದುಕೊಂಡ ನನಗೆ ಬದುಕೇ ಬೇಡ ಅನಿಸುತ್ತಿತ್ತು. ಏನಾದ್ರೂ ಸರಿ ನನ್ನ ಮಗುವನ್ನು ಹಿಂದಿರುಗಿ ಪಡೆಯಲೇ ಬೇಕೆಂದು ನಾನು ನಾದಿನಿಯ ಊರಿಗೆ ಪ್ರಯಾಣಿಸಿದೆ. ಆದ್ರೆ ಅಲ್ಲಿ ನನ್ನನ್ನು ಅವಮಾನಿಸಿ ಕೆನ್ನೆಗೆ ಹೊಡೆದು ಬೀದಿಗೆ ತಳ್ಳಿದರು. ನಾನು ನನ್ನ ಮಗುವನ್ನು ಶಾಶ್ವತವಾಗಿ ಕಳೆದು ಕೊಂಡೆ ಅಂದೇ ನಂತರ ನನಗೆ ಎರಡನೇ ಮಗು ಹುಟ್ಟಿದಾಗ ಅದನ್ನು ಯಾರೂ ಸ್ಪರ್ಶಿಸದಂತೇ ಸದಾ ಎದೆಗೆ ಅಪ್ಪಿಕೊಂಡೇ ದಿನಗಳೆದೆ. ನನ್ನ ಬದುಕು ಕೇವಲ ಮಕ್ಕಳ ಖುಷಿಗಾಗಿ ಮೀಸಲಾಗಿತ್ತು. ನನ್ನ ರೂಪವೇ ನನಗೆ ಹಲವು ಬಾರಿ ಸಂಕಷ್ಟಗಳ ದಾರಿಯಾಗುತ್ತಿತ್ತು.

ಹಬ್ಬ ಅಥವಾ ಬೇರೆ ಯಾವುದೇ ಶುಭಕಾರ್ಯಗಳಿಗೆ ಮನೆಯಲ್ಲಿ ಎಲ್ಲರೂ ಹೊಸ ಸೆಲ್ವಾರ್ ಸೀರೆ ಉಟ್ಟರೆ ನನಗೆ ಮಾತ್ರ ಹೊಸ ವಸ್ತ್ರ ಇಲ್ಲ. ಅತ್ತೆ, ನಾದಿನಿಯರು ನನ್ನನ್ನು ಹೀಯಾಳಿಸುತ್ತಾ ನಿನ್ನ ಗಂಡ ಮೂಗ. ಅವನಿಗೆ ಮಾತ್ರ ನೀನು ಚೆಂದ ಕಂಡರೆ ಸಾಕು. ನೀನು ಹೊಸ ವಸ್ತ್ರ ಧರಿಸಿದರೆ ನಮ್ಮ ಬೀದಿಯ ಯುವಕರ ಕಣ್ಣು ನಿನ್ನ ಮೇಲೆ ಇರುತ್ತದೆ. ನಾನು ಕಾಡಿಗೆ ಕಣ್ಣಿಗೆ ಹಚ್ಚಬಾರದು, ತಲೆ ಬಾಚಿ ಹೂವು ಮುಡಿಯಬಾರದು, ಕೈಗಳಿಗೆ ಮೆಹಂದಿ ಹಾಕಬಾರದು ಎಷ್ಟು ನಾನು ಹಳೆ ವಸ್ತ್ರ ಧರಿಸಿ ಕೊಳಕಾಗಿ ಇರುತ್ತೇನೋ... ಅಷ್ಟು ಖುಷಿ ನನ್ನ ಅತ್ತೆಗೆ. ನನ್ನ ಮಗ ಮೂಗ ಎಂದು ನೀನು ಶೃಂಗಾರ ಮಾಡಿಕೊಂಡರೆ ನಿನ್ನನ್ನು ಗೊಬ್ಬರದ ಹುಂಡಿ ಒಳಗೆ ಹೂತು ಹಾಕುತ್ತೇನೆ... ಎನ್ನುತ್ತಿದ್ದರು. ನಾನು ನನ್ನ ಮುಖವನ್ನು ಕನ್ನಡಿಯಲ್ಲಿ ನೋಡುವುದನ್ನೇ ಮರೆತಿದ್ದೇನೆ. ನಾನು 'ಹೆಣ್ಣು' ಎಂಬುವು ದನ್ನೇ ಮರೆತಿದ್ದೇನೆ. ಮಕ್ಕಳಿಬ್ಬರು ದೊಡ್ಡ ದಾಗಿದ್ದಾರೆ. ಅವರಿಗೆ ನನ್ನ ಮೇಲೆ ತುಂಬಾ ಕರುಣೆ. "ಅಮ್ಮಾ... ನಾನು ಕಲಿತು ದೊಡ್ಡ ಉದ್ಯೋಗ ಹೊಂದಬೇಕು. ನಿನ್ನನ್ನು ಈ ನರಕದಿಂದ ಪಾರು ಮಾಡಿ ಕರೆದೊಯ್ಯುತ್ತೇನೆ. ನಿನ್ನ ಬದುಕು ನೋಡಿ ನಾನು ತುಂಬಾ ಕಲಿತಿದ್ದೇನೆ..." ಅನ್ನುತ್ತಾಳೆ. ಇಂದು ನಾನು ಕೆಲಸ ಹುಡುಕಿ ಮನೆ ಯಿಂದ ಹೊರಗೆ ಬರಲಿಕ್ಕೆ ಕಾರಣವೇ ನನ್ನ ಪತಿ. ಕುತ್ತಿಗೆ ಮುಳುಗುವಷ್ಟು 'ಸಾಲ' ಮಾಡಿ ಜನರಿಂದ ಹೊಡೆತ ತಿನ್ನುವ ಪರಿಸ್ಥಿತಿ ಬಂದಾಗ ನನ್ನನ್ನು ದುಡಿದು ಹಣ ತರಲು ಒತ್ತಾಯಿಸಿದರು. ಈಗ ಊರಿನಲ್ಲಿ 'ಸಾಲ' ತೀರಿಸಲು ದುಡ್ಡು ಕೊಟ್ಟವರು ಉಪದ್ರ ಮಾಡುತ್ತಿ ದ್ದಾರೆ. ನಿಮ್ಮ ಸೊಸೆಯು ಸಾಲಗಾರ ಪತಿಯ ಸಹವಾಸ ಸಾಕೆಂದು ಪರ ಪುರುಷನೊಂದಿಗೆ ಓಡಿ ಹೋಗಿದ್ದಾಳೆಂದು ನನ್ನೂರಲ್ಲಿ ಕಥೆ ಕಟ್ಟುತ್ತಿದ್ದಾರೆಂದು ಅತ್ತೆ ಯಿಂದ ಸುದ್ದಿ ಬಂತು. ಪತಿಗೆ ಮಾತು ಬರದ್ದರಿಂದ ಹೇಳುವವರಿಗೆ ಉತ್ತರ ನೀಡಲು ಅವರಿಗೆ ಆಗದು. ಅತ್ತೆ ನನ್ನನ್ನು ಊರ ಜನರ ಮುಂದೆ ಹಾದರಗಿತ್ತಿ... ಓಡಿ ಹೋಗಿದ್ದಾಳೆಂದು ಸುಳ್ಳು ಹೇಳಿ ಮುಯ್ಯಿ ತೀರಿಸುತ್ತಿದ್ದಾರೆ. ನಾನೇನು ಮಾಡಲಿ...? ಮಕ್ಕಳನ್ನು ಕರೆದುಕೊಂಡು ಎಲ್ಲಿಗಾದರೂ ಹೋಗಿ ನೆಮ್ಮದಿಯಿಂದ ಬದುಕುವ ಅನಿಸುತ್ತದೆ. ಆದ್ರೆ.... ಎಲ್ಲಿದೆ ದಾರಿ? ಭಾಗ್ಯ ಮಾತು ನಿಲ್ಲಿಸಿ ತನ್ನ ಮುಖವನ್ನು ಮೊಣಕಾಲ ಒಳಗೆ ಮುಳುಗಿಸಿ ಬಿಕ್ಕುತ್ತಾ ಕುಳಿತಳು.

ಭಾಗ್ಯಳ ಬದುಕಿನ ಕಹಿಮುಖ ನನ್ನೆದುರು ಅನಾವರಣಗೊಂಡಿತ್ತು. ಅವಳ ತಲೆಯನ್ನು ನೇವರಿಸುತ್ತಾ, "ನೀನು ಸಮಾಜಕ್ಕೆ ಹೆದರಬೇಡ. ನಿನ್ನ ಮಕ್ಕಳು ನಿನ್ನ ಒಟ್ಟಿಗೆ ಇದ್ದಾರಲ್ಲಾ... ಅದಕ್ಕೇ ಸಂತೋಷ ಪಡು. ಜನರ ನಾಲಗೆಗೆ ಆಚಾರ ಎಂಬುವುದಿಲ್ಲ. 'ಸಾಲ' ತೀರಿಸಲು ನೀನು ಪ್ರಯತ್ನಿಸುವ ಅಗತ್ಯವಿಲ್ಲ. ನಿನ್ನ ಮಕ್ಕಳ ಶಿಕ್ಷಣದ ಬಗ್ಗೆ ಚಿಂತಿಸು. ನಾನು ನಿನ್ನ ಒಂದು ವೀಡಿಯೋ ಮಾಡುತ್ತೇನೆ. ನೀನು ನನ್ನ ಮನೆಯಲ್ಲಿ ನನ್ನೊಟ್ಟಿಗೆ ಬದುಕುತ್ತಿದ್ದಿ, ಕೆಲಸ ಮಾಡಿ ಗೌರವದಿಂದ ಇದ್ದಿ... ಎಂಬ ಸಂದೇಶವನ್ನು ಈ ನೀಡಿಯೋ ನಿನ್ನೂರಿನ ಜನರಿಗೆ ತಿಳಿಸು ತ್ತದೆ. ನನಗೆ ನಿನ್ನ ಮನೆಯವರ ಮತ್ತು ಪರಿಚಯದವರ ಫೋನ್ ನಂಬರ್ ಕೊಡು..." ಎಂದು ನಾನು ಭಾಗ್ಯಳಿಗೆ ಹೇಳಿ ಅವಳ ಮೇಲೆ ಬಂದಿರುವ ಅಪ ವಾದವನ್ನು ತೊಳೆದು ಹಾಕುವ ಕೆಲಸದಲ್ಲಿ ತೊಡಗಿಕೊಂಡೆ. ಭಾಗ್ಯಳ ಗಂಡ ಮತ್ತು ಮಕ್ಕಳನ್ನು ಮನೆಗೆ ಆಹ್ವಾನಿಸಿದೆ. ಅವರು ಒಂದು ಬೆಳಿಗ್ಗೆ ಮನೆಯಲ್ಲಿ ಪ್ರತ್ಯಕ್ಷವಾದಾಗ ಭಾಗ್ಯಳಿಗೆ ನಂಬಿಕೆಯೇ ಬರಲಿಲ್ಲ. ನಿಮ್ಮ ಪತ್ನಿ ನನ್ನ ಸಹೋದರಿಯಾಗಿ ನನ್ನ ರಕ್ಷಣೆಯಲ್ಲಿರುತ್ತಾಳೆ... ಅವಳು ದಾರಿತಪ್ಪಿದ ಹೆಣ್ಣಲ್ಲ. ಅವಳ ಹೆಜ್ಜೆಯು ಮಕ್ಕಳ ಒಳ್ಳೆಯ ಭವಿಷ್ಯಕ್ಕಾಗಿ ಮಾತ್ರವಾಗಿದೆ... ಎಂದಾಗ ಭಾಗ್ಯಳ ಪತಿಯು ಅರ್ಥವಾದವನಂತೇ ಕೈ ಜೋಡಿಸಿದ. ಭಾಗ್ಯ ಮಕ್ಕಳ ನಡುವೆ ಕುಳಿತು ಸಂಭ್ರಮದಿಂದ ಮಾತನಾಡುತ್ತಿರು ವುದನ್ನೇ ನೋಡುತ್ತಾ ನಾನು ನಸುನಗು ಬೀರಿದೆ. ಭಾಗ್ಯ ಎಂಬ ಹೆಸರನ್ನು ಹೊಂದಿಯೂ ಅಭಾಗ್ಯಳಾಗಿ ವಿಧಿಯು ಅವಳನ್ನು ವಂಚಿಸಿತ್ತು. ತನಗೆ ಸಾಧ್ಯವಾಗದ ಶಿಕ್ಷಣದ ಕನಸನ್ನು ತನ್ನ ಮಕ್ಕಳಿಗೆ ದೊರಕಿ ಸಲು ಅವಳು ಮನೆಕೆಲಸ ಮಾಡುವುದನ್ನು ಕಂಡಾಗ ಅದೆಷ್ಟು ತಾಯಂದಿರು ಹೀಗೆ ತಮ್ಮ ಬದುಕನ್ನು ಮೇಣದ ಬತ್ತಿಯಂತೇ ಕರಗಿಸಿ ಮಕ್ಕಳಿಗಾಗಿ ಉರಿಯುತ್ತಿರುತ್ತಾರೆ...! ನಿಟ್ಟುಸಿರೊಂದು ಹೊರ ಬಿತ್ತು...

❖ ❖ ❖

■ ಡಾ। ನಿಝಾಮುದ್ದೀನ್ ■

ಕಿಡ್ನಿಯನ್ನು ಹಾಳು ಮಾಡುವ ಜೀವನ ಶೈಲಿ



ಮನುಷ್ಯ ಶರೀರದ ಅತ್ಯಂತ ಮುಖ್ಯ ಅಂಗಗಳಲ್ಲಿ ಕಿಡ್ನಿಯೂ ಒಂದು. ಕಿಡ್ನಿಗಳಿಗೆ ಮುಖ್ಯವಾಗಿ ಮೂರು ಕೆಲಸಗಳಿವೆ. ಶರೀರದ ಜಲಾಂಶವನ್ನು ನಿಯಂತ್ರಿಸಿ ರಕ್ತದ ಸಾಂದ್ರತೆಯನ್ನು ಉಳಿಸಿಕೊಳ್ಳುವುದು. ಶರೀರಕ್ಕೆ ಅಗತ್ಯವಿಲ್ಲದ ವಿಷಯುಕ್ತ ಎಲ್ಲಾ ವಸ್ತುಗಳನ್ನು ದ್ರವರೂಪದಲ್ಲಿ ಮೂತ್ರದ ಮೂಲಕ ಹೊರಹಾಕುವುದು. ರಕ್ತದ ಆಲ್ಕಲೈನ್ ಉಳಿಸಿಕೊಳ್ಳುವುದು. ಮನುಷ್ಯನಿಗೆ 2 ಕಿಡ್ನಿಗಳಿವೆ. ಜೀವನವಿಡೀ ಮನುಷ್ಯನನ್ನು ಸಂರಕ್ಷಿಸಲು ಒಂದು ಕಿಡ್ನಿಗೆ ಸಾಧ್ಯವಿದೆ. ಆದರೆ ಆಧುನಿಕ ಮನುಷ್ಯ ಅವನ ಜೀವನಶೈಲಿಯಿಂದಾಗಿ ಅದನ್ನು ನಾಶಗೊಳಿಸುತ್ತಿದ್ದಾನೆ. ಓರ್ವ ಮನುಷ್ಯನಿಗೆ ಬದುಕಲು ಒಂದು ಕಿಡ್ನಿಯ ಅರ್ಧ ಕಾರ್ಯಕ್ಷಮತೆ ಮಾತ್ರ ಇದ್ದರೂ ಸಾಕಾಗುತ್ತದೆ.

ಪ್ರತಿಯೊಂದು ಕಿಡ್ನಿಯ ತೂಕ ಸುಮಾರು 140 ಗ್ರಾಂ ಇರುತ್ತದೆ. ಪ್ರತಿ ಒಂದು ಕಿಡ್ನಿಯಲ್ಲಿ 10 ಲಕ್ಷದಷ್ಟು ನೆಫರೋನ್ಸ್ ಇದೆ. ರಕ್ತವನ್ನು ಸೋಸಿ ಶುದ್ಧಗೊಳಿಸುವ ಕೆಲಸವನ್ನು ಈ ನೆಫರೋನ್ಸ್ ಮಾಡುತ್ತದೆ.

ಓರ್ವ ಮನುಷ್ಯನ ಆಯಸ್ಸು ಪೂರ್ತಿ ಉಳಿದುಕೊಳ್ಳಬೇಕಾದ ಕಿಡ್ನಿಯು ಅರ್ಧ ದಾರಿಯಲ್ಲೇ ತಕರಾರಿಗೆ ಒಳಗಾಗಲು ಕಾರಣ ಮನುಷ್ಯನೇ ಆಗಿದ್ದಾನೆ. ಕಿಡ್ನಿ ರೋಗಿಗಳಲ್ಲಿ 20% ಮಂದಿಗೆ ಮಾತ್ರ ವಂಶಪಾರಂಪರ್ಯವಾಗಿ, ಹುಟ್ಟಿನಿಂದ ಬರುತ್ತದೆ. ಉಳಿದ 80% ಮನುಷ್ಯರಲ್ಲಿ ಅವರ ಜೀವನಶೈಲಿಯಿಂದಾಗಿಯೇ ಇದು ಸಂಭವಿಸುತ್ತದೆ. ಎಲ್ಲಾ ರೀತಿಯ ಔಷಧಿಗಳು ಕಿಡ್ನಿಗೆ ಹಾನಿಯನ್ನುಂಟು ಮಾಡುತ್ತದೆ. ವಿಶೇಷವಾಗಿ ತಲೆನೋವು, ಹಲ್ಲುನೋವು, ಸೋಂಟನೋವು, ಗ್ಯಾಸ್ಟ್ರಬಲ್ ಇವುಗಳಿಗೆ ಸೇವಿಸುವ ಅಲೋಪತಿ ಮದ್ದುಗಳು, ಕಂಪೆನಿಗಳು ತಯಾರಿಸುವ ಆಯುರ್ವೇದ ಔಷಧಿಗಳು, ಲೇಹಗಳು, ಅರಿಷ್ಟಗಳು, ಕಾಸ್‌ಮೆಟ್ಟಿಕ್ ಐಟಂಗಳಾದ ಲಿಪ್‌ಸ್ಟಿಕ್, ವಿವಿಧ ರೀತಿಯ ಟಾಲ್ಕಂ ಪೌಡರ್‌ಗಳು, ನೈಲ್ ಪಾಲಿಶ್‌ಗಳು, ಮುಖ ಹಾಗೂ ಚರ್ಮ ಸೌಂದರ್ಯಕ್ಕಾಗಿ ಉಪಯೋಗಿಸುವ ಆಯಿಂಟ್‌ಮೆಂಟ್‌ಗಳು, ಕ್ರೀಮುಗಳು, ಕೂದಲು ಕಪ್ಪಾಗಲು ಉಪಯೋಗಿಸುವ ಡೈಗಳು, ಮಾರಕ ರಾಸಾಯನಿಕಗಳಿರುವ ನ್ಯೂಡೆಲ್ಸ್, ಬೇಕರಿ ಪದಾರ್ಥಗಳು, ಕೇಕ್‌ಗಳು, ಹೆಲ್ತ್ ಡ್ರಿಂಕ್ಸ್‌ಗಳು, ಮಿನರಲ್ ವಾಟರ್ ಸೇರಿದಂತೆ ತಂಪುಪಾನೀಯಗಳು, ಸಕ್ಕರೆ, ಸಾಕರೀನ್ ಒಳಗೊಂಡಿರುವ ಆಹಾರ ಪದಾರ್ಥಗಳು, ಅಮಿತ ಆಹಾರ, ಅಸಮಯದ ಆಹಾರ ಸೇವನೆ, ಅಮಿತ ಲೈಂಗಿಕತೆ, ಅಧಿಕ ಟೆನ್ಶನ್, ನಿದ್ರಾಹೀನತೆ, ನಿರಂತರ ದೀರ್ಘ ಡ್ರೈವಿಂಗ್, ಶುದ್ಧಜಲ ಕುಡಿಯುವುದರಲ್ಲಿ ತಡೆಯುಂಟು ಮಾಡುತ್ತದೆಯಲ್ಲದೆ

ಭವಿಷ್ಯದಲ್ಲಿ ಕಿಡ್ನಿರೋಗ ಉಂಟಾಗುತ್ತದೆ. ಒಮ್ಮೆ ಕಿಡ್ನಿಗೆ ತೊಂದರೆ ಗೋಚರಿಸಿದರೆ ಸ್ವಲ್ಪ ಕಾಲ ಅದನ್ನು ನಿಯಂತ್ರಿಸಲು ಸಾಧ್ಯವೇ ಹೊರತು ಸಂಪೂರ್ಣ ಪರಿಹಾರ, ಚಿಕಿತ್ಸಾ ಕ್ರಮವೂ ಯಾವುದೇ ವೈದ್ಯ ಶಾಸ್ತ್ರದಲ್ಲಿ ಇಲ್ಲ ಎಂಬುದು ಗಮನಾರ್ಹ. ಡಯಾಲಿಸಿಸ್, ಕಿಡ್ನಿಯ ಬದಲಾವಣೆ ಅದಕ್ಕೆ ಶಾಶ್ವತ ಪರಿಹಾರ ಅಲ್ಲ. ಅದು ನಿಯಂತ್ರಣ ಮಾತ್ರ ಎಂದು ನೆನಪಿಡಬೇಕು. ಆದ್ದರಿಂದ ನಮ್ಮ ಕಿಡ್ನಿಯ ಆರೋಗ್ಯವನ್ನು ರಕ್ಷಿಸಿಕೊಳ್ಳಬೇಕಾದುದು ನಮ್ಮ ಕರ್ತವ್ಯ ವಾಗಿದೆ. ಅದಕ್ಕಾಗಿ ಜಾಗರೂಕತೆಯಿಂದ ವ್ಯವಹರಿಸಬೇಕು.

ದೇಹದ ಪ್ರತಿಯೊಂದು ಅವಯವಕ್ಕೂ ತನ್ನ ಕ್ರಿಯೆಯ ಬಳಿಕ ಹೊರ ಹಾಕ ಬೇಕಾದ ಮಾಲಿನ್ಯವಿದೆ. ಮೂಗು ಕಫವನ್ನು ಹೊರ ತಳ್ಳುವಂತೆ, ಹೊಟ್ಟೆ ಮಲ ಹಾಗೂ ಮೂತ್ರವನ್ನು ಹೊರಹಾಕುತ್ತದೆ. ಚರ್ಮ ಬೆವರನ್ನು ಹೊರದೂಡುವಂತೆ ಎಲ್ಲವೂ ವಿಸರ್ಜನೆ ನಡೆಸುತ್ತದೆ. ಆದರೆ ಅದು ಸರಿಯಾದ ರೀತಿಯಲ್ಲಿ ಹೊರದೂಡ ಲ್ಪಡಬೇಕು. ಆ ವಿಸರ್ಜನಾ ಕ್ರಿಯೆಯು ಸರಿಯಾಗಿ ನಡೆಯದಿದ್ದರೆ ರಕ್ತದ ಆಲ್ಕಲೈನ್ ನಲ್ಲಿ ವ್ಯತ್ಯಾಸವುಂಟಾಗಿ ಅದು ರಕ್ತದ ಪಿ.ಹೆಚ್. ಲೆವಲ್‌ನಲ್ಲಿ ವ್ಯತ್ಯಾಸ ತಂದು, ರಕ್ತವನ್ನು ಶುದ್ಧಗೊಳಿಸುವ ಕಿಡ್ನಿಯನ್ನು ನಾಶಗೊಳಿಸುತ್ತದೆ. ವೈರಸ್‌ಗಳನ್ನು ಓಡಿ ಸಲು ನಾವು ಉಪಯೋಗಿಸುವ ಆ್ಯಂಟಿ ಬಯೋಟಿಕ್‌ಗಳು, ಆಹಾರವಾಗಿಯೂ ಔಷಧಿಯಾಗಿಯೂ ಉಪಯೋಗಿಸುವ ವಿಷಯುಕ್ತ ವಸ್ತುಗಳು ಎಲ್ಲವೂ ಕಿಡ್ನಿ ರೋಗವಾಗಿ ಬದಲಾಗುತ್ತದೆ. ನೆಫ್ರೈಟಿಸ್, ಪೈಲಟಿಸ್, ನೆಫ್ರೋನಿಸ್, ಸಿಸ್ಟೈಟಿಸ್, ರಕ್ತದೊತ್ತಡ ಹೀಗೆ ಹಲವು ಹೆಸರುಗಳುಳ್ಳ ಕಿಡ್ನಿಯ ರೋಗಗಳಿವೆ.

ಕಿಡ್ನಿಯು ಸರಿಯಾಗಿ ಕಾರ್ಯ ನಿರ್ವಹಿಸದಾಗ ವಿಷಾಂಶಗಳು ರಕ್ತದಲ್ಲಿ ತುಂಬಿಕೊಳ್ಳುತ್ತದೆ. ವಿಶೇಷವಾಗಿ ಯೂರಿಯ, ಯೂರಿಕ್ ಆ್ಯಸಿಡ್, ಕ್ರಿಯಾ ಟಿನ್‌ನ ಕ್ಷೀಣತೆ ಇದರ ಆರಂಭಿಕ ಲಕ್ಷಣ. ಕಿಡ್ನಿಯ ಕಾರ್ಯ ಮಂದಗತಿಯಿಂದ ಆಗುವಾಗ, ದೇಹದ ಎಲ್ಲಾ ಅವಯವಗಳ ಕಾರ್ಯವೂ ಮಂದವಾಗುತ್ತದೆ. ಅದು ಆಯಾಸಕ್ಕೆ ಕಾರಣವಾಗುತ್ತದೆ. ದೇಹದಲ್ಲಿ ನೀರಿನ ಅಂಶ ಉಳಿದುಕೊಂಡು ಮುಖ, ಕಾಲಿನ ಪಾದದಲ್ಲೂ ಬಾತುಕೊಳ್ಳುತ್ತದೆ. ಸಮಯ ಕಳೆದಂತೆ ಹೊಟ್ಟೆಯೂ ದೊಡ್ಡ ದಾಗುತ್ತದೆ. ಕಣ್ಣಿನ ದೃಷ್ಟಿ ಕಡಿಮೆಯಾಗಿ ತಲೆಗೆ ಭಾರವಾದಂತೆ ಅನಿಸುತ್ತದೆ. ತಲೆ ಗೂದಲಿನ ಬಣ್ಣ ಮಾಸುವುದು, ಯಾವಾ ಗಲೂ ನಿದ್ರಿಸೋಣವೆಂದು ಅನಿಸುವುದು, ಉಸಿರಾಟ ತೊಂದರೆ ಕಂಡು ಬರುವುದು ನಡೆಯುವಾಗ ಬೀಳುವಂತಹ ಅವಸ್ಥೆ ಬರುವುದು. ಇವೆಲ್ಲಾ ಕಿಡ್ನಿ ರೋಗದ ಲಕ್ಷಣಗಳಾಗಿವೆ. ಮೂತ್ರ ಮಾಡಿದರೂ, ಮೂತ್ರದಿಂದ ಹೊರಗೆ ಹಾಕಲ್ಪಡಬೇಕಾ ದುದು ಹೊರಗೆ ಹೋಗದಿರುವುದು. ಸಣ್ಣ ಜ್ವರ, ದೇಹದಲ್ಲಿ ಯಾವಾಗಲೂ ಚಳಿ ಗೋಚರಿಸುವುದು. ಇವು ಕೂಡಾ ಕಿಡ್ನಿ ರೋಗದ ಲಕ್ಷಣಗಳು. ■



ಎಳನೀರು ಪುಡ್ಡಿಂಗ್

ಬೇಕಾಗುವ ಸಾಮಗ್ರಿಗಳು:

ಎಳನೀರು– ಒಂದು ಬೊಂಡದ ನೀರು,
ಜೈನಾಗ್ರಾಸ್– 100 ಗ್ರಾಂ,
ಹಾಲು– 2 ಕಪ್,
ಕಂಡನ್ಸ್ ಮಿಲ್ಕ್– $^1/_2$ ಟಿನ್,
ಸಕ್ಕರೆ– ಆರು ಚಮಚ,
ಎಳನೀರು ತಿರುಳು ಹಿಚುಕಿದ್ದು– ಒಂದು,
ಏಲಕ್ಕಿ ಹುಡಿ– $^1/_2$ ಸ್ಪೂ.

ಮಾಡುವ ವಿಧಾನ:

ಜೈನಾಗ್ರಾಸನ್ನು ಎಳ ನೀರಿನಲ್ಲಿ ನೆನೆಸಿ, ಒಲೆಯಲ್ಲಿ ಇರಿಸಿ. ಕರಗಿಸಿ. ಇದಕ್ಕೆ ಹಾಲು ಕಂಡನ್ಸ್‌ಡ್ ಮಿಲ್ಕ್ ಸಕ್ಕರೆ ಸೇರಿಸಿ ಏಲಕ್ಕಿಯನ್ನೂ ಹಾಕಿದ ಬಳಿಕ ಅದನ್ನು ಪುಡ್ಡಿಂಗ್ ಪಾತ್ರೆಗೆ ಸುರಿದು ಗೋಡಂಬಿ, ಬಾದಾಮಿ ತುಂಡುಗಳನ್ನು ಅದರ ಮೇಲೆ ಹರಡಿ. ಮೂರ್ನಾಲ್ಕು ತಾಸು ಫ್ರಿಡ್ಜ್‌ನಲ್ಲಿಟ್ಟು ಬಳಿಕ ಸೇವಿಸಿರಿ.

ಕುಳ್ಫಿ

ಬೇಕಾಗುವ ಸಾಮಗ್ರಿಗಳು:

ಹಾಲು– 1 ಲೀಟರ್,
ಸಕ್ಕರೆ– 1 ಕಪ್,
ಕೂವೆ ಹುಡಿ– 1 ಚಮಚ,
ಬಾದಾಮಿ ಅರೆದದ್ದು– ಅಗತ್ಯಕ್ಕೆ,
ಕೇಸರಿದಳ– ಸ್ವಲ್ಪ,
ಏಲಕ್ಕಿ ಹುಡಿ– ಕಾಲು ಚಮಚ.

ಮಾಡುವ ವಿಧಾನ:

ಒಂದು ಪಾತ್ರೆಯಲ್ಲಿ ಹಾಲನ್ನು ಹಾಕಿಕೊಂಡು ಕುದಿಯಲು ಇಡಬೇಕು. ಹಾಲು ಹಾಕಿದೊಡನೆಯೇ ಸಕ್ಕರೆಯನ್ನು ಹಾಕಬೇಕು. ಏಲಕ್ಕಿ ಒಂದು ಚಮಚ ಹಾಕಿಕೊಂಡು ಕೇಸರಿ ದಳವನ್ನು ಸ್ವಲ್ಪ ಸೇರಿಸಿ. ಮೀಡಿಯಂ ಬಿಸಿಯಲ್ಲಿ ಇಟ್ಟುಕೊಂಡು ಹಾಲು $^1/_2$ ಲೀಟರ್ ಆಗುವವರೆಗೆ ಚೆನ್ನಾಗಿ ಕುದಿಸಿ. ಕೆನೆ ಕಟ್ಟಲು ಬಿಡದೆ ಚೆನ್ನಾಗಿ ಕೈ ಆಡಿಸ್ತಾನೆ ಇರಿ. ಒಂದು ಸ್ಪೂನ್ ಕೂವೆ ಹುಡಿಯನ್ನು ಹಾಕಿ (ಕಾನ್‌ಫ್ಲೋರ್ ಆಗ್ತದೆ) ಚೆನ್ನಾಗಿ ಕುದಿದು ಸ್ವಲ್ಪ ಮುದ್ದೆಯಾದ ಬಳಿಕ ಅದಕ್ಕೆ ಡ್ರೈ ಫ್ರುಟ್ಸ್ ಹಾಕಿ ಚೆನ್ನಾಗಿ ಕಲಸಿ. ತಣ್ಣಗಾದ ಬಳಿಕ ಕುಳ್ಫಿ ಮೋಡ್‌ಗೆ ಹಾಕಿ ಫ್ರೀಝರ್‌ನಲ್ಲಿಡಿ. (8ರಿಂದ 12 ಗಂಟೆ ಇಡಿ).

ಮಾವಿನ ಹಣ್ಣಿನ ಪುಡ್ಡಿಂಗ್

ಬೇಕಾಗುವ ಸಾಮಗ್ರಿಗಳು:

ಮಾವಿನ ಹಣ್ಣಿನ ರಸ– 1 ಕಪ್,
ಮೊಟ್ಟೆ– 4,
ಹಾಲು– 1 ಕಪ್,
ಏಲಕ್ಕಿ ಹುಡಿ– $^1/_2$ ಸ್ಪೂ.

ಮಾಡುವ ವಿಧಾನ:

ಮೊಟ್ಟೆಯ ಬಿಳಿ ಭಾಗ ಮತ್ತು ಸಕ್ಕರೆಯನ್ನು ಸೇರಿ ಚೆನ್ನಾಗಿ ಮಿಕ್ಸ್ ಮಾಡಿ. ಬಳಿಕ ಹಳದಿಯನ್ನೂ ಸೇರಿಸಿ ಮಿಕ್ಸ್ ಮಾಡಿ. ಬಳಿಕ ಹಾಲು, ಹಣ್ಣಿನ ರಸ, ಏಲಕ್ಕಿ ಹುಡಿ ಸೇರಿಸಿ. ಬಳಿಕ ತುಪ್ಪ ಸವರಿದ ಪಾತ್ರೆಗೆ ಸುರಿದು ಆವಿಯಲ್ಲಿ ಬೇಯಿಸಿ. ಫಾಯಿಲ್ ಪೇಪರ್ ಇಟ್ಟೇ ಬೇಯಿಸಲು ಇಡಿ. ತಣ್ಣಗಾದ ಬಳಿಕ ಸೇವಿಸಬಹುದು.

ಬಾದಾಮ್ ಮಿಲ್ಕ್

ಬೇಕಾಗುವ ಸಾಮಗ್ರಿಗಳು:

ಹಾಲು– 2 ಕಪ್,
ಬಾದಾಮಿ– 10 (ಕುದಿಸಿದ ನೀರಿಗೆ ಹಾಕಿ ಸಿಪ್ಪೆ ತೆಗೆದು ಅರೆದದ್ದು),
ಸಕ್ಕರೆ– ಅಗತ್ಯಕ್ಕೆ,
ಕುಂಕುಮ ಹೂ– ಒಂದು ಸಣ್ಣ ಚಮಚ ಹಾಲಿನಲ್ಲಿ ಬೆರೆಸಿದ್ದು,
ಏಲಕ್ಕಿ ಹುಡಿ– ಸಣ್ಣ ಚಮಚ,
ಬಾದಾಮ್ ತುಂಡು ಹುರಿದದ್ದು – 1 ಸಣ್ಣ ಚಮಚ.

ಅನುಪಮ ಚಂದಾ ದರ

	ಭಾರತದಲ್ಲಿ	ಗಲ್ಫ್ ರಾಷ್ಟ್ರಗಳಲ್ಲಿ
ವಾರ್ಷಿಕ	ರೂ. 250/-	ರೂ. 1000/-
ದ್ವೈವಾರ್ಷಿಕ	ರೂ. 500/-	ರೂ. 2000/-
ಬಿಡಿ ಪ್ರತಿ	ರೂ. 20/-	---

ಶೃಂಗಾರ

ಮಾಡುವ ವಿಧಾನ:

ಹಾಲನ್ನು ಒಲೆಯಲ್ಲಿಟ್ಟು ಅದಕ್ಕೆ ಬಾದಾಮಿಯನ್ನು ಹಾಕಿ ಬಳಿಕ ಸಕ್ಕರೆಯನ್ನು ಹಾಕಿ ಚೆನ್ನಾಗಿ ಕಲಸಿ. ಕುಂಕುಮ ಹೂ ಮತ್ತು ಏಲಕ್ಕಿಯನ್ನು ಸೇರಿಸಿ. ಕುದಿದ ಬಳಿಕ ಕೆಳಗಿರಿಸಿ ತಣ್ಣಗಾಗಲು ಬಿಡಿ. ಫ್ರಿಡ್ಜ್‌ನಲ್ಲಿಟ್ಟು ತಣ್ಣಗಾದ ಬಳಿಕ ಗ್ಲಾಸಿಗೆ ಸುರಿದು, ಹುರಿದ ಬಾದಾಮಿಗಳಿಂದ ಅಲಂಕರಿಸಿ.

ಗುಲಾಬ್ ಜಾಮೂನ್

ಬೇಕಾಗುವ ಸಾಮಗ್ರಿಗಳು:

ಗುಲಾಬ್ ಜಾಮೂನ್ ಪೌಡರ್– 100 ಗ್ರಾಂ,
ಹಾಲು– $^1/_4$ ಕಪ್,
ಏಲಕ್ಕಿ– $^1/_2$ ಸ್ಪೂ.,
4 ಹನಿ– ಲಿಂಬೆ ರಸ,
ತುಪ್ಪ– 1 ಸ್ಪೂ.,
ಎಣ್ಣೆ– ಕಾಯಿಸಲು,
ಸಕ್ಕರೆ– 300 ಗ್ರಾಂ.

ಮಾಡುವ ವಿಧಾನ:

ಒಂದು ಬೌಲ್‌ಗೆ ಗುಲಾಬ್ ಜಾಮೂನ್ ಹುಡಿಯನ್ನು ಹಾಕಿ. ಕೋವಾ ಇದ್ದರೆ ಅದನ್ನೂ ಮಿಕ್ಸ್ ಮಾಡಬಹುದು. ಬಳಿಕ ಹಾಲನ್ನು ಹಾಕಿ ಚೆನ್ನಾಗಿ ಕಲಿಸಿ ಚಪಾತಿ ಹಿಟ್ಟಿನಂತೆ ಕಲಸಿದರೆ ಸೋಫ್ಟ್ ಆಗಿರಲ್ಲ. ಕೈ ಅಂಟುವ ರೀತಿಯಲ್ಲಿರಲಿ. 10 ನಿಮಿಷ ಇಡಿ. ಪಾಕ ಮಾಡಲು ಒಂದು ಪಾತ್ರೆಯಲ್ಲಿ ಒಂದು ಕಪ್ ಸಕ್ಕರೆಗೆ $^1/_2$ ಕಪ್ ನೀರು ಹಾಕುವುದು. ಕುದಿಯಲು ಇಡಿ. ಏಲಕ್ಕಿಯ ಹುಡಿಯನ್ನು ಹಾಕಿ ಒಂದು ಎಳೆ ಪಾಕವಾದಾಗ ಸ್ವಲ್ಪ ಲಿಂಬೆರಸ ಬೆರಸಿ. ಆಗ ಪಾಕ ಗಟ್ಟಿಯಾಗದೆ ಒಳ್ಳೆ ಜ್ಯೂಸಿ ಆಗಿರುತ್ತದೆ. ಕೈಗೆ ತುಪ್ಪ ಸವರಿ ಹಿಟ್ಟನ್ನು ಉಂಡೆಮಾಡಿ. ಬಳಿಕ ಅದನ್ನು ಎಣ್ಣೆಯಲ್ಲಿ ಕಾಯಿಸಿರಿ. ಮೀಡಿಯಮ್ ಉರಿಯಲ್ಲಿ ಕಾಯಿಸಿ ಬಳಿಕ ಉಂಡೆಯನ್ನು ಪಾಕಕ್ಕೆ ಹಾಕಿ. (ಪಾಕ ಸ್ವಲ್ಪ ಉಗುರು ಬೆಚ್ಚಗಿರಲಿ. ಗುಲಾಬ್ ಜಾಮೂನ್ ಹಾಕಿ ಸಿಹಿ ಸಿಹಿ ಗುಲಾಬ್ ಜಾಮೂನ್ ಸಿದ್ಧ.)

PRESTIGE
Engineering Industries LLC

An ISO 9001:2015 ISO 14001:2015 OHSAS 18001:2007 certified company with ASME- 'U','S', 'NB' & 'R' accreditation.



Design, Drawing, Supply, Fabrication, Blasting and Painting of Pressure Vessels/Static Equipments, Shop Built Storage Tanks, All types of Piping, Pipe Supports, Ducts, Power Plant Exhaust & Inlet System, Air Filtration System, Silos, Stacks and all types of Structural's with Painting or Galvanizing.

Tel. No. +971-2- 4124757/ 700, Fax. No. +971-2-4124777/778
P.O. Box 13180 ICAD III - PLOT NO. 42 NR 32 -ABU DHABI - UNITED ARAB EMIRATES
Email: prestige@prestigeuae.com - Web site : www.prestigeuae.com

PRESTIGE Steel Construction Co. LLC

Laser Cut, Water Jet, Sheet Perforation, Sheet Punching, Sheet Engraving & CNC Machining.

☎ +971-2-5544975 / 77, Fax: +971-2-5547380

P.O. Box 9468, Abu Dhabi, United Arab Emirates, M-11, Mussafah

Associate Company

UNILOC FASTENERS

An ISO 9001:2008 Certified Company

ISO 9001:2008

Manufacturers & Exporters of Fasteners, High Tensile & Stainless Steel - Standard & Specials

☎ +91-250-2480082 / 2480106, +91-9326699287, Fax: +91-250-2481556, Mobile: +91-9892108201
9, Godavari, Tungareshwar Industrial Complex No. 1, Village Sativali, Vasai (East), Dist. Thane-401208 Mumbai- India
E-mail: uniloc9@gmail.com / unilocindia@yahoo.com Website: www.unilocindia.net



ಜೀವನರಥದಿ ನವಸದಸ್ಯನಾಗಮನ

ಮೂಲ: ಉಮೈರಾ ಅಹ್ಮದ್
ಅನು: ಎಂ. ಅಶ್ರಫ್

ಒಂದು ವಾರದ ಬಳಿಕ ಅವನು ಅಮೇರಿಕದ ನೆಲದಲ್ಲಿ ಕಾಲಿರಿಸಿದ್ದ. ಕೆಲವು ವಾರಗಳ ಬಳಿಕ ಅವನು ಯುನಿಸೆಫ್‌ನಲ್ಲಿ ಕೆಲಸ ಪ್ರಾರಂಭಿಸಿದ. ಉದ್ಯೋಗ ನಿಮಿತ್ತ ನ್ಯೂ ಹೆವೆನ್ಸ್‌ನಿಂದ ನ್ಯೂಯಾರ್ಕ್‌ಗೆ ವಾಸ್ತವ್ಯ ಬದಲಾಯಿಸಿದ. ಅದು ಅವನ ನವಜೀವನದ ಆರಂಭವಾಗಿತ್ತು. ಆದರೆ ಅಲ್ಲಿಯೂ ಅವನಿಗೆ ತಪ್ಪಿಸಿ ಕೊಳ್ಳಲು ಸಾಧ್ಯವಿಲ್ಲ ಎಂದು ಅಲ್ಲಿಗೆ ಹೋಗಿ ಕೆಲವೇ ವಾರಗಳಲ್ಲಿ ಅವನಿಗೆ ಅರಿವಾಗಿತ್ತು. ಏಕೆಂದರೆ ಅಲ್ಲಿಯೂ ಅವನಿಗೆ ಆಕೆಯದೇ ನೆನಪು ಕಾಡುತ್ತಿತ್ತು. ಅವನಲ್ಲಿದ್ದ ತಪ್ಪಿತಸ್ಥ ಭಾವನೆಯು ಅವನ ಬೆನ್ನಿಗೆ ಹತ್ತಿಕೊಂಡೇ ಇತ್ತು.

ಅವನು ಹದಿನಾರರಿಂದ ಹದಿನೆಂಟು ಗಂಟೆಗಳ ತನಕ ಕೆಲಸ ಮಾಡತೊಡಗಿದ. ಒಂದು ದಿನವೂ ಅವನು ಮೂರು–ನಾಲ್ಕು ಗಂಟೆಗಿಂತ ಹೆಚ್ಚು ನಿದ್ರಿಸಿದ್ದಿಲ್ಲ. ಅಲ್ಲಿನ ಅಹರ್ನಿಶಿ ನಿಬಿಡತೆಯು ಅವನನ್ನು ಸಾಕಷ್ಟು ಸಹಜ ಸ್ಥಿತಿಗೆ ತಂದಿತ್ತು. ಒಂದೆಡೆ ಕೆಲಸದ ಒತ್ತಡವು ಅವನಲ್ಲಿದ್ದ ಮನೋದುಗುಡವನ್ನು ಕಡಿಮೆಗೊಳಿಸಿ ದಂತೆಯೇ ಇನ್ನೊಂದೆಡೆ ಅವನು ತನ್ನ ಸಂಸ್ಥೆಯ ಮುಂಚೂಣಿಯ ಉದ್ಯೋಗಿಗಳಲ್ಲಿ ಗುರುತಿಸಲ್ಪಡತೊಡಗಿದ. ಯುನಿಸೆಫ್‌ನ ವಿವಿಧ ಯೋಜನೆಗಳಡಿಯಲ್ಲಿ ಅವನು

ಕಳೆದ ಸಂಚಿಕೆಯಲ್ಲಿ...

ಎಂ.ಐ.ಟಿ. ಮಾಡುವುದರೊಂದಿಗೆ ಸಾಲಾರ್ ವಾರಾಂತ್ಯದಲ್ಲಿ ಇಸ್ಲಾಮಿಕ್ ಸೆಂಟರ್‌ಗೆ ಹೋಗತೊಡಗಿದ. ಅಲ್ಲಿ ಖಾಲಿದ್ ಎಂಬ ಅರಬಿಯ ಪರಿಚಯವಾಗುತ್ತದೆ. ಅವನು ಸಾಲಾರ್‌ಗೆ ಕುರ್‌ಆನ್ ಹಿಫ್ಝ್ ಮಾಡಲು ಸೂಚಿಸುತ್ತಾನೆ. ಸಾಲಾರ್ ಅಳುಕುತ್ತಲೇ ಅದಕ್ಕೊಪ್ಪುತ್ತಾನೆ. ಈ ಮಧ್ಯೆ ಖಾಲಿದ್ ಸಾಲಾರ್‌ಗೆ ಹಜ್ಜ್ ನಿರ್ವಹಿಸಲು ಉತ್ತೇಜಿಸುತ್ತಾನೆ. ಅದೂ ನೆರವೇರುತ್ತದೆ. ಕಲಿಕೆ ಮುಗಿದ ಮೇಲೆ ಸಾಲಾರ್ ಊರಿಗೆ ಬಂದಿದ್ದಾಗ ಸಿಕಂದರ್ ಉಸ್ಮಾನ್, ಇಲ್ಲೇ ಇದ್ದು ಬಿಸಿನೆಸ್ ನೋಡ್ಕೋ ಅಂದರೆ, ಸಾಲಾರ್ ನನಗದೆಲ್ಲ ಒಗ್ಗದು ಎನ್ನುತ್ತಾ ವಿಶ್ವಸಂಸ್ಥೆ ಸೇರುವ ಇಚ್ಛೆ ವ್ಯಕ್ತಪಡಿಸುತ್ತಾನೆ.

ಮುಂದಕ್ಕೆ ಓದಿ...

ಏಶಿಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಗಳ ದೇಶಗಳಿಗೆ ಹೋಗತೊಡಗಿದ. ಈ ಎಲ್ಲ ಕಡೆ ಬಡತನ ಮತ್ತು ರೋಗರುಜಿನಗಳನ್ನು ಅವನು ಮೊದಲ ಬಾರಿಗೆ ಕಣ್ಣಾರೆ, ಹತ್ತಿರದಿಂದ ನೋಡಿದ. ವರದಿಗಳು ಮತ್ತು ಪತ್ರಿಕೆಗಳಲ್ಲಿ ಮುದ್ರಣಗೊಳ್ಳುವ ವಾಸ್ತವಗಳಿಗೂ ಕಣ್ಣಾರೆ ಅದರ ಎಲ್ಲ ಭಯಾನಕತೆಯನ್ನು ನೋಡುವುದಕ್ಕೂ ಅಜಗಜಾಂತರವಿತ್ತು. ಆ ವ್ಯತ್ಯಾಸವು ಅವನಿಗೆ ಈ ಉದ್ಯೋಗದಲ್ಲಿ ಚೆನ್ನಾಗಿ ಮನವರಿಕೆ ಆಗಿತ್ತು. ದಿನವೂ ಹೊಟ್ಟೆಗೆ ಹಿಟ್ಟಿಲ್ಲದೆ ಮಲಗುವವರ ಸಂಖ್ಯೆ ಕೋಟಿಗಳಲ್ಲಿತ್ತು. ಪ್ರತಿ ರಾತ್ರಿ ಅಗತ್ಯಕ್ಕಿಂತ ಹೆಚ್ಚು ಉಂಡು ಮಲಗುವವರ ಸಂಖ್ಯೆಯೂ ಕೋಟಿಗಳಲ್ಲಿತ್ತು. ಕೇವಲ ಮೂರು ಹೊತ್ತಿನ ಊಟ, ತಲೆ ಮೇಲೊಂದು ಸೂರು, ಮೈಮುಚ್ಚಲು ಬಟ್ಟೆ ಎಷ್ಟು ದೊಡ್ಡ ಅನುಗ್ರಹಗಳಾಗಿವೆ ಎಂಬುದರ ಅರಿವು ಅವನಿಗೆ ಆಗಿದ್ದು ಈ ಸಂದರ್ಭದಲ್ಲಾಗಿತ್ತು.

ಅವನು ಯುನಿಸೆಫ್‌ನ ತಂಡದ ಜೊತೆಯಲ್ಲಿ ಚಾರ್ಟರ್ಡ್ ವಿಮಾನದಲ್ಲಿ ಸಂಚರಿಸುತ್ತಾ ತನ್ನ ಜೀವನದ ಬಗ್ಗೆ ಯೋಚಿಸುತ್ತಿದ್ದ. ಜೀವನದಲ್ಲಿ ತಾನೆಂತಹ ಸತ್ಕಾರ್ಯ ಮಾಡಿದ್ದೆನೆಂದು ತನಗೆ ಇಷ್ಟು ಸೌಕರ್ಯ ತುಂಬಿದ ಜೀವನ ದೊರೆತಿದೆ? ಮತ್ತೆ ಆ ಜನರು ಯಾವ ಪಾಪ ಮಾಡಿದ್ದಾರೆಂದು ಜೀವನದ ಸಕಲ ಮೂಲಭೂತ ಅಗತ್ಯಗಳಿಂದ ವಂಚಿತರಾಗಿ, ಕೇವಲ ಜೀವಿಸಲೋಸುಗ ಆಹಾರದ ಪೊಟ್ಟಣದ ಹಿಂದೆ ಓಡುತ್ತಿರುತ್ತಾರೆ?

ಅವನು ರಾತ್ರಿಯೆಲ್ಲ ಜಾಗರಣೆ ಮಾಡಿ ತನ್ನ ಸಂಸ್ಥೆಗಾಗಿ ಸಂಭಾವ್ಯ ಯೋಜನೆಗಳನ್ನು ಹಾಕುತ್ತಿರುತ್ತಿದ್ದ. ಎಲ್ಲಿ ಆಹಾರದ ವಿತರಣೆ ಹೇಗೆ ಆಗಬಲ್ಲುದು, ಯಾವ ರೀತಿಯ ಸುಧಾರಣೆ ತರಬಹುದು, ಎಲ್ಲಿ ಹೆಚ್ಚಿನ ಸಹಾಯದ ಅಗತ್ಯವಿದೆ, ಯಾವ ಪ್ರದೇಶಗಳಲ್ಲಿ ಎಂತಹ ಯೋಜನೆಗಳ ಅಗತ್ಯವಿದೆ... ಅವನು ಕೆಲವೊಮ್ಮೆ ನಲ್ವತ್ತೆಂಟು ಗಂಟೆಗಳ ವರೆಗೆ ನಿದ್ರೆಯಿಲ್ಲದೆ ಕೆಲಸ ಮಾಡಿಕೊಂಡಿರುತ್ತಿದ್ದ.

ಅವನು ರೂಪಿಸುತ್ತಿದ್ದ ಪ್ರಸ್ತಾಪಗಳು ಮತ್ತು ವರದಿಗಳು ತಾಂತ್ರಿಕವಾಗಿ ಎಷ್ಟು ಪ್ರಬಲವಾಗಿರುತ್ತವೆಂದರೆ ಅವುಗಳಲ್ಲಿ ಎಳ್ಳಷ್ಟೂ ಕೊರತೆಯನ್ನು ಹುಡುಕುವುದು ಯಾರಿಗೂ ಸಾಧ್ಯವಿರುತ್ತಿರಲಿಲ್ಲ. ಅವನ ಈ ವಿಶೇಷತೆಯೇ ಅವನ ಹೆಸರು ಮತ್ತು ಕೀರ್ತಿಯನ್ನು ಇನ್ನೂ ಹೆಚ್ಚಿಸುತ್ತಿತ್ತು. ಒಂದು ವೇಳೆ ಅಲ್ಲಾಹನು ಇತರರಿಗಿಂತ ಹೆಚ್ಚು ಸಾಮರ್ಥ್ಯ ಮತ್ತು ಪ್ರತಿಭೆಗಳನ್ನು ನೀಡಿದ್ದರೆ, ನಾನು ಅವುಗಳನ್ನು ಇತರರಿಗಾಗಿ ಬಳಸಬೇಕಾದುದು ನನ್ನ ಕರ್ತವ್ಯವಾಗಿದೆ. ಅವನ್ನು ಇತರರ ಜೀವನದಲ್ಲಿ ಹೆಚ್ಚಿಚ್ಚು ಸೌಲಭ್ಯವನ್ನು ಉಂಟು ಮಾಡುವ ರೀತಿಯಲ್ಲಿ ಮತ್ತು ಇತರರ ಜೀವನ ಉತ್ತಮಗೊಳ್ಳುವ ರೀತಿಯಲ್ಲಿ ಬಳಸಬೇಕು. ಅವನು ಕೆಲಸ ಮಾಡುವಾಗಲೆಲ್ಲ ಇದರ ಹೊರತು ಬೇರೇನನ್ನೂ ಆಲೋಚಿಸುತ್ತಿರಲಿಲ್ಲ.

ಯುನಿಸೆಫ್‌ಗಾಗಿ ಕೆಲಸ ಮಾಡುತ್ತಿರುವುದರ ನಡುವೆ ಅವನು ಎಂ.ಫಿಲ್. ಮಾಡುವ ಬಗ್ಗೆ ಆಲೋಚಿಸಿದ. ಹೀಗೆ ಅವನು ಎಂ.ಫಿಲ್.ನಲ್ಲಿ ದಾಖಿಲಾತಿಯನ್ನೂ ಪಡಕೊಂಡ. ಸಂಜೆ ತರಗತಿಗಳನ್ನು ಸೇರುವಾಗ, ಅವನು ಮತ್ತೆ ತನ್ನನ್ನು ಅಗತ್ಯಕ್ಕಿಂತ ಜಾಸ್ತಿ ನಿಬಿಡನಾಗಿಸುತ್ತಿದ್ದೇನೆ ಎಂಬ ಆಶಂಕೆಯೇ ಅವನಲ್ಲಿ ಉದ್ಭವಿಸಿರಲಿಲ್ಲ. ಆದರೆ ಅವನ ಬಳಿ ಅದರ ಹೊರತು ಬೇರೆ ದಾರಿಯಿರಲಿಲ್ಲ. ಕೆಲಸವು ಅವನ ಹುಚ್ಚಾಗಿ ಮಾರ್ಪಟ್ಟಿತ್ತು. ಬಹುಶಃ ಅದಕ್ಕಿಂತಲೂ ಎರಡು ಹೆಜ್ಜೆ ಮುಂದೆ ಹೋಗಿ ಒಂದು ಗುರಿಯಾಗಿ ಮಾರ್ಪಟ್ಟಿತ್ತು.

❖ ❖ ❖

ಫುರ್ಕಾನ್‌ನೊಂದಿಗೆ ಸಾಲಾರ್‌ನ ಮೊದಲ ಭೇಟಿಯು ನ್ಯೂಯಾರ್ಕ್‌ನಿಂದ ಬೆಂಗಳೂರಿಗೆ ಬರುವ ಫ್ಲೈಟ್‌ನಲ್ಲಾಗಿತ್ತು. ಅವನು ಸಾಲಾರ್‌ನ ಬದಿಯ ಆಸನದಲ್ಲಿ ಕುಳಿತಿದ್ದ. ಅವನು ಅಮೇರಿಕದಲ್ಲಿ ವೈದ್ಯರ ಒಂದು ಕಾನ್ಫರೆನ್ಸ್‌ನಲ್ಲಿ ಭಾಗಿಯಾಗಿ ಮರಳುತ್ತಿದ್ದ. ಅದೇ ವೇಳೆ ಸಾಲಾರ್ ತನ್ನ ತಂಗಿ ಅನಿತಾಳ ಮದುವೆಗೆಂದು ಊರಿಗೆ ಬರುತ್ತಿದ್ದ. ಈ ಸುದೀರ್ಘ ಯಾನದ ವೇಳೆ ಇಬ್ಬರ ನಡುವೆ ಆರಂಭಿಕ ಪರಿಚಯದ ಬಳಿಕ ಮಾತುಕತೆ ಮಂದುವರಿಯತೊಡಗಿತು.

ಫುರ್ಕಾನ್ ಪ್ರಾಯದಲ್ಲಿ ಸಾಲಾರ್‌ಗಿಂತ ಹಿರಿಯನಾಗಿದ್ದ. ಅವನು ಸುಮಾರು ಮುವ್ವತ್ತೈದು ವರ್ಷ ಪ್ರಾಯದವನಾಗಿದ್ದ. ಲಂಡನ್‌ನಲ್ಲಿ ಉನ್ನತ ವ್ಯಾಸಂಗ ಮಾಡಿದ ಮೇಲೆ ಊರಿನಲ್ಲಿ ಬಂದು ನೆಲೆಸಿದ್ದ. ಅವನು ಅಲ್ಲೊಂದು ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ. ಮದುವೆಯಾಗಿ ಇಬ್ಬರು ಮಕ್ಕಳಿದ್ದಾರೆ.

ಕೆಲವು ಗಂಟೆಗಳ ಕಾಲ ಮಾತನಾಡಿದ ಬಳಿಕ ಇಬ್ಬರೂ ಮಲಗಲು ಸಿದ್ಧರಾಗತೊಡಗಿದರು. ಸಾಲಾರ್ ಎಂದಿನಂತೆ

ತನ್ನ ಬ್ರೀಫ್‌ಕೇಸ್‌ನಿಂದ ನಿದ್ರೆ ಮಾತ್ರೆ ಯೊಂದನ್ನು ತೆಗೆದು ನೀರಿನೊಂದಿಗೆ ನುಂಗಿದ. ಫುರ್ಕಾನ್ ಅದನ್ನೆಲ್ಲ ಮೌನ ವಾಗಿ ನೋಡುತ್ತಿದ್ದ. ಅವನು ಬ್ರೀಫ್‌ಕೇಸ್ ಮುಚ್ಚಿ ಅದರ ಜಾಗದಲ್ಲಿರಿಸಿದ ಮೇಲೆ ಫುರ್ಕಾನ್ ಹೇಳಿದ,

"ಕೆಲವರಿಗೆ ಫ್ಲೈಟ್‌ನಲ್ಲಿ ಸ್ಲೀಪಿಂಗ್ ಪಿಲ್ಸ್ ತೆಗೆಯದೆ ನಿದ್ರೆ ಬರುವುದಿಲ್ಲ."

ಸಾಲಾರ್ ಅವನೆಡೆಗೆ ಹೊರಳಿದ, "ನನಗೆ ಸ್ಲೀಪಿಂಗ್ ಪಿಲ್ಸ್ ಇಲ್ಲದೆ ನಿದ್ದೆ ಬಾರದು. ಫ್ಲೈಟ್‌ನಲ್ಲಿದ್ದರೂ ಇಲ್ಲದಿದ್ದರೂ ಒಂದೇ. ನನಗೇನೂ ವ್ಯತ್ಯಾಸವಾಗಲ್ಲ."

"ನಿದ್ರಿಸುವಲ್ಲಿ ತೊಂದರೆಯಾಗು ತ್ತಿದೆಯೇ?" ಫುರ್ಕಾನ್ ಕುತೂಹಲದಿಂದ ಕೇಳಿದ.

"ತೊಂದರೆ!?" ಸಾಲಾರ್ ಮುಗುಳ್ನಕ್ಕ, "ನನ್ಗೆ ನಿದ್ದೆನೇ ಬರಲ್ಲ. ಸ್ಲೀಪಿಂಗ್ ಪಿಲ್ಸ್ ತೆಗೆದ್ಮೇಲೆ ಮೂರ್ನಾಕು ಗಂಟೆ ಮಾತ್ರ ನಿದ್ರಿಸ್ತೀನಿ ಅಷ್ಟೇ."

"ಇನ್ಸೋಮ್ನಿಯಾ?" ಫುರ್ಕಾನ್ ಕೇಳಿದ.

"ಬಹುಶಃ. ಆಗಿರ್ಲಿಕ್ಕೂ ಸಾಕು... ನಾನು ಚೆಕಪ್ ಮಾಡ್ಸಿಲ್ಲ" ಸಾಲಾರ್ ನಿರ್ಲಿಪ್ತತೆಯಿಂದ ಹೇಳಿದ.

"ಚೆಕಪ್ ಮಾಡಿಸಬೇಕು. ಈ ಪ್ರಾಯ ದಲ್ಲಿ ಇನ್ಸೋಮ್ನಿಯಾ... ಇದು ಆರೋಗ್ಯ ಕರ ಸ್ಥಿತಿಯಲ್ಲ. ನನಗನಿಸುತ್ತದೆ, ನೀನು ಕೆಲಸವನ್ನು ಅಗತ್ಯಕ್ಕಿಂತ ಹೆಚ್ಚೇ ಹಚ್ಚಿ ಕೊಂಡಿದ್ದೀಯಾ. ಆದ್ದರಿಂದಲೇ ನೀನು ನಿದ್ರಿಸುವ ರುಟೀನನ್ನು ಹಾಳು ಮಾಡಿದ್ದೀಯ."

ಫುರ್ಕಾನ್ ಒಬ್ಬ ವೈದ್ಯನಂತೆ ಹೇಳು ತ್ತಿದ್ದ. ಸಾಲಾರ್ ಮುಗುಳ್ನಗುತ್ತಾ ಅವನ ಮಾತನ್ನು ಆಲಿಸುತ್ತಿದ್ದ. ತಾನು ಹಗಲೂ ರಾತ್ರಿ ಕೆಲಸ ಮಾಡದೆ ಇರುತ್ತಿದ್ದರೆ, ತನ್ನಲ್ಲಿ ಉದ್ಭವಿಸಿರುವ ತಪ್ಪಿತಸ್ಥ ಭಾವನೆ ಯಿಂದಾಗಿ ಸತ್ತೇ ಹೋಗುತ್ತಿದ್ದೆ ಎಂಬು ದನ್ನು ಅವನಿಗೆ ತಿಳಿಸುವಂತಿರಲಿಲ್ಲ. ನಿದ್ರೆ ಮಾತ್ರೆ ತೆಗೆಯದೆ ಮಲಗಲು ಪ್ರಯತ್ನಿಸಿದರೆ, ರಾತ್ರಿಯಿಡೀ ಇಮಾಮಳ ಬಗ್ಗೆಯೇ ಆಲೋಚಿಸುತ್ತಿದ್ದು, ತಲೆಬೇನೆ ಯನ್ನು ಮೈಮೇಲೆಳೆದುಕೊಳ್ಳುತ್ತೇನೆ ಎಂಬುದನ್ನೂ ಹೇಳಲಿಕ್ಕಾಗದು.

"ಎಷ್ಟು ಗಂಟೆ ಕೆಲಸ ಮಾಡುತ್ತೀ ಒಂದು ದಿನದಲ್ಲಿ?" ಫುರ್ಕಾನ್ ವಿಚಾರಿಸತೊಡಗಿದ.

"ಹದಿನೆಂಟು ಗಂಟೆ. ಕೆಲವೊಮ್ಮೆ ಇಪ್ಪತ್ತು."

"ಮೈ ಗುಡ್‌ನೆಸ್! ಇದು ಯಾವಾಗಿನಿಂದ?"

"ಎರಡು ಮೂರು ವರ್ಷಗಳಿಂದ."

"ಆವಾಗಿನಿಂದಲೇ ನಿನಗೆ ನಿದ್ರೆಯ ಸಮಸ್ಯೆ ಉಂಟಾಗಿದ್ದಿರಬಹುದು. ನನ್ನ ಅಂದಾಜು ಸರಿಯಾಗಿದೆ. ನೀನು ಕೈಯಾರೆ ನಿನ್ನ ನಿದ್ರೆಯ ರುಟೀನನ್ನು ಹಾಳು ಮಾಡಿಬಿಟ್ಟಿದ್ದೀಯ." ಫುರ್ಕಾನ್ ಹೇಳ ತೊಡಗಿದ, "ಅಲ್ಲದೆ, ಇಷ್ಟು ದೀರ್ಘ ಸಮಯ ಕೆಲಸ ಮಾಡಿದವನನ್ನು ಒಂದು ದೀರ್ಘವಾದ ಮತ್ತು ಪ್ರಶಾಂತವಾದ ನಿದ್ರೆ ಆವರಿಸಿ ಬಿಡುತ್ತದೆ."

"ಅದು ನನ್ನ ಜತೆಯಲ್ಲಿ ಆಗುತ್ತಿಲ್ಲ" ಸಾಲಾರ್ ಮೆಲುದನಿಯಲ್ಲಿ ಹೇಳಿದ.

"ಇದನ್ನೇ ನೀನು ಅರಿಯಲು ಪ್ರಯ ತ್ನಿಸಬೇಕಾಗಿದೆ. ಅದು ನಿನ್ನ ಜತೆಯಲ್ಲಿ ಆಗುತ್ತಿಲ್ಲಾಂದರೆ ಯಾಕೆ ಆಗುತ್ತಿಲ್ಲ ಎಂದು ತಿಳಿದುಕೊಳ್ಳಬಾರದೇ?"

ನನಗೆ ಅದರ ಕಾರಣ ಗೊತ್ತಿದೆ ಎಂದು ಹೇಳಲು ಸಾಲಾರ್‌ನಿಂದಾಗಲಿಲ್ಲ.

ಫುರ್ಕಾನ್ ಮಂತ್ರ ಮುಗ್ಧನಂತೆ ಅವನ ಮುಖವನ್ನೇ ದಿಟ್ಟಿಸುತ್ತಿದ್ದ. ಸಾಲಾರ್ ಕಣ್ಣು ಮುಚ್ಚಿದ್ದನಾದರೂ ಅವನ ಕಣ್ಣಕೊನೆಯಲ್ಲಿ ಕಂಡೂ ಕಾಣದಂತೆ ಜಿನುಗಿದ ಕಂಬನಿಯನ್ನು ಅವನು ನೋಡಿದ. ಅವನ ಧ್ವನಿಯು ತಡವರಿಸುತ್ತಿತ್ತು. ಅವನು ತನಗರಿವಿಲ್ಲದೆಯೇ ನಿದ್ರೆ ಮಾತ್ರೆಯ ಪ್ರಭಾವದಿಂದ ಮಾತನಾಡುತ್ತಿದ್ದ.

ಸ್ವಲ್ಪ ಹೊತ್ತಿನ ಮೌನದ ಬಳಿಕ ಫುರ್ಕಾನ್ ಹೇಳಿದ,

"ನಾನು ಕೆಲವು ಕುರ್‌ಆನ್ ವಚನ ಗಳನ್ನು ತಿಳಿಸುತ್ತೇನೆ. ರಾತ್ರಿ ಮಲಗುವಾಗ ಪಠಿಸಬಲ್ಲೆಯಾ?"

"ಯಾಕಿಲ್ಲ." ಸಾಲಾರ್ ಹೊರಳಿ ಅವನೆಡೆಗೆ ನೋಡುತ್ತಾ ಮರುಪ್ರಶ್ನಿಸಿದ.

"ಹಾಗಲ್ಲ, ನನ್ನ ನಿನ್ನಂತಹ ಜನ ಹಯರ್ ಸ್ಟಡೀಸ್ ಮಾಡಿದವರು ಮತ್ತು ವಿಶೇಷವಾಗಿ ಪಾಶ್ಚಾತ್ಯ ದೇಶಗಳಲ್ಲಿ ವ್ಯಾಸಂಗ ಮಾಡಿದವರು ಇಂತಹವುಗಳಲ್ಲಿ ವಿಶ್ವಾಸವನ್ನೇ ಇರಿಸುವುದಿಲ್ಲ. ಅಥವಾ ಅದನ್ನು ಪ್ರಾಯೋಗಿಕವೆಂದು ಭಾವಿಸುವು ದಿಲ್ಲ" ಫುರ್ಕಾನ್ ಸ್ಪಷ್ಟೀಕರಣ ನೀಡಿದ.

"ಫುರ್ಕಾನ್, ನಾನು ಇಡೀ ಕುರ್‌ಆನ್ ಕಂಠಪಾಟ ಮಾಡಿದ್ದೇನೆ" ಸಾಲಾರ್ ಮಲಗಿ ದಲ್ಲಿಂದಲೇ ಶಾಂತವಾಗಿ ಉಸುರಿದ.

ಫುರ್ಕಾನ್‌ಗೆ ಒಮ್ಮೆಲೆ ಆಘಾತ ವಾದಂತಾಯಿತು.

"ದಿನಾ ರಾತ್ರಿ ಮಲಗುವುದಕ್ಕೆ ಮುಂಚೆ ಒಂದು ಪಾರಾ (ಕಾಂಡ) ಓದುತ್ತೇನೆ. ನನ್ನಲ್ಲಿ ವಿಶ್ವಾಸ ಅಥವಾ ಭರವಸೆಯ ಬಗ್ಗೆ ಯಾವುದೇ ಸಮಸ್ಯೆ ಇಲ್ಲ" ಸಾಲಾರ್ ತನ್ನ ಮಾತು ಮುಂದು ವರಿಸುತ್ತಾ ಹೇಳಿದ.

"ನಾನೂ ಕುರ್‌ಆನ್ ಹಿಫ್ಝ್ ಮಾಡಿದ್ದೇನೆ."

ಫುರ್ಕಾನ್ ಮೆಲ್ಲನೆ ಹೇಳಿದ. ಸಾಲಾರ್ ಕತ್ತು ಹೊರಳಿಸಿ ಮುಗುಳ್ನಗುತ್ತಾ ಅವನೆಡೆಗೆ ನೋಡಿದ. ಈ ಕಾಕ ತಾಳೀಯವು ಖಂಡಿತವಾಗಿಯೂ ಆಹ್ಲಾದ ಕರವಾಗಿತ್ತು. ಫುರ್ಕಾನ್ ಗಡ್ಡ ಬೆಳೆಸಿ ರುವನಾದರೂ ಅವನು ಕುರ್‌ಆನ್ ಹಾಫಿಝ್ ಆಗಿರಬಹುದೆಂದು ಸಾಲಾರ್ ಊಹಿಸಿರಲಿಲ್ಲ.

"ಹಾಗಿದ್ದರೆ ನಿನಗೆ ಇಂತಹ ಸಮಸ್ಯೆ ಆಗಲೇ ಬಾರದಿತ್ತಲ್ಲ. ಪವಿತ್ರ ಕುರ್‌ಆನ್ ಪಠಿಸಿ ಮಲಗುವವನಿಗೆ ನಿದ್ರೆ ಬಾರದಿರು ವುದು... ನನಗಂತೂ ವಿಚಿತ್ರವೆಂದು ತೋರುತ್ತದೆ."

ಫುರ್ಕಾನ್ ಬಡಬಡಿಸುವುದು ಸಾಲಾರ್‌ನ ಕಿವಿಗೆ ಬಿತ್ತಾದರೂ ಅವನಲ್ಲಿ ಮೆಲ್ಲಮೆಲ್ಲನೆ ಮಂಪರು ಕವಿಯತೊಡ

ಗಿತು. ನಿದ್ರೆಯು ಅವನ ಮಸ್ತಿಷ್ಕವನ್ನಾವರಿಸುತ್ತಿತ್ತು. ಅವನು ಕಣ್ಣು ಮುಚ್ಚಿದ.

"ನಿನಗೆ ಏನಾದರೂ ತೊಂದರೆಯಿದೆಯೇ?" ಅವನಿಗೆ ಫುರ್ಕಾನ್‌ನ ಧ್ವನಿ ಕೇಳಿಸಿತು. ನಿದ್ರೆ ಮಾತ್ರೆಯ ಪ್ರಭಾವವಿಲ್ಲದೆ ಹೋಗಿದ್ದರೆ, ಅವನು ಖಂಡಿತವಾಗಿಯೂ ಮುಗುಳ್ನಕ್ಕು ನಿರಾಕರಿಸುತ್ತಿದ್ದ. ಆದರೆ ಅವನೀಗ ಇರುವ ಸ್ಥಿತಿಯಲ್ಲಿ ನಿರಾಕರಿಸದಾದ.

"ಹೌದು. ಬಹಳ ತೊಂದರೆಗಳಿವೆ. ಮನಃಶಾಂತಿ ಎನ್ನುವುದೇ ಇಲ್ಲ. ನಾನು ನಿರಂತರವಾಗಿ ಮರಳುಗಾಡಿನಲ್ಲಿ ಪ್ರಯಾಣಿಸುತ್ತಿರುವೆ ಎಂದು ಅನಿಸುತ್ತಿದೆ. ಪಶ್ಚಾತ್ತಾಪ ಮತ್ತು ತಪ್ಪಿತಸ್ಥ ಭಾವನೆಯು ನನ್ನ ಬೆನ್ನು ಬಿಡುತ್ತಿಲ್ಲ. ನನಗೆ... ನನಗೆ ಪರಿಪೂರ್ಣವಾದ ಒಂದು ವ್ಯಕ್ತಿತ್ವದ ಅಗತ್ಯವಿದೆ. ನನ್ನನ್ನು ಈ ಸಂಕಷ್ಟದಿಂದ ಹೊರತರುವಂತಹ, ನನಗೆ ಜೀವನದ ದಾರಿಯನ್ನು ತೋರಿಸುವಂತಹ ಪರಿಪೂರ್ಣ ವ್ಯಕ್ತಿತ್ವ."

ಫುರ್ಕಾನ್ ಮಂತ್ರಮುಗ್ಧನಂತೆ ಅವನ ಮುಖವನ್ನೇ ದಿಟ್ಟಿಸುತ್ತಿದ್ದ. ಸಾಲಾರ್ ಕಣ್ಣು ಮುಚ್ಚಿದ್ದನಾದರೂ ಅವನ ಕಣ್ಣ ಕೊನೆಯಲ್ಲಿ ಕಂಡೂ ಕಾಣದಂತೆ ಜಿನುಗಿದ ಕಂಬನಿಯನ್ನು ಅವನು ನೋಡಿದ. ಅವನ ಧ್ವನಿಯು ತಡವರಿಸುತ್ತಿತ್ತು. ಅವನು ತನಗರಿವಿಲ್ಲದೆಯೇ ನಿದ್ರೆ ಮಾತ್ರೆಯ ಪ್ರಭಾವದಿಂದ ಮಾತನಾಡುತ್ತಿದ್ದ.

ಅವನೀಗ ಸುಮ್ಮನಾಗಿದ್ದ. ಫುರ್ಕಾನ್ ಮುಂದಕ್ಕೇನೂ ಪ್ರಶ್ನೆ ಕೇಳಲಿಲ್ಲ. ಅವನೀಗ ನಿದ್ರಾವಶನಾಗಿದ್ದಾನೆಂದು ಫುರ್ಕಾನ್‌ಗೆ ಮನವರಿಕೆಯಾಯಿತು.

❖ ❖ ❖

ವಿಮಾನದಲ್ಲಾದ ಭೇಟಿಯು ಅಲ್ಲಿಗೇ ಮುಗಿಯಲಿಲ್ಲ. ಅವರಿಬ್ಬರೂ ನಿದ್ರೆಯಿಂದೆದ್ದ ಮೇಲೂ ಅವರಿಬ್ಬರ ಮಾತು ಕತೆ ಮುಂದುವರಿದಿತ್ತು. ಸಾಲಾರ್ ನಿದ್ರೆಯ ಮಂಪರಿನಲ್ಲಿ ಹೇಳಿದ ಮಾತುಗಳ ಬಗ್ಗೆ ಫುರ್ಕಾನ್ ಪ್ರಶ್ನಿಸಲಿಲ್ಲ. ಸ್ವತಃ ಸಾಲಾರ್‌ಗೂ ತಾನು ನಿದ್ರೆ ಹೋಗುವ ಮುಂಚೆ ಫುರ್ಕಾನ್‌ನೊಂದಿಗೆ ಏನಾದರೂ ಹೇಳಿದ್ದೆ ಎಂಬ ಅರಿವು ಇರಲಿಲ್ಲ.

ವಿಮಾನ ನಿಲ್ದಾಣದಿಂದ ಹೊರ ಹೋಗುವಾಗ ಇಬ್ಬರೂ ತಂತಮ್ಮ ಕಾಂಟಾಕ್ಟ್ ನಂಬರ್ ಮತ್ತು ಮನೆ ವಿಳಾಸದ ವಿನಿಮಯ ಮಾಡಿಕೊಂಡರು. ತರುವಾಯ ಸಾಲಾರ್, ಅವನನ್ನು ಅನಿತಾಳ ಮದುವೆಗೆ ಆಮಂತ್ರಿಸಿದ. ಫುರ್ಕಾನ್ ಬರುವುದಾಗಿ ವಾಗ್ದಾನ ಮಾಡಿದ. ಆದರೆ ಅವನು ಬರುವನೆಂಬ ಭರವಸೆ ಸಾಲಾರ್‌ಗೆ ಇರಲಿಲ್ಲ. ಅವರಿಬ್ಬರೂ ಏರ್‌ಪೋರ್ಟ್‌ನಿಂದ ಹೊರ ಬಂದು ದೇಶಾವರಿ ನಗೆ ಬೀರುತ್ತಾ ಹಸ್ತ ಲಾಘವ ಮಾಡಿ, ತಂತಮ್ಮ ಗಮ್ಯದೆಡೆಗೆ ಹೊರಟರು. ಫುರ್ಕಾನ್ ಟ್ಯಾಕ್ಸಿ ಹತ್ತಿ ತನ್ನ ಮನೆಯ ಕಡೆಗೆ ಹೊರಟರೆ, ಸಾಲಾರ್ ಲಾಲ್‌ಬಾಗ್ ಕಡೆಗೆ ಹೊರಟ.

ಅನಿತಾಳ ಮದುವೆಗೆ ಇನ್ನು ಮೂರು ದಿನಗಳಷ್ಟೇ ಉಳಿದಿತ್ತು ಮತ್ತು ಸಾಲಾರ್ ಬಳಿ ಆ ಮೂರು ದಿನಗಳಿಗೂ ಬಹಳಷ್ಟು

"ಮನುಷ್ಯನು ಸಾಯುವಾಗ ಅವನ ಕರ್ಮಗಳ ಅವಧಿ ಮುಗಿದು ಬಿಡುತ್ತದೆ. ಆದರೆ ಮೂರು ವಿಧದ ಕರ್ಮಗಳ ಪುಣ್ಯ ಆತನ ಮರಣಾನಂತರವೂ ಆತನಿಗೆ ಸಿಗುತ್ತಲೇ ಇರುತ್ತದೆ. ಮೊದಲನೆಯದು ಅವನು ಮಾಡಿದ ಶಾಶ್ವತ ಸ್ವರೂಪದ ದಾನ, ಎರಡನೆಯದು ಅವನು ಜನರಿಗೆ ಬಿಟ್ಟು ಹೋದ ಉಪಯುಕ್ತವಾದ ಜ್ಞಾನ, ಮೂರನೆಯದು ಅವನ ತರಬೇತಿಯ ಪರಿಣಾಮ ಸಜ್ಜನರಾಗಿ ಬೆಳೆದು ತಮ್ಮ ಹೆತ್ತವರಿಗಾಗಿ ಪ್ರಾರ್ಥಿಸುವ ಮಕ್ಕಳು." [ಪ್ರವಾದಿ ಮುಹಮ್ಮದ್(ಸ)]

WITH BEST COMPLIMENTS FROM:

JAMAAT-E-ISLAMI HIND

Shanthi Sadana, K.R. Puram, 1st Cross, Shivamogga - 577201

• JIH Women's Wing • Shoba-e-Dawah
• Girls Islamic Organisation (GIO)
• Humanitarian Relief Society (HRS)
• Students Islamic Organisation of India (SIO)
• Shoba-e-Qidmath Qalq • Wisdom School Wadehuda
• Shoba-e-Islami Muashira

ಕೆಲಸಗಳಿದ್ದುವು. ಕೆಲವು ಮದುವೆಯ ಸಡಗರ, ಇನ್ನು ಕೆಲವು ಅವನದೇ ಸಮಸ್ಯೆಗಳು.

ಮರುದಿನ ಸಂಜೆಯ ವೇಳೆಗೆ ಸಾಲಾರ್‌ಗೆ ಆಶ್ಚರ್ಯವೆಂಬಂತೆ ಫುರ್ಕಾನ್ ಕಾಲ್ ಮಾಡಿದ್ದ. ಹತ್ತು ಹದಿನೈದು ನಿಮಿಷಗಳ ವರೆಗೆ ಇಬ್ಬರ ನಡುವೆ ಮಾತುಕತೆ ನಡೆಯಿತು. ಕೊನೆಯಲ್ಲಿ ಸಾಲಾರ್ ಮತ್ತೊಮ್ಮೆ ತಂಗಿಯ ಮದುವೆಯ ಬಗ್ಗೆ ನೆನಪಿಸಿದ.

"ಇದೂ ನೆನಪಿಸುವ ವಿಷಯವೇನು? ನನಗೆ ಚೆನ್ನಾಗಿ ನೆನಪಿದೆ. ಹೇಗಿದ್ದರೂ ಈ ವೀಕೆಂಡ್‌ಗೆ ಮಡಿಕೇರಿಯಲ್ಲೇ ಇರುವ ವನಿದ್ದೇನೆ" ಫುರ್ಕಾನ್ ಉತ್ತರವಾಗಿ ನುಡಿದ, "ಅಲ್ಲಿ ನನ್ನ ಗ್ರಾಮದಲ್ಲಿ ನಮ್ಮ ಶಾಲೆ ನೋಡಲು ಹೋಗಲಿಕ್ಕಿದೆ. ಅದರ ಕಟ್ಟಡದ ವಿಸ್ತರಣಾ ಕಾರ್ಯವೂ ನಡೆಯುತ್ತಿದೆ. ಹಾಗಾಗಿ ಈ ಬಾರಿ ನನ್ನ ಮಡಿಕೇರಿ ವಾಸ್ತವ್ಯ ಕೊಂಚ ದೀರ್ಘವಾಗಲಿದೆ."

ಸಾಲಾರ್‌ಗೆ ಅವನ ಮಾತುಗಳಲ್ಲಿ ಆಸಕ್ತಿ ಮೂಡಿತು.

"ಗ್ರಾಮ... ಶಾಲೆ... ಏನಿದೆಲ್ಲ?"

"ನಾನೊಂದು ಶಾಲೆ ನಡೆಸುತ್ತಿದ್ದೇನೆ. ಅಲ್ಲೇ ನನ್ನ ಊರಿನಲ್ಲಿ... ಹಲವು ವರ್ಷಗಳಾದುವು." ಫುರ್ಕಾನ್ ಮಡಿಕೇರಿಯ ಒಂದು ಕುಗ್ರಾಮದ ಹೆಸರು ಹೇಳಿದ.

"ಯಾಕೆ?"

"ಯಾಕೆ ಅಂದರೆ?" ಸಾಲಾರ್‌ನ ಪ್ರಶ್ನೆಗೆ ಫುರ್ಕಾನ್ ಮರುಪ್ರಶ್ನಿಸಿದ. "ಜನರ ಸಹಾಯಕ್ಕೆ ಮತ್ತೇಕೆ?"

"ಹೋ. ಚಾರಿಟಿ ವರ್ಕ್."

"ಚಾರಿಟಿ ಅಲ್ಲ, ನನ್ನ ಕರ್ತವ್ಯ. ಇದು ಯಾರ ಮೇಲೂ ಮಾಡುವ ಉಪಕಾರ ಅಲ್ಲ" ಫುರ್ಕಾನ್ ಮಾತನಾಡುತ್ತಾ ವಿಷಯಾಂತರ ಮಾಡಿದ. ಶಾಲೆಯ ಬಗ್ಗೆ ಚರ್ಚೆಯಾಗಲಿಲ್ಲ. ಸ್ವಲ್ಪ ಹೊತ್ತಿಗೆ ಇಬ್ಬರೂ ವಿದಾಯ ಕೋರಿದರು.

❖ ❖ ❖

ಅನಿತಾಳ ಮದುವೆಗೆ ಫುರ್ಕಾನ್ ನಿಜವಾಗಿಯೂ ಆಗಮಿಸಿದ್ದ. ಅವನು ಅಲ್ಲಿ ಬಹಳ ಹೊತ್ತಿನ ತನಕ ಇದ್ದ. ಆದರೆ ಅವನು ತುಂಬಾನೇ ಗೊಂದಲಕ್ಕೀಡಾಗಿದ್ದಾನೆಂದು ಸಾಲಾರ್ ಅಂದಾಜಿಸಿದ.

"ನಿನ್ನ ಫ್ಯಾಮಿಲಿ ಸಾಕಷ್ಟು ಪಾಶ್ಚಾತ್ಯವಾಗಿದೆ."

ಸಾಲಾರ್‌ಗೆ ಅವನ ಗೊಂದಲ ಮತ್ತು ಆಶ್ಚರ್ಯದ ಕಾರಣ ತಿಳಿಯಿತು.

"ನಿನ್ನ ಫ್ಯಾಮಿಲಿ ಕೊಂಚ ಸಂಪ್ರದಾಯಸ್ಥವಾಗಿರಬಹುದೆಂದು ನಾನು ಭಾವಿಸಿದ್ದೆ. ಏಕೆಂದರೆ ನೀನು ಕುರ್‌ಆನ್ ಹಾಫಿಝ್ ಎಂದು ಹೇಳಿದೆಯಲ್ಲ. ಅಲ್ಲದೆ ನಿನ್ನ ಲೈಫ್ ಸ್ಟೈಲ್ ನನಗೆ ತುಂಬಾ ಸರಳವಾಗಿ ಕಂಡಿತು. ಆದರೆ ಇಲ್ಲಿಗೆ ಬಂದು ನನಗೆ ಆಶ್ಚರ್ಯವಾಯಿತು. ನಿನಗೂ ನಿನ್ನ ಫ್ಯಾಮಿಲಿಗೂ ಬಹಳ ವ್ಯತ್ಯಾಸವಿದೆ. I think you are the odd one out.

ಅವನು ತನ್ನ ಕೊನೆಯ ವಾಕ್ಯಕ್ಕೆ ಸ್ವತಃ ನಕ್ಕು ಬಿಟ್ಟ. ಅವರಿಬ್ಬರೂ ಫುರ್ಕಾನ್‌ನ ಕಾರಿನ ಹತ್ತಿರ ತಲುಪಿದ್ದರು.

ನಾನು ಕೇವಲ ಎರಡು ವರ್ಷಗಳ ಹಿಂದೆಯಷ್ಟೇ ಕುರ್‌ಆನ್ ಹಿಫ್ಝ್ ಮಾಡಿದ್ದು. ನಾನು ಎರಡು ಮೂರು ವರ್ಷಗಳಿಂದೀಚೆಗೆ odd one out ಆಗಿರುವುದು. ಅದಕ್ಕಿಂತ ಮುಂಚೆ ನಾನು ಫ್ಯಾಮಿಲಿಯವರಿಗಿಂತ ಹೆಚ್ಚೇ ವೆಸ್ಟರ್ನ್ ಆಗಿದ್ದೆ" ಸಾಲಾರ್ ಹೇಳುತ್ತಿದ್ದ.

"ಎರಡು ವರ್ಷಗಳ ಹಿಂದೆ ಕುರ್‌ಆನ್ ಹಿಫ್ಝ್ ಮಾಡಿದ್ದೋ? ಅದೂ ಅಮೇರಿಕದಲ್ಲಿ ಸ್ಟಡೀಸ್ ಜೊತೆಗೆ? ನಂಬಲಾಗ್ತಿಲ್ವೇ!" ಫುರ್ಕಾನ್ ಅವಿಶ್ವಾಸದಿಂದ ತಲೆಯಾಡಿಸಿದ, "ಎಷ್ಟು ಸಮಯ ಹಿಡಿದಿತ್ತು?"

"ಸುಮಾರು ಎಂಟು ತಿಂಗಳು."

ಫುರ್ಕಾನ್ ಬಹಳ ಹೊತ್ತಿನ ತನಕ ಏನೂ ಉತ್ತರಿಸದಾದ. ಅವನು ಕೇವಲ ಸಾಲಾರ್‌ನ ಮುಖವನ್ನೇ ನೋಡುತ್ತಾ ಇದ್ದು ಬಿಟ್ಟ. ತರುವಾಯ ಅವು ಒಂದು ದೀರ್ಘ ನಿಟ್ಟುಸಿರು ಬಿಟ್ಟು ಮೆಚ್ಚುಗೆಯಿಂದ ನೋಡುತ್ತಾ ಹೇಳಿದ, "ನಿನ್ನ ಮೇಲೆ ಅಲ್ಲಾಹನ ವಿಶೇಷ ಅನುಗ್ರಹವಿದೆ. ಅನ್ಯಥಾ ನೀನು ಹೇಳುತ್ತಿರುವುದೇನಿವೆಯೋ ಅವೆಲ್ಲ ಸುಲಭಸಾಧ್ಯ ಕಾರ್ಯಗಳಲ್ಲ. ನಾನು ಫ್ಲೈಟ್‌ನಲ್ಲಿಯೂ ನಿನ್ನ ಸಾಧನೆಗಳನ್ನು ಅರಿತು ಇಂಪ್ರೆಸ್ ಆಗಿದ್ದೆ. ಏಕೆಂದರೆ ಈ ಪ್ರಾಯದಲ್ಲಿ ಯುನಿಸ್ಕೋದ ಈ ಸೆಟ್‌ನಲ್ಲಿ ಕೆಲಸ ಎಲ್ಲರಿಂದ ಆಗುವಂತಹ ಕೆಲಸ ಅಲ್ಲ."

ಅವನು ಮತ್ತೊಮ್ಮೆ ಬಹಳ ಉತ್ಸಾಹದಿಂದ ಸಾಲಾರ್‌ನ ಕೈ ಕುಲುಕಿದ. ಕೆಲವು ಕ್ಷಣಗಳ ಮಟ್ಟಿಗೆ ಸಾಲಾರ್‌ನ ಮುಖದ ಬಣ್ಣ ಬದಲಾಗತೊಡಗಿತ್ತು.

"ಅಲ್ಲಾಹನ ವಿಶೇಷ ಅನುಗ್ರಹ!? ಒಂದು ವೇಳೆ ನನ್ನ ಜೀವನದಲ್ಲಿ ಏನೇನೆಲ್ಲ ಮಾಡಿರುವೆನೆಂಬುದನ್ನು ಹೇಳಿದರೆ..." ಸಾಲಾರ್ ಅವನ ಕೈ ಕುಲುಕುತ್ತಾ ಆಲೋಚಿಸಿದ.

"ನೀನು ಮೊನ್ನೆ ಯಾವುದೋ ಶಾಲೆಯ ಬಗ್ಗೆ ಹೇಳ್ತಿದ್ನಲ್ಲ..." ಸಾಲಾರ್ ವಿಷಯ ಬದಲಿಸಿದ, "ನೀನು ಮಂಗ್ಳೂರಲ್ಲಿರೋದಲ್ವಾ?"

"ನಾನು ಮಂಗ್ಳೂರಲ್ಲೇ ಇರೋದು. ಆದರೆ ನನ್ನ ಹುಟ್ಟು ಆ ಗ್ರಾಮದಲ್ಲಾಗಿತ್ತು. ನನ್ನ ಪೂರ್ವಜರ ಗ್ರಾಮ. ಅಲ್ಲಿ ನಮ್ಮ ಒಂದಿಷ್ಟು ಜಮೀನಿದೆ. ಒಂದು ಮನೆಯೂ ಇತ್ತು" ಫುರ್ಕಾನ್ ವಿವರಿಸತೊಡಗಿದ, "ಹಲವು ವರ್ಷಗಳ ಹಿಂದೆ ನನ್ನ ತಂದೆ ಬೆಂಗ್ಳೂರಿಗೆ ಶಿಫ್ಟಾದ್ರು. ಅವರೀಗ ಸಿವಿಲ್ ಸರ್ವಿಸ್‌ನಿಂದ ರಿಟೈರ್ ಆದ ಮೇಲೆ ತಮ್ಮ ಗ್ರಾಮದ ಜಮೀನಿನಲ್ಲಿ ಒಂದು ಶಾಲೆಯನ್ನು ತೆರೆದರು. ಆ ಗ್ರಾಮದಲ್ಲಿ ಯಾವುದೇ ಶಾಲೆ ಇರಲಿಲ್ಲ. ಅವರು ಒಂದು ಪ್ರಾಥಮಿಕ ಶಾಲೆಯೊಂದನ್ನು ತೆರೆದರು. ಏಳೆಂಟು ವರ್ಷಗಳಿಂದ ನಾನು ಆ ಶಾಲೆಯನ್ನು ನೋಡಿಕೊಳ್ತಾ ಇದ್ದೇನೆ. ಅದೀಗ ಹೈಸ್ಕೂಲ್ ಆಗಿ ಮಾರ್ಪಟ್ಟಿದೆ. ನಾಲ್ಕು ವರ್ಷಗಳ ಹಿಂದೆ ನಾನಲ್ಲಿ ಒಂದು ಡಿಸ್ಪೆಂಸರಿ ತೆರೆದೆ. ನೀನು ಆ ಡಿಸ್ಪೆಂಸರಿ ನೋಡಿದ್ರೆ ಆಶ್ಚರ್ಯವಾಗಬಹುದು. ಅದರಲ್ಲಿ ಅತ್ಯಾಧುನಿಕ ಉಪಕರಣಗಳೆಲ್ಲ ಇವೆ. ನನ್ನೋರ್ವ ಮಿತ್ರ ಒಂದು ಆಂಬುಲೆನ್ಸ್ ಕೂಡ ಗಿಫ್ಟ್ ಮಾಡಿದ್ದ. ಈಗ ಕೇವಲ ನನ್ನ ಗ್ರಾಮದ ಮಾತ್ರವಲ್ಲ, ಸುತ್ತಮುತ್ತಲ ಗ್ರಾಮಗಳ ಜನರೂ ಶಾಲೆ ಮತ್ತು ಡಿಸ್ಪೆಂಸರಿಯಿಂದ ಪ್ರಯೋಜನ ಪಡೆಯುತ್ತಿದ್ದಾರೆ."

ಸಾಲಾರ್ ಅವನ ಮಾತನ್ನು ಗಮನವಿಟ್ಟು ಆಲಿಸುತ್ತಿದ್ದ.

[ಮುಂದುವರಿಯುವುದು]

ಗೃಹಿಣಿಯರ ಕೇಕ್ ಪ್ರೇಮವೂ ಆರೋಗ್ಯ ಸಮಸ್ಯೆಗಳೂ...

ಯೂಟ್ಯೂಬ್ ಚಾನೆಲ್‌ಗಳಲ್ಲೂ, ಇತರೆಡೆಗಳಲ್ಲೂ ಅಮ್ಮಂದಿರಿಗೆ ಯುವತಿಯರಿಗೆ ಮಕ್ಕಳಿಗೆ ಎಲ್ಲರಿಗೂ ಕೇಕ್ ಮಾಡುವುದೇ ಒಂದು ಟ್ರೆಂಡ್ ಆಗಿ ಬಿಟ್ಟಿದೆ. ಅದರ ವೈಭವ, ಸೌಂದರ್ಯ ಅಲಂಕಾರ... ಅಯ್ಯೋ ಹೇಳುವುದೇ ಬೇಡ. ಒಬ್ಬರಿಗಿಂತ ಇನ್ನೊಬ್ಬರ ಮೇಲಾಟ ಇದು ಅದೇಕೋ ಅತಿಯೆನಿಸುವಷ್ಟು ಆಗಿ ಬಿಟ್ಟಿದೆ. ಕೇಕ್‌ನ ಭ್ರಮೆಯಲ್ಲಿ ಅದನ್ನು ತಯಾರಿಸುವ ಗಡಿಬಿಡಿಯಲ್ಲಿದ್ದಾರೆ.

ಆದರೆ ತಮ್ಮ ಈ ಕೆಲಸದಿಂದ ನಾವು ಬರುವ ಪೀಳಿಗೆಯನ್ನು ಕರುಳು ಸಂಬಂಧಿ ರೋಗಗಳಿಗೂ, ಕೊಲೆಸ್ಟ್ರಾಲ್, ಶುಗರ್‌ನಂತಹ ಮಾರಕ ರೋಗಗಳ ಗುಲಾಮರಾಗಿಸುತ್ತಿದ್ದೇವೆಂದು ಎಷ್ಟು ಮಂದಿ ತಿಳಿದಿದ್ದಾರೆ?... ಕೇಕ್‌ಗೆ ಉಪಯೋಗಿಸುವ ವಿಪ್ಪಿಂಗ್ ಕ್ರೀಮ್, ಮಿಲ್ಕ್‌ಮೇಡ್, ಕಲರ್ ಸಿರಪ್, ಅಲಂಕಾರ ಮಣಿಗಳು... ಇವೆಲ್ಲವನ್ನೂ ತಯಾರಿಸುವ ರೀತಿಯನ್ನು ಅದಕ್ಕೆ ಉಪಯೋಗಿಸುವ ವಸ್ತುಗಳನ್ನು ತಿಳಿದರೆ ಬರುವ ತಲೆಮಾರು ಎದುರಿಸಬೇಕಾಗಿ ಬರುವ ಆರೋಗ್ಯ ಸಮಸ್ಯೆಯ ಅರಿವಾಗುತ್ತದೆ. (ಇದು ಮಕ್ಕಳ ಆರೋಗ್ಯದ ಮೇಲೆ ಬೇಗನೇ ಪರಿಣಾಮ ಬೀರುತ್ತದೆ ಎಂಬುದು ಆತಂಕ ಹುಟ್ಟಿಸುವ ವಿಷಯ)

ಇಂದು ನಾವು ಎದುರಿಸುತ್ತಿರುವ ಹಲವು ಮಾರಕ ರೋಗಗಳಿಗೆ ಆಧುನಿಕ ಆಹಾರ ಶೈಲಿಯ ಹಿಂದೆ ಓಡುವುದೇ ಕಾರಣವಾಗಿದೆ. ಗ್ರೀಲ್ ಚಿಕನ್, ಅಲ್ಫಾಮ್, ಶವರ್ಮ ಇಂದು ಕ್ಯಾನ್ಸರ್ ಹೆಚ್ಚುತ್ತಿರಲು ಮಾಂಸಗಳನ್ನು ಬೆಂಕಿಯಲ್ಲಿ ಇಟ್ಟು ಕರಿದು ತಿನ್ನುವುದೂ ಒಂದು ಕಾರಣವೆಂದು ಅಧ್ಯಯನಗಳು ತಿಳಿಸುತ್ತದೆ.

ಆಹಾರದ ಬಳಿಕ ತಂಪುಪಾನೀಯಗಳು (ಪೆಪ್ಸಿ, ಕೋಲ, ಝಾಫಾ, ಕೋಲ್ಡ್ ನೀರು) ಸೇವಿಸುವುದು ದಹನಕ್ರಿಯೆಗೆ ಅಡ್ಡಿಪಡಿಸುತ್ತದೆ. ಅದರೊಂದಿಗೆ ಕಿಡ್ನಿಯಂತಹ ಅವಯವಗಳಿಗೂ ಕೆಲಸ ಭಾರ ಹೆಚ್ಚುತ್ತದೆ. ಇದೆಲ್ಲಾ ರೋಗಗಳನ್ನು ನಾವು ಆಹ್ವಾನಿಸುತ್ತಿರುವ ರೀತಿಯಾಗಿದೆ. ನಮ್ಮ ಈ ಕೇಕ್, ಪುಡ್ಡಿಂಗ್‌ಗಳು ಭವಿಷ್ಯದಲ್ಲಿ ತಲೆನೋವಾಗದಿದ್ದರೆ ಆಶ್ಚರ್ಯವೆಂದು ಹೇಳಬಹುದು. ■



“ಮುಸ್ಲಿಮ್ ಮಹಿಳೆಯರೇ!
ನೆರೆಹೊರೆಯವರಿಗೆ ಸಣ್ಣ
ಪುಟ್ಟ ವಸ್ತುಗಳ ಉಡುಗೊರೆ
ಕಳುಹಿಸಿಕೊಡುವುದನ್ನು
ಯಾವ ಮಹಿಳೆಯೂ
ಹಗುರವಾಗಿ
ಪರಿಗಣಿಸಬಾರದು. ಅದು
ಕೇವಲ ಆಡಿನ ಒಂದು
ಗೊರಸಾಗಿದ್ದರೂ ಸರಿ.”
[ಪ್ರವಾದಿ ಮುಹಮ್ಮದ್(ಸ)]

“ಯಾವ ವ್ಯಕ್ತಿಯ ಕಿರುಕುಳಗಳಿಂದ ಅವನ ನೆರೆಕರೆಯವರು ಸುರಕ್ಷಿತರಲ್ಲವೋ ಅವನಲ್ಲಿ ಧರ್ಮವಿಶ್ವಾಸವಿಲ್ಲ.” [ಪ್ರವಾದಿ ಮುಹಮ್ಮದ್(ಸ)]

With best compliments from;

AMEENA
ASSOCIATES

DAVANGERE - 577001

ಪ್ರಕಾಶ ನಡಹಳ್ಳಿ, ಮಂಗಳೂರು
(ಆಪ್ತ ಸಲಹೆಗಾರರು)
ಫೋನ್: 9448848036
email: nadahalli56@gmail.com

ಹದಿಹರೆಯ- ಪೋಷಕರಿಗೊಂದು ಸವಾಲು

ಪ್ರೌಢ ಶಾಲೆಯಿಂದ ಕಾಲೇಜಿಗೆ ಕಾಲಿಡುತ್ತಿರುವ ಮಕ್ಕಳಲ್ಲಿ ನಾವು ಹಲವು ಬದಲಾವಣೆಗಳನ್ನು ಕಾಣುತ್ತೇವೆ. ಅವರ ವಸ್ತುಗಳಾದ ಬಟ್ಟೆ, ಕಪಾಟು, ಟೇಬಲಿನಲ್ಲಿ ಯಾರೂ ಕೈ ಹಾಕಬಾರದು, ಅವರಿಗೊಂದು ರೂಮಿದ್ದರೆ, ರೂಮಿನ ಬಾಗಿಲು ಹಾಕಿ ಕುಳಿತುಕೊಳ್ಳುವುದು ಶುರುವಾಗುತ್ತದೆ. ನಮ್ಮ ಜೊತೆ ತಿರುಗಾಡಲು ಇಷ್ಟಪಡುವುದಿಲ್ಲ. ಒಂಟಿಯಾಗಿರುವ ಹಾಗೆ ಕಂಡು ಬರುತ್ತದೆ. ಕನ್ನಡಿಯ ಮುಂದೆ ಹೆಚ್ಚು ಸಮಯ ಕಳೆಯುತ್ತಾರೆ. ಅವರ ಮೊದಲಿನ ಆಟದ ಸಾಮಾನುಗಳ ರೂಮು ಬೇರೊಂದು ಗ್ಯಾಲರಿಯಾಗಿ ಮಾರ್ಪಾಡಾಗಿರುತ್ತದೆ. ರೂಮಿನಲ್ಲಿ ಯಾವುದೂ ಓರಣವಾಗಿರುವುದಿಲ್ಲ, ನಾವು ಕರೆದಾಗಲೆಲ್ಲಾ ಏನೋ ಕೆಲಸದ ನೆಪ, ನಾವು ಹೇಳಿದ್ದನ್ನು ಕೇಳಿಸಿಕೊಳ್ಳುವ ಸಹನೆ ಕಡಿಮೆಯಾಗುತ್ತಿರುತ್ತದೆ. ಊಟ ತಿಂಡಿ ಸಮಯಕ್ಕೆ ಸರಿಯಾಗಿ ಮಾಡುವುದಿಲ್ಲ. ನಿದ್ರೆ, ಸ್ನಾನಕ್ಕೆ ಸಮಯವೇ ಸಿಗುವುದಿಲ್ಲ. ಮತ್ತೊಮ್ಮೆ ಕರೆದಾಗ ಸಿಡುಕುತ್ತಾರೆ.

ಈ ರೀತಿಯ ಮಕ್ಕಳ ವರ್ತನೆಯಿಂದ, ಪೋಷಕರಿಗೆ ಚಿಂತೆಯಾಗುತ್ತದೆ. ಆದರೆ ಈ ವರ್ತನೆ ಹದಿಹರೆಯದವರಲ್ಲಿ ಸಾಮಾನ್ಯ. ತಾವು ಬಾಲ್ಯ ಜೀವನದಿಂದ ಹೊರ ಬರುತ್ತಿದ್ದೇವೆ. ಪ್ರಬುದ್ಧರಾಗುತ್ತಿದ್ದೇವೆ ಎಂಬ ಭಾವನೆಯನ್ನು, ಮಕ್ಕಳು ಹೊಂದಿರುತ್ತಾರೆ. ಸಮಯದ ಹೊಂದಾಣಿಕೆ ಮತ್ತು ತಮ್ಮ ಉಳಿದ ಕೆಲಸಗಳನ್ನು ತಾವು ಮಾಡಬಲ್ಲೆವೆಂಬ ವಿಶ್ವಾಸ ಇರುತ್ತದೆ. ಅದಕ್ಕಾಗಿ ಪ್ರಯತ್ನ ಪಡುತ್ತಾರೆ. ಆದರೆ ಸಾಧ್ಯವಾಗುವುದಿಲ್ಲ.

ಅವರ ರೂಮನ್ನು ಅವರಿಗೆ ಬೇಕಾದ ಹಾಗೆ ರೂಪಿಸಿಕೊಳ್ಳುತ್ತಾರೆ, ಪೋಷಕರ ಹಸ್ತಕ್ಷೇಪ ಬೇಡವೆನ್ನಿಸುತ್ತದೆ. ಒಟ್ಟಾರೆ ಸ್ವತಂತ್ರವಾಗಿರುವ ಹಂಬಲ.

ಹೇಗೆ ಕಂಬಳಿ ಹುಳು ತನ್ನ ಗೂಡು ಕಟ್ಟಿಕೊಂಡು, ಚಿಟ್ಟೆಯಾಗಿ ಹೊರ ಹೊಮ್ಮುತ್ತೆ. ಅದೇ ರೀತಿಯಲ್ಲಿಯೇ, ಅವರು ತಮ್ಮ ಸುತ್ತವೊಂದು ಗೂಡು ಕಟ್ಟಿಕೊಳ್ಳುತ್ತಾರೆ. ಆ ಗೂಡಿನಲ್ಲಿ ಅವರ ಸಮಾನ ವಯಸ್ಕರು, ಅವರ ಕನಸುಗಳು, ಇಷ್ಟವಾಗುವ ಸಂಗೀತ, ಸಿನೆಮಾ ಅಥವಾ ಕ್ರಿಕೆಟ್ ತಾರೆಯರಿಗೆ (stars) ಮಾತ್ರ ಮೀಸಲು. ಗೂಡಿನಲ್ಲಿರುವುದೊಂದು ಪರಿವರ್ತನೆಯ ಕಾಲ, ಇದು ತಾತ್ಕಾಲಿಕವಾದದ್ದು, ಇಲ್ಲಿ ಪೋಷಕರು ಅವರ ಇಚ್ಛೆಗೆ ವಿರೋಧ ತೋರಿಸಿದಷ್ಟು, ಮಕ್ಕಳು ಪೋಷಕರಿಂದ ದೂರ ಹೋಗುತ್ತಾರೆ.

ಪೋಷಕರು ಮಕ್ಕಳಲ್ಲಾಗುವ ಬದಲಾವಣೆಯನ್ನು ಒಪ್ಪಿಕೊಳ್ಳುವುದು ಮುಖ್ಯ. ಅವರಲ್ಲಾಗುವ ಬದಲಾವಣೆಯ ಬಗ್ಗೆನೆ ಮಾತನಾಡಿ. ಈ ಸಂದರ್ಭದಲ್ಲಿ, ಅವರಿಗೇನಾದರೂ ತೊಂದರೆಯಾಗುತ್ತಿದೆಯಾ, ಸಹಾಯ ಬೇಕಾ

ಅಂತ ಕೇಳಬಹುದು. ಅವರ ಪ್ರತಿಕ್ರಿಯೆಯನ್ನು ಆಲಿಸಿ. ಆಗ ನಿಮಗೂ ಅವರಿಗೂ ಸಮಾಧಾನವಾಗುತ್ತದೆ.

ಹದಿಹರೆಯದವರಿಗೂ ಕುತೂಹಲಕ್ಕೂ ಒಂದು ವಿಶೇಷ ನಂಟಿದೆ. ಕುತೂಹಲ ಮನುಷ್ಯ ಸಹಜವಾದದ್ದು. ಕುತೂಹಲ ವಿಲ್ಲದೆ ಹೊಸ ಅವಿಷ್ಕಾರ ಸಾಧ್ಯವಿಲ್ಲ. ಕುತೂಹಲವು ಆಸಕ್ತಿಯನ್ನು ಕೆರಳಿಸುತ್ತದೆ. ಆಸಕ್ತಿಯಿಂದ ನೋಡಿದಾಗ ಆ ಕೆಲಸ ಮಾಡಬೇಕೆನಿಸುತ್ತದೆ. ಕುತೂಹಲ ಒಂದು ಕ್ರಿಯೆಗೆ ಪ್ರಚೋದನೆಯಾಗುತ್ತದೆ. ಮಕ್ಕಳ ಬಾಲ್ಯವನ್ನೇ ನೋಡಿ. ನಾವು ಒದಗಿಸಿದ ವಿಷಯ ಮತ್ತು ವಸ್ತುಗಳನ್ನು ಮಕ್ಕಳು ಕುತೂಹಲದಿಂದ ನೋಡ್ತಾರೆ, ತಾವೂ ಮಾಡಲಿಕ್ಕೆ ಶುರು ಮಾಡ್ತಾರೆ. ಹೀಗೆ ಅವರ ಕುತೂಹಲ, ಆಸಕ್ತಿ ಹೆಚ್ಚುತ್ತಾ ಇರುತ್ತದೆ. ಕುತೂಹಲದಿಂದ ಮಕ್ಕಳ ಬೆಳವಣಿಗೆ ಹೆಚ್ಚುತ್ತದೆ. ಅದರ ಮುಂದುವರಿದ ಭಾಗವೇ, ಹದಿಹರೆಯದ ಕಾಲ. ಕುತೂಹಲದ ಜೊತೆ ಪ್ರಯೋಗಕ್ಕೂ, ಸಾಹಸಕ್ಕೂ ಹಾತೊರೆಯುತ್ತಾರೆ ಯುವ ಪೀಳಿಗೆ.

ಆದರೆ ಕುತೂಹಲ ಎಷ್ಟು ಒಳ್ಳೆಯದೋ ಕೆಲವೊಮ್ಮೆ ಅಷ್ಟೇ ಅಪಾಯಕಾರಿ ಕೂಡ ಆಗಬಹುದು. ಉದಾಹರಣೆಗೆ, ಮೋಟಾರ್ ಬೈಕನ್ನು ಕೈ ಬಿಟ್ಟು ಹೊಡೆಯುತ್ತಾರೆ ಅಥವಾ ಸೇತುವೆಯಿಂದ ನದಿಗೆ ಹಾರಿ ಈಜು ಹೊಡೆಯುವುದು.

ಇದನ್ನು ಅಪಾಯಕಾರೀ ಅಥವಾ ರಿಸ್ಕೀ ವರ್ತನೆಯೆಂತ ಹೇಳಬಹುದು. ಇವರ ಜೊತೆ ಇವರ ಸಮಾನ ವಯಸ್ಕರ ಗೆಳೆತನವಿರುತ್ತದೆ. ಆಗ ಪೋಷಕರಿಗೆ ಆತಂಕವಾಗುತ್ತದೆ. ಆಗ ನಾವು ಎಚ್ಚರಿಕೆ ಹೇಳಬೇಕು ಅಂತ ಅನ್ನಿಸುತ್ತದೆ, ಹೇಗೆ ಹೇಳುವುದು?

ಆಗ ಅವರ ಉತ್ಸಾಹಕ್ಕೆ ತಣ್ಣೀರು ಎರೆಚದೆ, ಸ್ಪಂದಿಸಬೇಕು, ನಮ್ಮ ಕಳಕಳಿಯನ್ನು ವ್ಯಕ್ತಪಡಿಸಬೇಕು.

ಅವರ ಉತ್ಸಾಹವನ್ನು ಕುಗ್ಗಿಸಬಾರದು. ನಿಜ. ಆಗ ಪೋಷಕರು, ಮೌಲ್ಯಮಾಪನದ ವಿಧಾನವನ್ನು ಹದಿಹರೆಯದವರಿಗೆ ಕಲಿಸಬೇಕು. ಮೌಲ್ಯಮಾಪನವನ್ನು ಒಂದು ಉದಾಹರಣೆ ಮೂಲಕ ತಿಳಿಸುವ ಪ್ರಯತ್ನ ಮಾಡುತ್ತೇನೆ.

ಈ ಸಂದರ್ಭದಲ್ಲಿ ಒಂದು ಘಟನೆ ನೆನಪಿಗೆ ಬರ್ತಿದೆ. ಹೈಸ್ಕೂಲ್ ಮುಗಿಸಿದ ಯುವಕ, ಊರಿನ ನದಿಗೆ ಎತ್ತರದಿಂದ ಹಾರಿ ಈಜಲು ಪ್ರಯತ್ನಿಸಿದ. ಹಾರಿದ ರಭಸಕ್ಕೆ, ತಲೆ ನದಿಯಲ್ಲಿರುವ ಕಲ್ಲಿಗೆ ಹೊಡೆದು, ಆ ಸ್ಥಳದಲ್ಲೇ ತೀರಿಕೊಂಡ. ಅವನೊಂದು ದೊಡ್ಡ ಸಾಹಸಕ್ಕೆ ಕೈ ಹಾಕಿದ್ದ.

ಇಂಥಹ ಹಲವು ಘಟನೆಗಳನ್ನು ನಾವು ಕೇಳಿದ್ದೇವೆ. ಈ ರೀತಿಯ ಸಾಹಸಕ್ಕೆ ಕೈ ಹಾಕುತ್ತೇನೆಂದು ಹೇಳಿದರೆ, ನಾವು ಅವರಿಗೆ ತಿಳುವಳಿಕೆ ಕೊಡಲೇಬೇಕು. ಹೇಗೆಂದರೆ, ನಿನ್ನ ಕುತೂಹಲ, ಸಾಹಸ ಮಾಡುವ ಆಸೆ ಒಪ್ಪುತ್ತೇನೆ. ಆದರೆ ಈ ಪ್ರಯೋಗದಿಂದ ಸಿಗುವ ರಿವಾರ್ಡ್ ಏನಂತ ವಿಚಾರ ಮಾಡು, ರಿಸ್ಕ್ ಎಷ್ಟಿದೆ ನೋಡ್ಕೋ, ಆ ರಿವಾರ್ಡಿಗೆ ತೆಗೆದುಕೊಳ್ಳುವ ರಿಸ್ಕ್ ಯೋಗ್ಯವಾ? ರಿಸ್ಕನ್ನು ಕಡಿಮೆ ಮಾಡಲು ಸಾಧ್ಯವಾ? ರಿಸ್ಕ್ ತೆಗೆದುಕೊಳ್ಳುವುದು ಅನಿವಾರ್ಯವಾದರೆ, ರಿಸ್ಕ್‌ನಿಂದ ಪಾರಾಗಲು ಉಪಾಯವೇನು? ಅದರ ಬಗ್ಗೆ ವಿಶ್ಲೇಷಣೆ ನಡೆಸುವಂತೆ ಮಾಡಿದರೆ ಸಾಕು. ಆಗ ಅವರು ವಿಚಾರ ಮಾಡುತ್ತಾರೆ.

ಮೇಲಿನ ಉದಾಹರಣೆಯನ್ನೇ ಮುಂದುವರಿಸೋಣ.

ಈಜುವ ಸ್ಪರ್ಧೆಯಿದೆ ಭಾವಿಸೋಣ. ಉದ್ದೇಶ ಈಜು ಸ್ಪರ್ಧೆ, ಅದರ ಮೊದಲು ಈಜು ಕೊಳಕ್ಕೆ ಹೋಗಬೇಕು, ತರಬೇತಿ ಪಡೆಯಬೇಕು, ಆಗ ತೊಂದರೆಯಾಗುವ ಸಾಧ್ಯತೆ ಕಡಿಮೆ. ಅಪಾಯದ ಅಂದಾಜಿದೆ. ಬೇರೆ ತೊಂದರೆಯಾದರೆ, ಈಜುಕೊಳದ ಸಹಾಯಕರು ಅಪಾಯದಲ್ಲಿರುವವರ ಸಹಾಯಕ್ಕೆ ಧಾವಿಸುತ್ತಾರೆ. ಈಜಾಟದಲ್ಲಿ ತಪ್ಪಾಗಿದೆ, ಸರಿಪಡಿಸುತ್ತಾರೆ. ಅದನ್ನು ಬಿಟ್ಟು, ಗೊತ್ತಿಲ್ಲದ ಜಾಗದಲ್ಲಿ, ಜನ ಸಂಪರ್ಕವಿಲ್ಲದ ಪ್ರದೇಶದಲ್ಲಿ ರಿಸ್ಕ್ ತೆಗೆದುಕೊಂಡಾಗ ತುಂಬಾ ಅಪಾಯಕಾರಿ ಹಾಗೂ ಸಹಾಯವೂ ಸಿಗುವುದಿಲ್ಲ. ಅದೊಂದು ಆಕಸ್ಮಿಕ, ಏನು ಬೇಕಾದರೂ ಆಗಬಹುದು.

ಆದ್ದರಿಂದ, ಮನೆಯ ಕೆಲಸಗಳಲ್ಲಿ ಸ್ವಲ್ಪ ಸ್ವಾತಂತ್ರ್ಯ ಕೊಟ್ಟು, ತಪ್ಪಿದರೆ ಏನಾಗುತ್ತದೆಯೆಂಬ ಜವಾಬ್ದಾರಿಯನ್ನು ಕಲಿಸಿ. ತಪ್ಪಾದರೂ ಸಹಿಸಿ, ತಿಳಿಹೇಳಿ. ಜವಾಬ್ದಾರಿಯ ವರ್ತನೆಯನ್ನು ಕಲಿಸಬೇಕು. ಆಗ ಪೋಷಕರ ಆತಂಕವೂ ಕಡಿಮೆಯಾಗುತ್ತೆ, ಮಕ್ಕಳು ಕಲಿಯುತ್ತಾರೆ, ಜೊತೆಗೆ ಪ್ರಯೋಗಕ್ಕೆ ರಿಸ್ಕ್ ಎಷ್ಟು ತೆಗೆದುಕೊಳ್ಳಬಹುದೆಂಬ ಅಂದಾಜು ಸಿಗುತ್ತದೆ.

ಹದಿಹರೆಯದವರ, ಪೋಷಕರ ಮನೋಧಾರೆಯು ವಿರುದ್ಧ ದಿಕ್ಕಿನಲ್ಲಿ ಓಡುತ್ತಿರುತ್ತದೆ. ಇದನ್ನು ತಲೆಮಾರಿನ ಅಂತರ, ಜನರೇಷನ್ ಗ್ಯಾಪ್ ಅನ್ನುತ್ತೇವೆ.

ಈ ಭಿನ್ನ ಅಭಿಪ್ರಾಯವನ್ನು ಜಯಿಸುವುದು ಒಂದು ದೊಡ್ಡ ಸವಾಲೇ.

ಪೋಷಕರ ಮನೋಧರ್ಮ ಹೇಗಿರುತ್ತದೆಯೆಂದರೆ, ದಿನ ನಿತ್ಯದ ಕೆಲಸಗಳಿಗೆ ಒತ್ತು ನೀಡುತ್ತಾ ಇರ್ತಾರೆ.

ಪೋಷಕರು ಇರುವ ಆದಾಯದಲ್ಲಿ ಕುಟುಂಬ ನಿರ್ವಹಣೆ ಬಗ್ಗೆ ವಿಚಾರ ಮಾಡುತ್ತಾರೆ. ಮಿತ ಬಳಕೆಗಾಗಿ ಒಂದೇ ರೀತಿಯ ಜೀವನ ಕ್ರಮ ಅನುಸರಿಸುತ್ತಾರೆ, ಭವಿಷ್ಯದ ಬಗ್ಗೆಯೂ ವಿಚಾರ ಮಾಡುತ್ತಾರೆ. ಎಲ್ಲರ ಸಹಬಾಳ್ವೆ, ಮನೆಯ ಪದ್ಧತಿಗಳು ಇವರ ಗುರಿಯಾಗಿರುತ್ತದೆ.

ಆದರೆ ಯುವ ಪೀಳಿಗೆಯು ವೈಯಕ್ತಿಕ ಬದಲಾವಣೆಗೆ ಹಾತೊರೆಯುತ್ತಾರೆ. ವೈಯಕ್ತಿಕ ಬದಲಾವಣೆಗೆ ಒತ್ತು ಕೊಡುವ ಪದ್ಧತಿಯನ್ನು ಮೆಚ್ಚುತ್ತಾರೆ. ವಿಶಿಷ್ಟವಾಗಿರಲು ಇಚ್ಛಿಸುತ್ತಾರೆ.

ಆದ್ದರಿಂದ ಯುವ ಪೀಳಿಗೆಯವರು, ಹೊಸ ನಮೂನೆಯ ಉಡುಪು, ಜೀವನ ಶೈಲಿಗಳಿಗೆ ಮೊರೆ ಹೋಗುತ್ತಾರೆ. ತಾವು ಸಿನೆಮಾ ತಾರೆಯರಂತೆ ಕಾಣುವ ಕನಸು ಕಾಣುತ್ತಾರೆ, ಆ ರೀತಿ ಆಗ ಬಯಸುತ್ತಾರೆ, ಅವರ ಸಮಾನ ವಯಸ್ಕರ, ಮನಸ್ಕರ ಮೆಚ್ಚುಗೆಗೆ ಪಾತ್ರರಾಗಬೇಕೆಂದು ಪ್ರಯತ್ನ ಪಡುತ್ತಾರೆ. ಅವರ ತಾಳಕ್ಕೆ ಹೆಜ್ಜೆ ಹಾಕುತ್ತಿರುತ್ತಾರೆ.

ಕುಟುಂಬ ನಿರ್ವಹಣೆಗೆ ಪ್ರಾಮುಖ್ಯತೆ ಕೊಡಬೇಕು. ನಿಜ, ಆದರೆ ಯುವ ಪೀಳಿಗೆಯ ಬದಲಾವಣೆಯನ್ನು ಅಲಕ್ಷ್ಯ ಮಾಡಿದರೆ, ಅವರ ಬೆಳವಣಿಗೆ

ಕುಂಠಿತವಾಗುತ್ತದೆ. ಆದ್ದರಿಂದ ಪೋಷಕರು ಮಕ್ಕಳ ಬೆಳವಣಿಗೆಯನ್ನೂ, ಹೊಸ ತನವನ್ನೂ ಸ್ವಾಗತಿಸಬೇಕು, ಗೌರವಿಸ ಬೇಕು. ಅವರ ಬಗ್ಗೇನೆ ಕುತೂಹಲ ತೋರಿಸಿ. ಆದರೆ ಯುವಪೀಳಿಗೆಗೆ ಕೊಡಬೇಕಾದ ಸಂದೇಶವೇನೆಂದರೆ, ನಿಮ್ಮಲ್ಲಿರುವ ಬದಲಾವಣೆ, ಹೊಸತನವನ್ನು ನಾವು ಗೌರವಿಸುತ್ತೇವೆ, ಆದರೆ ದಿನಚರಿಯನ್ನು ಅಲಕ್ಷ್ಯ ಮಾಡಬೇಡಿ. ಹೊಸತರಲ್ಲಿಯೇ ನಮ್ಮ ಶಕ್ತಿ ಮತ್ತು ಗಮನ ಹೆಚ್ಚು ತೊಡಗಿಸಿದರೆ, ದಿನಚರಿ ಹಿಂದುಳಿದು, ಒತ್ತಡ ಹೆಚ್ಚಾಗುತ್ತದೆ.



ಆದ್ದರಿಂದ ದಿನಚರಿಗೂ ಗಮನ ಕೊಡಿ, ಹೊಸತನಕ್ಕೂ ಪ್ರಾಮುಖ್ಯತೆ ಕೊಡಿ.

ಯುವ ಪೀಳಿಗೆಯ ಮನಸ್ಥಿತಿ ಹೇಗೆಂದರೆ, ಹೊಸದು ಮಾಡಬೇಕೆಂಬ ಹಂಬಲ ಒಂದೆಡೆ, ಇನ್ನೊಂದೆಡೆ ಮನಸ್ಸು ಧೈರ್ಯ ಮಾಡಲಾರದು. ಮನೆಯ ನೆಮ್ಮದಿಯ ಜೀವನವೂ ಬೇಕು ಮತ್ತು ಹೊಸತು, ಬದಲಾವಣೆಯೂ ಬೇಕು, ರಿಸ್ಕಿಗೆ ಭಯ ಪಡುತ್ತಾರೆ. ಇವೆಲ್ಲಾ ಸರಿದೂಗಿಸುವುದು ಕಷ್ಟವಾಗಿ ಅವರಲ್ಲಿ ಗೊಂದಲವಾಗುತ್ತದೆ.

ಈ ಗೊಂದಲಕ್ಕೆ ಕಾರಣಗಳನ್ನು ನೋಡೋಣ.

ಯುವ ಪೀಳಿಗೆಯು ತಾವೇ ನಿರ್ಧರಿಸಿ, ಒಂದು ಸ್ವವ್ಯಕ್ತಿತ್ವದ ಮಾದರಿ ಗಾಗಿ ಪ್ರಯತ್ನ ನಡೆಸಿರುತ್ತಾರೆ. ತಮ್ಮ ಪೋಷಕರು ನಿಗದಿಪಡಿಸಿದ ಮಾದರಿ ಯನ್ನು ತಲುಪಲು ಕಷ್ಟಪಡುತ್ತಿರುತ್ತಾರೆ. ತಮ್ಮ ಸ್ನೇಹಿತರ ನಿರೀಕ್ಷೆಯನ್ನು ಅನುಸರಿಸಲು ಪ್ರಯತ್ನ ಪಡುತ್ತಾರೆ. ಇವೆಲ್ಲಾ ಮಾದರಿಗಳ ಸಮನ್ವಯ ಸಾಧಿಸುವ ಅಥವಾ ಒಗ್ಗೂಡಿಸುವ ಕೆಲಸ ಸಾಧ್ಯವಾಗುವುದಿಲ್ಲ.

ಪೋಷಕರೊಡನೆ ಹೇಗೆ ಹೇಳು ವುದು, ಕಷ್ಟವೇನೆಂದರೆ, ಅವರು ತಮ್ಮನ್ನು ಅರ್ಥ ಮಾಡಿಕೊಳ್ಳೋದಿಲ್ಲ. ಬುದ್ಧಿವಾದ ಹೇಳ್ತಾರೆ, ಆಗ ಕೋಪ ಹೆಚ್ಚಾಗುತ್ತದೆ, ಮಾತು ಕಡಿಮೆ ಆಗತ್ತೆ. ಮಾತು ಕಡಿಮೆಯೆಂದರೆ ಕೋಪವನ್ನು ಒಳಗೆ ನುಂಗಿಕೊಳ್ಳುತ್ತಾರೆ. ಮಾತನಾಡಿದರೆ, ವಾದ ಶುರುವಾಗುತ್ತದೆ. ಇಲ್ಲವೇ, ಒರಟಾಗಿ ವರ್ತಿಸುತ್ತಾರೆ.

ಮಕ್ಕಳೊಂದಿಗೆ ಮೊದಲಿನ ಬಾಂಧವ್ಯ ಇಲ್ಲವೆಂದು ಪೋಷಕರಿಗೆ ಚಿಂತೆ ಯಾಗುತ್ತದೆ.

ಈ ರೀತಿಯ ವರ್ತನೆಗಳನ್ನು ಸರಿ ಪಡಿಸುವ ಹೊಣೆಗಾರಿಕೆ, ಪೋಷಕರದ್ದೇ.

ಹೆದರ ಬೇಡ, ಕೋಪ ಬೇಡ, ಕುತೂಹಲ ಒಳ್ಳೇದಲ್ಲ, ಹತಾಶನಾಗ ಬೇಡ, ಈ ರೀತಿಯ ಸಲಹೆಗಳು ಅನುಪಯುಕ್ತ.

ಮಕ್ಕಳ ಖಾಸಗಿತನವನ್ನು ಗೌರವಿಸಿ, ಅವರ ಮಾತನ್ನು ಕೇಳಿ, ನೀನು ಹೇಳಿದ್ದು ಪೂರ್ತಿ ಅರ್ಥವಾಗಿಲ್ಲ, ಇನ್ನು ಸ್ವಲ್ಪ ಹೇಳಿದರೆ ನನಗೆ ಸಮಾಧಾನ ಆಗುತ್ತೆ ಅಂತ ತಿಳಿಸಿ.

ನಿಮ್ಮ ಮತ್ತು ಮಕ್ಕಳ ನಡುವೆ ಅಂತರವಿರಬೇಕೆಂಬುದನ್ನು ಒಪ್ಪಿಕೊಳ್ಳಬೇಕು ಮತ್ತು ಅವರು ಪ್ರಬುದ್ಧತೆಗೆ ಪ್ರಯ ತ್ನಿಸುತ್ತಿದ್ದಾರೆ, ಆದ್ದರಿಂದ ಅವರಿಗೆ ಅಭಿಪ್ರಾಯ ಹೇಳುವ ಅವಕಾಶ ಕೊಡಬೇಕು. ಪೋಷಕರು ಅವರ ಅಭಿ ಪ್ರಾಯ ಒಪ್ಪದೇ ಇರಬಹುದು. ಆದರೆ ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯ ಕೊಟ್ಟರೆ, ಅರ್ಧದಷ್ಟು ಸಮಸ್ಯೆ ಪರಿಹಾರವಾದಂತೆಯೇ.

ಅಂತರಂಗದಲ್ಲಾಗುವ ಭಾವನೆಗಳಿಗೆ, ತುಮುಲಗಳಿಗೆ ಭಾಷೆಯ ರೂಪ ಕೊಡುವುದನ್ನು ಮಕ್ಕಳಿಗೆ ನಾವೇ ಕಲಿಸಬೇಕು.

ನಮ್ಮ ಅಂತರಂಗವನ್ನು ಬಚ್ಚಿಟ್ಟು ಕೊಂಡಷ್ಟು ನಮ್ಮ ಆತಂಕ ಹೆಚ್ಚಾಗುತ್ತದೆ. ಏನಾಗುತ್ತದೆಯೆಂದು ಅರ್ಥವಾಗುವುದಿಲ್ಲ. ಬೇರೆಯವರು ನಮ್ಮನ್ನು ಅರ್ಥಮಾಡಿ ಕೊಳ್ಳಲಿಲ್ಲವೆಂಬ ಭಾವನೆ ಮನಸ್ಸಿನಲ್ಲಿ ಬೇರೂರುತ್ತದೆ. ಆದ್ದರಿಂದ ನಾವು ಭಾವನೆಗಳನ್ನು ಹಂಚಿಕೊಂಡರೆ, ಮನಸ್ಸು ಹಗುರವಾಗುತ್ತದೆ ಎನ್ನುವ ತಿಳುವಳಿಕೆ ಯನ್ನು ಮಕ್ಕಳಿಗೆ ಕೊಡಬೇಕು.

ಪೋಷಕರು ತಮ್ಮ ಯೌವ್ವನದ ದಿನಗಳನ್ನು ಹಂಚಿಕೊಂಡು ಹದಿಹರೆಯ ದವರಿಗೆ ಮಾದರಿಯಾಗಬಹುದು. ಆಗ ಮಕ್ಕಳೂ ಕೂಡ ಈ ರೀತಿಯಾಗಿ ಹಂಚಿಕೊಳ್ಳುವುದನ್ನು ಕಲಿಯುತ್ತಾರೆ. ಈ ಭಾವನೆಗಳನ್ನು ಹಂಚಿಕೊಳ್ಳುವುದರಿಂದ ಖಂಡಿತ ಆತಂಕ ಕಡಿಮೆಯಾಗುತ್ತದೆ.

ಯುವಕ, ಯುವತಿಯರಲ್ಲಿ ಪರಸ್ಪರ ಆಕರ್ಷಣೆ ಉಂಟಾಗುತ್ತದೆ. ಪರಸ್ಪರರ ಗೆಳೆತನ ಬಯಸುತ್ತಾರೆ. ಮಾತುಕತೆ, ಒಟ್ಟಿಗೆ ಆಟ, ಓದುತ್ತಾ ಕಾಲ ಕಳೆಯುವ ಮನಸ್ಸಾಗುವುದು, ಎಲ್ಲವೂ ಸಹಜ. ಗೆಳೆಯ ಗೆಳತಿ ಒಟ್ಟಾಗಿ ಕಲೆಯುವುದು ಸಾಮಾನ್ಯವಾಗಿ ಆಟ ಪಾಠದ ಬಗ್ಗೆ ಯಾಗಿಯೇ ಇರುತ್ತದೆ. ತಪ್ಪು ತಿಳಿಯುವ ಅಗತ್ಯವಿಲ್ಲ. ಯುವಕ ಯುವತಿ ಒಟ್ಟು ಸೇರಿದರೆ, ಲೈಂಗಿಕ ಸಂಪರ್ಕದಲ್ಲಿ ತೊಡಗಿದರೆ, ಪ್ರೀತಿ ಪ್ರೇಮ ಅಂತ ಮುಂದುವರಿದರೆ ಅನ್ನುವುದು ಪೋಷಕರ ಚಿಂತೆಯಾಗಿರುತ್ತದೆ. ಪೋಷಕರ ಆತಂಕ ಸರಿಯೇ. ಪೋಷಕರು, ತಮ್ಮ ಮಕ್ಕಳ ಬಗ್ಗೆ ಹೆಚ್ಚು ತಿಳಿದುಕೊಂಡರೆ, ಈ

ಆತಂಕವನ್ನು ಕಡಿಮೆ ಮಾಡಿಕೊಳ್ಳ ಬಹುದು. ಅವರ ಗೆಳೆಯ–ಗೆಳತಿಯರ ಬಗ್ಗೆ ಹೇಳುವ ಮುಕ್ತ ಅವಕಾಶವನ್ನು ಮಕ್ಕಳಿಗೆ ಕೊಡಿ. ಆಗ ಅವರ ಗೆಳೆತನ ಯಾರ ಜೊತೆಯಿದೆ, ಗೆಳೆತನವಿದ್ದಲ್ಲಿ ಯಾವ ವಿಷಯಕ್ಕೆ ಅವರ ಗೆಳೆತನ ವಿದೆಯೆನ್ನುವುದು ತಿಳಿಯುತ್ತೀರಿ. ಅವರ ಗೆಳೆಯರ ಬಳಗದ ಬಗ್ಗೆ ನೀವು ತಿಳಿದುಕೊಂಡರೆ, ನಿಮಗೆ ಸಮಾಧಾನ ಆಗುತ್ತದೆ. ಸಂದೇಹವಿದ್ದರೆ, ನಿಮ್ಮ ಮಕ್ಕಳನ್ನು ವಿಚಾರಿಸುವ ಸಲಿಗೆ ಕೂಡ ನಿಮ್ಮಲ್ಲಿ ಇರುತ್ತದೆ. ಈ ಭಾವನಾತ್ಮಕ ಸಂಬಂಧ ನಿಮ್ಮ ಮತ್ತು ನಿಮ್ಮ ಹದಿಹರೆಯರ ಮಧ್ಯೆ ಕೆಲಸ ಮಾಡುವ ಕೀಲಿ ಕೈ. ಮನೆಯ ಕೀ ಯಷ್ಟೇ ಜೋಪಾನದಿಂದ ಕಾಪಾಡಿಕೊಳ್ಳಿ!

ತಮ್ಮ ಗೆಳೆಯ ಗೆಳತಿಯರ ಬಗ್ಗೆಯೇ ಹೆಚ್ಚು ಹೆಚ್ಚು ಆಸಕ್ತರಾಗುತ್ತಿದ್ದಾರೆ ಅಂತ ನಿಮಗನಿಸಿದರೆ, ನೀವು ಅವರನ್ನು ಪ್ರಶ್ನಿಸಬಹುದು. ಈ ಸಂಬಂಧದಿಂದ ಓದಿಗೆ ತೊಂದರೆಯಾಗುವುದಿಲ್ಲವೇ, ಓದು ಮುಖ್ಯವಲ್ಲವೇ ಇದರ ಬಗ್ಗೆ ಆಲೋಚನೆ ಮಾಡಿ ಎಂದು ಹೇಳಿದರೆ, ಅವರು ನಿಮ್ಮ ಮಾತಿನ ಅರ್ಥ ತಿಳಿದುಕೊಳ್ಳುತ್ತಾರೆ.

ಶಾಲಾ–ಕಾಲೇಜು, ಸ್ನೇಹಿತರ ಮನೆಗೆ ಹೋಗುವುದಲ್ಲದೆ, ಅವರು ಮನೆಯಿಂದ ಹೊರಹೋಗುವ ಮಾಹಿತಿಯನ್ನು ತಿಳಿಸುವುದು ಅಗತ್ಯ.

ಈ ಹಿಂದೆ ತಿಳಿಸಿದಂತೆ, ಪೋಷ ಕರು ಮಕ್ಕಳೊಂದಿಗೆ ಸಲಿಗೆಯಿಂದಿದ್ದರೆ, ಮಕ್ಕಳು ಪ್ರೀತಿ ಪ್ರೇಮದ ಬಗ್ಗೆ ಪೋಷಕರೊಂದಿಗೆ ಹಂಚಿಕೊಳ್ಳುತ್ತಾರೆ. ಆಗ ಪಾಲಕರು ಅವರಿಗೆ ಪ್ರೀತಿ, ಪ್ರೀತಿಯ ಸಂಬಂಧಗಳ ಸೂಕ್ಷ್ಮತೆಯನ್ನು ಪರಿಚಯ ಮಾಡಿಕೊಡಬಹುದು.

ಇಲ್ಲಿ ಒಂದು ಕಾಲ್ಪನಿಕ ಉದಾಹರಣೆ ಸೂಕ್ತ ಅನಿಸುತ್ತದೆ.

ತಾನು ಪ್ರೀತಿಸಿದವನಿಗೆ ಬೇರೊಬ್ಬ ರೊಡನೆ ಮದುವೆ ನಿಶ್ಚಯವಾಗಿದೆ, ಎನ್ನುವ ಸುದ್ದಿ ಸಿಕ್ಕಿದೆ, ನನಗೊಂದು ದೊಡ್ಡ ಆಘಾತವೇ ಆಗಿದೆ, ಇವತ್ತು ನನಗೊಂದು ಕೆಲಸದ ಟೆಸ್ಟ್ ಹಾಗೂ ಸಂದರ್ಶನವಿದೆ, ಏನು ಮಾಡಲಿ ಅಂತ ಗೊತ್ತಾಗ್ತಿಲ್ಲ ಎಂದು ಓರ್ವ ವಿದ್ಯಾರ್ಥಿನಿಯ ಫೋನ್ ನನಗೆ ಬೆಳಗಿನ ಜಾವದಲ್ಲಿ! ಹುಡುಗಿಗೆ ನಾನಿಷ್ಟೆ ಹೇಳಿದೆ. ನಿನಗೀಗ ಎರಡು ಸಮಸ್ಯೆಗಳಿವೆ, ಒಂದು ಪ್ರೀತಿಯ ಸಂಬಂಧ ಕೈಬಿಡ್ತಾಯಿದೆ, ಇನ್ನೊಂದು ಬೆಳಿಗ್ಗೆಯಿರುವ ಟೆಸ್ಟ್ ಮತ್ತು ಇಂಟರವ್ಯೂ. ಅವಳಿಗೆ ಕೆಲಸದ ಆಯ್ಕೆಯೂ ಅಷ್ಟೇ ಮುಖ್ಯವಾಗಿತ್ತು. ಟೆಸ್ಟ್ ಬರೆಯುವುದು ಮೊದಲನೆ ಸಮಸ್ಯೆ, ಸಂಬಂಧದ ಬಗ್ಗೆ ಮಧ್ಯಾಹ್ನ ಮಾತ ನಾಡೋಣವಾ ಅಂತ ಕೇಳಿದಾಗ, ಅರೆಮನಸ್ಸಿಂದ ಒಪ್ಪಿದಳು. ಟೆಸ್ಟ್ ಆದ ಕೂಡಲೇ, ಫೋನಿನಲ್ಲಿ ಮಾತನಾಡಿದಳು. ಅವಳಿಗೆ ದೂರದ ಸಂಬಂಧಿ ಯುವಕ ನೊಂದಿಗೆ ಫೋನ್ ಸಂಭಾಷಣೆಯಲ್ಲಿ, ಹರಟೆಯಿಂದ ಶುರುವಾಗಿದ್ದು, ಪ್ರೀತಿಯ ಸಂಬಂಧವರೆಗೆ ಮುಂದುವರಿದಿತ್ತು. ಆ ಪ್ರೀತಿ ಫೋನಿನಲ್ಲಿಯೇ ಮುಂದುವರಿದಿತ್ತು. ಮನೇಲಿ ಹೇಳಿದರೆ, ಯಾಕಷ್ಟು ತಲೆ ಬಿಸಿಯೆಂದಿದ್ದರು. ಅವಳ ಒಳ ಮನಸ್ಸಿನಲ್ಲಿ ಇದ್ದುದೇನೆಂದರೆ, ತನ್ನ ಹೆತ್ತವರು ನನ್ನ ಇಚ್ಛೆಗೆ ವಿರುದ್ಧವಾಗಿ ಮದುವೆಯ ಸಂಬಂಧ ಬೆಳೆಸಿದರೆ ಏನು ಮಾಡುವು ದೆಂಬ ಚಿಂತೆಯಿತ್ತು. ಪೋಷಕರೊಂದಿಗೆ ಮುಕ್ತವಾಗಿ ಹೇಳಲು ಸಾಧ್ಯವಾಗಿರಲಿಲ್ಲ. ಇವಳು ತನ್ನದೇ ಆದ ಕನಸು ಕಂಡಿದ್ದಳು. ಕನಸು ಸಾಕಾರವಾಗುವ ಮೊದಲು ಕೈ ತಪ್ಪುತ್ತದೆಯೆಂದು ಆತಂಕ ಮತ್ತು ನೋವು ಅವಳಿಗಾಗಿತ್ತು. ಹುಡುಗನ ಕಡೆಯವರು, ಇವರು ತಮಗಿಂತ ಅನುಕೂಲಸ್ಥರೆಂದು, ಬೇರೆ ಸಂಬಂಧ ನೋಡಿದರು. ಅಂದರೆ ಹುಡುಗನಿಗೆ ಸ್ಪಷ್ಟತೆಯಿರಲಿಲ್ಲ. ಅವನಲ್ಲಿ ಸ್ವಲ್ಪ ಅಳುಕು ಇತ್ತು. ಈ ಎಲ್ಲಾ ಸೂಕ್ಷ್ಮ ವಿಷಯಗಳು ನಮ್ಮ ಆಪ್ತ ಸಮಾ ಲೋಚನೆಯಲ್ಲಿ ಹೊರಬಂದವು. ಅವಳಿಗೆ ಎಲ್ಲಾ ಅರ್ಥವಾಯಿತು, ಸಮಾಧಾನವೂ ಆಯಿತು.

ಪ್ರೀತಿಯ ಸಂಬಂಧದಲ್ಲಿ ಮುಖ್ಯ ವಾಗಿ ಮೂರು ಅಂಶಗಳು. ಅವು ಪ್ರಯೋಜನ, ಪ್ರಯತ್ನ ಮತ್ತು ಮನಸ್ಸಿಗೆ ನೋವಾಗುವುದು.

ಇವನ್ನು ನಮ್ಮ ಉದಾಹರಣೆ ಯಲ್ಲಿಯೇ ನೋಡೋಣ.

ಇಬ್ಬರೂ ತಮ್ಮ ಪ್ರೀತಿಯ ಸಂಬಂಧ ದಲ್ಲಿ, ಫೋನಿನಲ್ಲಿ ಮಾತನಾಡುತ್ತಾ, ತಮ್ಮ ಸುಖ ದುಃಖ, ಕನಸ್ಸುಗಳನ್ನು ಹಂಚಿ ಕೊಳ್ಳುತ್ತಾ ಖುಷಿಯಿಂದಿದ್ದರು. ಅಂದರೆ ಇಬ್ಬರಿಗೂ ಪ್ರಯೋಜನವಾಗಿತ್ತು. ಅದಕ್ಕಾಗಿ ಸಾಕಷ್ಟು ಪ್ರಯತ್ನ ಮಾಡಿ, ಆಗಾಗ್ಗೆ ಫೋನಿನಲ್ಲಿ ಮಾತನಾಡಿ, ಕುಟುಂಬದವರಲ್ಲಿ ಸಹ ಚರ್ಚೆ ಮಾಡಿದ್ದರು. ಅನುಕೂಲಸ್ಥರು ಎಂಬ ವಿಷಯದಲ್ಲಿ, ಸ್ಪಷ್ಟತೆ ಇರಲಿಲ್ಲ, ಸ್ವಲ್ಪ ಅಳುಕಿತ್ತು. ಹುಡುಗನಿಗೆ ಮನಸ್ಸಿದ್ದರೂ ತನ್ನ ಮನೆಯವರನ್ನು ಈ ವಿಷಯದಲ್ಲಿ ಒಪ್ಪಿಸಲು ಸಾಧ್ಯವಾಗಲಿಲ್ಲ. ಹುಡುಗಿಗೆ ಸಂಬಂಧದಲ್ಲಿ ಸ್ಪಷ್ಟತೆ, ಬದ್ಧತೆ ಇಲ್ಲದಿದ್ದರೆ ಏನಾಗಬಹುದೆಂಬ ಕಲ್ಪನೆಯಿರಲಿಲ್ಲ. ಇದರಿಂದ ಸಂಬಂಧ ಮುರಿದಾಗ ದುಃಖವಾಯಿತು.

ಹದಿಹರೆಯದವರನ್ನು ನಿಮ್ಮ ಬಳಿ ಕುಳ್ಳಿರಿಸಿ, ಪ್ರೀತಿ ಸಂಬಂಧಗಳ ಬಗ್ಗೆ ನಿಧಾನವಾಗಿ ಚರ್ಚೆಗೆ ಅವಕಾಶ ಮಾಡಿ ಕೊಡಿ. ಖಂಡಿತ ವಿಚಾರ ಮಾಡುತ್ತಾರೆ, ಅರ್ಥವಾಗುತ್ತದೆ.

ಮಕ್ಕಳು ದೊಡ್ಡವರಾಗುವ ಒಂದು ಹಂತ. ಈ ಹದಿಹರೆಯ ಒಂದು ಸಂಕ್ರಮಣ ಕಾಲ ಅಂತ ಹೇಳಬಹುದು. ಹದಿಹರೆಯದವರು ತಮ್ಮ ದೇಹದಲ್ಲಿ ಆಗುವ ತ್ವರಿತ ಬದಲಾವಣೆಗಳನ್ನು ಗಮನಿಸುತ್ತಾರೆ, ಈ ಬದಲಾವಣೆಗಳನ್ನು ನೋಡಿ ಜನರು ಟೀಕೆ ಮಾಡುತ್ತಾರೆ, ಇವು ಮಕ್ಕಳಿಗೆ ಹಿತವಾಗುವುದಿಲ್ಲ, ಹಾರ್ಮೋನುಗಳು ಬಿಡುಗಡೆಯಾಗು ತ್ತವೆ, ಭಾವನೆಗಳಲ್ಲಿ ಏರುಪೇರು ಆಗುತ್ತೆ. ಯೋಚಿಸುವ ಸಾಮರ್ಥ್ಯವಿರುತ್ತದೆ ಆದರೆ ಪ್ರಬುದ್ಧತೆ ಬಂದಿರುವುದಿಲ್ಲ. ಸಮಾಜ ವೆಂದರೇನು, ಆ ಸಮಾಜದಲ್ಲಿ ತಮ್ಮ ಪಾತ್ರವೇನು, ಮೌಲ್ಯಗಳೇನು, ಯಾವ ವಿದ್ಯೆ ಕಲಿಯಬೇಕು, ಯಾವ ಉದ್ಯೋಗವನ್ನು ಆರಿಸಿಕೊಳ್ಳಬೇಕು, ತಾನು ಗಂಡು ಅಥವಾ ಹೆಣ್ಣು, ಇದರಲ್ಲಿ ತನ್ನ ಪಾತ್ರವೇನು ಇವೆಲ್ಲವನ್ನು ವಿಚಾರ ಮಾಡ್ತಾರೆ. ಮನಶ್ಶಾಸ್ತ್ರಜ್ಞ ಎರಿಕ್ಸನ್ ಪ್ರಕಾರ, ಯುವ ಜನಾಂಗದಲ್ಲಿ ಪ್ರಜ್ಞಾಪೂರ್ವಕವಾಗಿ ಈ ವಿಷಯಗಳ ಬಗ್ಗೆ ಒಂದು ತೀರ್ಮಾನಕ್ಕೆ **(58ನೇ ಪುಟಕ್ಕೆ)**

WITH BEST COMPLIMENTS FROM

916 B.I.S.

National
Gold & Diamond

GOLD | DIAMOND | BIRTH STONE | SILVER

EXPERIENCE FINEST JEWELLERY

SHOWROOM:
Azad Road, THIRTHAHALLI
Shimogga Dist., Karnataka, India
Ph: (08181) 220717, 220750
nationalgoldpalace@gmail.com

WITH BEST COMPLIMENTS FROM

NEW ZAINUL
FOOTWEAR
MAIN ROAD, SORABA, SHIMOGA DIST.

Prop. R.A. ZAINUL
Mob: 8050955987

ಜನರೇ, ನೀವು ಏನನ್ನು ಮಾಡುತ್ತಲಿದ್ದರೂ ಆ ವೇಳೆ ನಾವು ನಿಮ್ಮನ್ನು ನೋಡುತ್ತಿರುತ್ತೇವೆ.
[ಪವಿತ್ರ ಕುರ್‌ಆನ್: 10: 61]

With best compliments from

TARGET
SECURITY & DETECTIVE
DAVANGERE

With best compliments from

N.M. Ali : 9341623811
Zeeshan : 9742021915

NAKWA ENTERPRISES

WHOLESALE DEALERS AND MANUFACTURERS OF : NET TWIN HOOKS, FISHING LINES,
ALL KINDS OF FISHING MATERIALS, COIR ROPES, NYLON ROPE, COTTON ROPES,
AGRICULTURAL & PACKING REQUIREMENTS, DISPOSABLE GOODS AND CLEANING ARTICLES.

M.S. TOWER, K.R. PURAM, SHIVAMOGGA

ಚಿಸ್ಬುದುರಿ

ಕಾದಂಬರಿ

ಭಾಗ – 2

■ ಆಯಿಶತ್ ಸಫ್ವಾನ ಯು. ■

ಚಹಾ ತಿಂಡಿಯನ್ನು ತಂದಿತ್ತ ಅಮ್ಮನನ್ನು ಕಂಡು ಆಶ್ಚರ್ಯವಾಯಿತು. ಯಾವಾಗಲೂ ಹೀಗೆ ತಂದಿತ್ತರೆ ಒಳ್ಳೆಯದಿತ್ತು. ಸುಸ್ತಾಗಿ ಬಂದಿದ್ದರೂ ಚುರುಗುಡುತ್ತಿರುವ ಹೊಟ್ಟೆಯನ್ನು ತಣಿಸಲು ತಾನೇ ಏನಾದರೂ ಕಾಫಿನೋ ಚಹಾನೋ ಮಾಡಿ ಕುಡಿಯಬೇಕಿತ್ತು. ಜೊತೆಗೆ ತಂಗಿಯರಿಗೂ ಮಾಡಿಟ್ಟಿರಬೇಕಿತ್ತು.

"ಈ ಏನಮ್ಮ ಯೋಚಿಸ್ತಿದ್ದೀಯಾ...? ಈ ವಯಸ್ಸಿನಲ್ಲಿ ಸರಿಯಾಗಿ ತಿಂದುಣ್ಣದಿದ್ದರೆ ಮುಪ್ಪಿನಲ್ಲಿ ಗಂಟು ಮೂಳೆಗಳಿಗೆ ಬೇಗ ಕಾಯಿಲೆ ಬಂದ್ಬಿಡುತ್ತೆ."

ಇಂತಹ ಕಾಳಜಿ ಇಷ್ಟರವರೆಗೆ ಎಲ್ಲಿತ್ತು? ಮನ ಮಂತ್ರಿಸತೊಡಗಿತ್ತು. ಅಮ್ಮ ಅಲ್ಲಿಂದ ಸರಿದುಹೋದದ್ದೇ... ತಂಗಿಯರು ಮುಸಿ ಮುಸಿ ನಗುತ್ತಾ ಬಳಿ ಬಂದಿದ್ದರು.

"ಬಲಿಪ್ರಾಣಿಯನ್ನು ಬಲಿಪೀಠಕ್ಕೆ ಕೊಂಡೊಯ್ಯುವ ಮೊದಲು ಪ್ರೀತಿ ಬರುತ್ತಾ ಇದೆ ನೋಡು" ನದೀಫಳ ಮನ ಬಿಚ್ಚಿದ ಮಾತು ಹೊರ ಬಂದದ್ದೇ ನೌಶಿನ್ ಕಣ್ಣಿನಲ್ಲೇ ಗದರಿ ಸುಮ್ಮನಾಗಿಸಿದಳು. ಅಕ್ಕ ಪುನಃ ಅಲ್ಲಿ ಅತ್ತುಬಿಡುವಳೋ ಎನ್ನುವ ಭಯ ಆಕೆಗೆ.

ತಂಗಿಯರ ಮಾತಿನಲ್ಲೂ ಹುರುಳಿಲ್ಲದಿಲ್ಲ. ಇವತ್ತಿನಂತೆ ಎಂದೂ ಅಮ್ಮ ಉಪಚರಿಸಿರಲಿಲ್ಲ. ಮನೆಗೆ ಬಂದು ತಲುಪಿದ ತಕ್ಷಣ ಕೆಲಸದ ರಾಶಿಯೇ ಕಾಯ್ದುಕೊಂಡಿರುತ್ತಿತ್ತು. ಒಗೆಯುವ ಬಟ್ಟೆಗಳ ರಾಶಿ ಒಂದೆಡೆಯಾದರೆ ತೊಳೆಯದೆ ಬಿದ್ದಿರುವ ಪಾತ್ರೆಗಳು ಕೈಬೀಸಿ ಕರೆಯುವಂತಿರುತ್ತಿತ್ತು. ತಂಗಿಯರ ನೆರವಿನೊಂದಿಗೆ ಇದನ್ನೆಲ್ಲಾ ಮುಗಿಸುವ ಹೊತ್ತಿಗೆ ಹೈರಾಣಾಗಿ ಬಿಡುತ್ತಿತ್ತು.

"ಅಕ್ಕಾ... ಇವತ್ತು ನೀನು ಚೆನ್ನಾಗಿ ಓದ್ಕೋ... ಅಡುಗೆ ಕೆಲಸ ಅಮ್ಮನೇ ಮಾಡಿ ಮುಗಿಸಿದ್ದಾರೆ. ಇಲ್ಲದಿದ್ದರೆ ನಿನಗೆಷ್ಟು ಓದಲು ಬರೆಯಲು ಡೈಗ್ರಾಂ ಮಾಡಲು ಇದ್ದರೂ ಅಡುಗೆ ಕೆಲಸ ನಿನ್ನ ಪಾಲಿಗಿರುತ್ತಿತ್ತಲ್ಲ. ಇವತ್ತು ಅದ್ಯಾವು ದರ ಜಂಜಾಟವೂ ಇಲ್ಲ. ಹಾಯಾಗಿ ಓದ್ಕೋ...!"

ತಂಗಿಯರ ಮಾತನ್ನು ಅಮ್ಮ ಎಲ್ಲಿ ಕೇಳಿಸ್ಕೊಂಡು ನೊಂದ್ಕೋತಾರೋ ಎಂಬ ಭಯವಾಯ್ತು ನಾಫಿಯಾಳಿಗೆ, ತಂಗಿಯರು ಹೇಳಿದ್ದುದರಲ್ಲಿಯೂ ಉತ್ಪ್ರೇಕ್ಷೆ ಇಲ್ಲ. ಸದಾ ಅನಾರೋಗ್ಯದ ನೆಪವೊಡ್ಡಿ ಹೊರ ಳಾಡುತ್ತಿದ್ದವರು ಇದ್ದಕ್ಕಿದ್ದಂತೆ ಆರೋಗ್ಯ ವಂತರಾದದ್ದೇಗೆ? ತನಗೆ ಮದುವೆಯಾಗದ ಚಿಂತೆ ಅವರನ್ನು ಬಾಧಿಸುತ್ತಿತ್ತೋ? ಇಷ್ಟಕ್ಕೂ ತನಗೇನು ಮಹಾ ವಯಸ್ಸಾ ದದ್ದು? ಹದಿನಾರು ಪೂರ್ತಿಗೊಂಡು ನಾಲ್ಕು ತಿಂಗಳು ಕಳೆಯಿತಷ್ಟೆ... ಅವಸರ ಪಟ್ಟುಕೊಂಡು ಮದುವೆ ಮಾಡಿಸು ವಂತಹ ಪ್ರಮೇಯ ಬಂದೊದಗಿತೇ... ಈಗ ತನ್ನ ಗೆಳತಿಯರಿಗೆಲ್ಲ ತಿಳಿದರೆ ಏನೆಂದುಕೊಳ್ಳಬಹುದು?

"ಅಕ್ಕಾ... ಏನು ಯೋಚಿಸ್ತಿದ್ದೀಯಾ? ನಿನ್ನ ಮೌನ ನಿನ್ನ ಭವಿಷ್ಯವನ್ನು ನುಂಗಿ ಬಿಡುವಂತಾಗಬಾರದು. ಇನ್ನಾದರೂ ನೀನು ಕೋಲೆಬಸವನಂತೆ ತಲೆಯಾಡಿಸು ವುದನ್ನು ಬಿಟ್ಟುಬಿಡು. ಭುಜವನ್ನು ಒತ್ತುತ್ತಾ ಎಚ್ಚರಿಕೆ ನೀಡಿದಂತೆ ಮಾತಾಡಿ ಹೊರನಡೆದ ತಂಗಿಯರನ್ನೇ ದಿಟ್ಟಿಸಿದಳು."

ಅವರಷ್ಟು ಧೈರ್ಯದಿಂದ ಮಾತಾ ಡಲು ತನಗೇಕೆ ಸಾಧ್ಯವಾಗುತ್ತಿಲ್ಲ? ಒಂದೇ ತಾಯಿಯ ಉದರದಲ್ಲಿ ಹುಟ್ಟಿದ ಮಕ್ಕಳಾದರೂ ತಮ್ಮಲ್ಲಿ ಸಾಮ್ಯತೆಯ ಕೊರತೆ ಬಹಳಷ್ಟಿದೆ.

"ನಾಫಿಯ ನಿನ್ನ ಮಾವ ಒಂದು ಗಂಡು ನೋಡಿದ್ದಾನಂತೆ. ನಾಳೆ ಕರ್ಕೊಂಡು ಬಾರ್ತಾನೆಂತ ಹೇಳಿದ್ದಾನೆ. ನೀನು ಕಾಲೇಜು ಗಿಲೇಜು ಎಂದು ಹೊರಗಡಿಯಿಡಬೇಡ" ಅಮ್ಮ ಆಜ್ಞೆ ಹೊರಡಿಸುವಂತೆ ದಡಬಡನೆ ನುಡಿದು ಹೊರನಡೆದರು.

ತನ್ನ ಸಲಹೆ ಕೇಳುವುದಾಗಲೀ ಒಪ್ಪಿಗೆ ಪಡೆಯುವುದಾಗಲೀ ಒಂದೂ ಮಾಡದೆ ಬರೀ ಆಜ್ಞೆ ಮಾಡಿ ಹೊರಟ ಅಮ್ಮನ ಬಗ್ಗೆ ಮನಸ್ಸಿಗೆ ಒಂಥರಾ ಅನ್ನಿಸಿದರೂ ಇರಲಿ, ಎಷ್ಟೆಂದರೂ ಅಮ್ಮ ತಾನೇ ಎಂದು ತನ್ನನ್ನು ತಾನೇ ಸಮಾಧಾನ ಗೊಳಿಸುವ ಪ್ರಯತ್ನ ನಡೆಸಿದಳಾದರೂ... ಅಮ್ಮನಿಗೆ ಮಕ್ಕಳ ಜೊತೆ ಹೇಗೆ ಮಾತಾಡಬೇಕು ಎಂಬುದು ತಿಳಿಯಲ್ಲ ಎಂದು ಮನದ ಒಂದು ಮೂಲೆ ಚುಚ್ಚತೊಡಗಿತು.

ಅಮ್ಮ ಹೇಳುವ ಮಾತನ್ನು ಪ್ರೀತಿ ಯಿಂದಲೇ ಹೇಳಿ ಒಂದಾ ತನ್ನ ಒಪ್ಪಿಗೆಯಾ ಸಲಹೆಯಾ ಏನಾದರೊಂದು ಕೇಳಬಹುದಿತ್ತೆಂದು ಮೊದಲ ಬಾರಿಗೆ ಅಮ್ಮನ ಬಗ್ಗೆ ಅಸಹನೆ ಮೂಡತೊಡಗಿತು.

ಅಲ್ಲೇ ಠಳಾಯಿಸುತ್ತಿರುವ ತಂಗಿಯರು ಪುನಃ ಬಂದು ಅಕ್ಕನನ್ನು ತರಾಟೆಗೆ ತೆಗೆದುಕೊಳ್ಳತೊಡಗಿದರು. ತನಗೀಗ ಮದುವೆ ಬೇಡವೆಂದು ಅಮ್ಮನ ಬಳಿ ಹೇಳಿ ಬಿಡಬಹುದಿತ್ತಲ್ಲ. ಅದು ಬಿಟ್ಟು ಏನೋ ಯೋಚಿಸಿ ಯೋಚಿಸಿ ಹೈರಾ ಣಾಗುವುದು ಯಾಕೆ? ಹೋಗು ಈಗಲೇ ಹೋಗು. ಹೇಳಿಯೇ ಬಿಡು ಆಗುವು ದಿಲ್ಲವೆಂದು, ನಿನ್ನ ಹಿಂದೆ ನಾವೂ ಇದ್ದು ದನಿಗೂಡಿಸುತ್ತೇವೆ.

ಬಲವಂತದಿಂದ ಆಕೆಯ ರಟ್ಟೆ ಹಿಡಿದು ಎಬ್ಬಿಸಹೊರಟಾಗ ನಾಫಿಯ ತಾನೇ ಎದ್ದಳು. ಕಾಲುಗಳು ನಿಧಾನಗತಿ ಯಲ್ಲಿ ಅಡುಗೆಕೋಣೆ ಕಡೆಗೆ ಹೊರಟವು.

"ಅಮ್ಮಾ..." ನಡುಗುವ ಧ್ವನಿಯನ್ನು ಸ್ಥಿಮಿತಕ್ಕೆ ತಂದುಕೊಳ್ಳಲು ಪ್ರಯತ್ನಿಸುತ್ತಾ... "ನನಗೀಗಲೇ ಮದುವೆ ಬೇಡಮ್ಮ."

ಏನೋ ಕೆಲಸದಲ್ಲಿದ್ದವರು ತಿರುಗಿ "ಮತ್ತಿನ್ಯಾವಾಗ ಮುದುಕಿಯಾದ ಮೇಲೆ ಮದುವೆಯಾಗ್ತಿಯಾ? ನಿನ್ನ ವಯಸ್ಸಿನಲ್ಲಿ ನಾನು ಎರಡು ಮಕ್ಕಳ ತಾಯಿಯಾಗಿದ್ದೆ."

"ನಿಮ್ಮ ಕಾಲ ಇದಲ್ಲವಲ್ಲ" ನೌಶಿನ್ ನಡುವೆ ಬಾಯಿ ಹಾಕಿದಳು. ಸಾಕು ಸುಮ್ನಿರೇ ತಲೆಹರಟೆ. ಮಕ್ಕಳಿಗೆ ಯಾವ ಯಾವ ಕಾಲಕ್ಕೆ ಮದುವೆ ಮಾಡಬೇಕು ಎಂದು ನಮಗೆ ಚೆನ್ನಾಗಿ ಗೊತ್ತು."

"ಬರೀ ಅಷ್ಟು ಗೊತ್ತಿದ್ದರೆ ಸಾಲದು, ಎಲ್ಲಾನೂ ಗೊತ್ತಿರ್ಲೇಕು" ನದೀಫಾಳ ಮಾತು ಅವರನ್ನು ಕೆರಳಿಸಿತು.

"ಏನು ನನಗೆ ಬುದ್ಧಿ ಹೇಳಲು ಬರ್ತೀಯಾ? ಆರು ಹೆತ್ತವಳಿಗೆ ಮೂರು ಹೆತ್ತವಳು ಕಲಿಸಿದಳಂತೆ" ವ್ಯಂಗ್ಯ ಬೆರೆತ ಧ್ವನಿಯಲ್ಲಂದವರನ್ನು ನೌಶಿನ್ ಪಟ್ಟುಬಿಡದೆ ನಮ್ಮನ್ನು ಹೆತ್ತುಬಿಟ್ಟ ಮಾತ್ರಕ್ಕೆ ಎಲ್ಲಾ ನೀವೆಂದಂತೆ ಆಗ್ಬೇಕಾ?"

"ಏನೇ... ನನಗೇ ಎದುರು ವಾದಿ ಸ್ತೀಯಾ?" ಕೈಯಲ್ಲಿ ಸೌಟು ಹಿಡಿದೇ ಬಳಿ ಬಂದವರಿಂದ ತಪ್ಪಿಸಿಕೊಳ್ಳಲೆಂಬಂತೆ ನೌಶಿನ್ ಜಿಗಿದಳು.

ಅವಳು ತಪ್ಪಿಸಿಕೊಂಡಿದ್ದರಿಂದ ಅವರ ರೋಷ ಮತ್ತಷ್ಟು ಹೆಚ್ಚಾಗಿ ಅದೇ ಕೋಪದಿಂದ ನದೀಫಳ ಬೆನ್ನಿಗೆರಡು ಬಾರಿಸಿದರು. ಅವರ ದಿಢೀರ್ ಆಕ್ರ ಮಣದಿಂದ ತತ್ತರಿಸಿದ ನದೀಫ ನೋವು ತಾಳಲಾರದೆ ಜೋರಾಗಿ ಕಿರುಚತೊಡಗಿದಳು.

"ಅಮ್ಮಾ... ಅವಳಿಗ್ಯಾಕೆ ಹೊಡೆದು ಬಿಟ್ಟೆ?" ನಾಫಿಯಾ ಬೇಸರದಿಂದ ಕೇಳಿದ ವಳನ್ನೇ "ಸಾಕು ಸುಮ್ನಿರೇ.. ನೀನಾದರೂ ಎದುರುತ್ತರ ಕೊಡದೆ ಇದ್ದವಳು ಎಂದುಕೊಂಡಿದ್ದೆ. ಈಗ ನೀನೂ ಅವರಂತೆ ಆಗಿಬಿಟ್ಟಿದ್ದೀಯಾ" ಅಪವಾದವನ್ನು ಅವಳ ಮೇಲೆ ಹೊರಿಸಿ "ಎಲ್ಲಾ ಸೇರಿ ನನ್ನನ್ನು ಕೆಟ್ಟವಳನ್ನಾಗಿ ಮಾಡುವುದು. ನಾನ್ಯಾಕೆ ಇನ್ನೂ ಜೀವಂತವಾಗಿದ್ದೇನೋ... ಈ ಭೂಮಿ ಮೇಲೆ" ಅಲವತ್ತುಕೊಳ್ಳುತ್ತಲೇ ಕಣ್ಣು ಮೂಗು ಒರೆಸತೊಡಗಿದರು.

ತಾಯಿಯ ಅಳುವಿಗೆ ತಾನು ಕಾರಣನಾದೆನೇ... ಎಂತಹ ಪಾಪಿ ನಾನು ಖೇದಗೊಳ್ಳುತ್ತಲೇ ಅಮ್ಮನ ಬಳಿ ಸಾಗಿ ಅಮ್ಮಾ... ಏನಾದ್ಯಂತ ಹೀಗೆ ಅಳ್ತಿ ದ್ದೀಯಾ? ಎನ್ನುತ್ತಲೇ ಅಮ್ಮನ ಕೈಯನ್ನು ಹಿಡಿದುಕೊಂಡಳು.

ಅಮ್ಮ ಅಷ್ಟೇ ರಭಸದಿಂದ ಹಿಡಿದ ಕೈಯನ್ನು ಕಿತ್ತೆಸೆದು ಎಲ್ಲಾ ಆದದ್ದು ನಿನ್ನಿಂದ ಎನ್ನುವಾಗ ನಾಫಿಯಾಳ ಎದೆಗೆ ಭರ್ಜಿಯಿಂದ ತಿವಿದಂತಾಯಿತು.

ತಾನು ಆಡಿದ್ದು ಒಂದೇ ಒಂದು ಮಾತು. ಆದರೂ ತನ್ನ ಮೇಲಿನ ಆರೋಪ ಬೆಟ್ಟದಷ್ಟು ದುಃಖ ಉಮ್ಮಳಿಸಿ ಬರತೊಡಗಿತು.

"ಅವನು ಪಾಪ ತನ್ನ ಕಷ್ಟ

ನೋಡಲಾರದೆ ವರನನ್ನು ತೋರಿಸಿದ" ತಮ್ಮನ ಬಗ್ಗೆ ಕೊಂಡಾಡುವ ಮಾತಾಡಿದರು.

"ನಿಮ್ಮಪ್ಪನಂತೂ ಈ ಜನ್ಮದಲ್ಲಿ ನಿಮಗೆ ಮದುವೆ ಮಾಡಲಾರರು. ನಾನಾದರೂ ಹೆಣ್ಣು ಹೆಂಗಸು. ವರದಕ್ಷಿಣೆ, ವರೋಪ ಚಾರ ಎಂದು ಹೇಗೆ ಹೆಣಗಾಡಲಿ? ಅಷ್ಟೂ ಬುದ್ಧಿ ಬೇಡ್ವ ನಿಮಗೆ? ಎಲ್ಲಾ ಹೆಣ್ಣಾಗಿ ಹುಟ್ಟಿಬಿಟ್ಟಿದ್ದೀರಾ? ನನ್ನ ಹೊಟ್ಟೆ ಉರಿಸಲು. ಅವನೊಬ್ಬ ಗಂಡು ಸಂತಾನ ಕೊನೆಯವನಾಗಿ ಹುಟ್ಟಿದ್ದಾನೆ. ಹಿರಿಯ ನಾಗಿದ್ದರೆ ನಿಮ್ಮಗಳ ಮದುವೆಯನ್ನಾದರೂ ಮಾಡ್ತಿದ್ದ." ಆರರ ಹರೆಯದ ಪೋರನ ಬಗ್ಗೆ ಅಮ್ಮನ ನಿರ್ಧಾರಕ್ಕೆ ನಗು ಮೂಡಿತಾದರೂ... ಹೆಣ್ಣಾಗಿ ಹುಟ್ಟಿದ್ದು ತಮ್ಮದೇ ತಪ್ಪೆಂಬಂತೆ ಜರೆಯುತ್ತಿರುವ ಅಮ್ಮನ ಬಗ್ಗೆ ಅಸಹನೆ ಮೂಡತೊಡಗಿತು.

"ತುಸು ಪ್ರಾಯ ಜಾಸ್ತಿಯಾದರೇನಂತೆ? ಒಳ್ಳೆಯ ಮನೆತನ ಒಳ್ಳೆಯ ತರವಾಡ್ ಎಂದು ನುಡಿದಿದ್ದ. ಅಲ್ಲದೆ ಮಕ್ಕಳೆಲ್ಲಾ ವಿದೇಶದಲ್ಲಿರುವುದರಿಂದ ದುಡ್ಡಿಗೇನೂ ತಾಪತ್ರಯವಿರಲಾರದು. ಮುಂದೆ ತಂಗಿ ಯರ ಮದುವೆಗೂ ಸಹಾಯ ಮಾಡದೇ ಇರಲಾರರು. ಒಳ್ಳೆ ಸಂಬಂಧ ಎಂದು ನುಡಿದಿದ್ದರಿಂದಲೇ ನಾನು ಈ ಸಂಬಂಧಕ್ಕೆ ಒಪ್ಪಿಕೊಂಡಿದ್ದು."

ಅಮ್ಮನ ಬಾಯಿಯಿಂದ ಹೊರಬಿದ್ದ ಮಾತುಗಳನ್ನು ಅರಗಿಸಿಕೊಳ್ಳಲಾರದ ನಾಫಿಯ ಕೋಣೆ ಸೇರಿಕೊಂಡಳು. ತಂಗಿಯರೆಂದಂತೆ ಮುದುಕನಿಗೆ ತನ್ನನ್ನು ಕೊಡುವುದು ಖಾತ್ರಿಯಾದ ವಿಚಾರ. ಈ ಬಗ್ಗೆ ಅಮ್ಮನಿಗೆ ಎಳ್ಳಷ್ಟೂ ಖೇದವಾಗಲಿ ಕನಿಕರವಾಗಲಿ ಇಲ್ಲ. ಯೋಚಿಸುತ್ತಿದ್ದಂತೆ ಕಣ್ಣುಗಳಲ್ಲಿದ್ದ ಜಲಧಾರೆ ಕೆನ್ನೆಯನ್ನು ತೋಯಿಸತೊಡಗಿತು. ಹಾಸಿಗೆಯಲ್ಲಿ ಬೋರಲು ಬಿದ್ದು ತಲೆದಿಂಬಿಗೆ ಮುಖ ಹುದುಗಿಸಿ ನಾಳೆಯ ದಿನಚರಿಯನ್ನು ನೆನಪಿಸಿಕೊಂಡಳು.

ಐವತ್ತೈದು ಅರುವತ್ತರ ಆಸುಪಾಸಿನ ಮುದುಕರಾಗಿರಬಹುದು. ಅವರ ಜೊತೆ ತನ್ನ ಮದುವೆ, ನೆನೆಸಿಕೊಂಡಾಗಲೇ ಮೈಯಲ್ಲಿ ಚೇಳು ಹರಿದಾಡಿದಂತಾಗಿ ಅಸಹ್ಯವೆನಿಸಿತು. ತನಗೆ ಮದುವೆ

ನೆಪಮಾತ್ರಕ್ಕೆ ಕೈಯಲ್ಲಿ ಪುಸ್ತಕ ಹಿಡಿದಿದ್ದರೂ ಮನ ಮಾತ್ರ ಎತ್ತೆತ್ತಲೂ ಹರಿದಾಡಿ ಕೊನೆಗೆ ತನ್ನ ಭವಿಷ್ಯದೆಡೆಗೆ ಬೊಟ್ಟು ಮಾಡುವಂತೆ ಅನ್ನಿಸಿದಾಗ ಭಯಭೀತಗೊಳ್ಳುವಂತಾಗುತ್ತಿತ್ತು. ತನಗಿಂತ ಮೂರು ಪಟ್ಟು ಪ್ರಾಯ ವಾದ ವ್ಯಕ್ತಿಯೊಡನೆ ಕೂಡಿಕೊಳ್ಳುವ ದೃಶ್ಯ ಕಲ್ಪಿಸಿ ಕೊಂಡಾಗ ತನ್ನನ್ನು ಈ ಕ್ಷಣವೇ ಭೂಮಿ ಬಾಯ್ದೆರೆದು ನುಂಗಬಾರದೇ ಅನ್ನಿಸಿತು.

ಯಾಗದಿದ್ದರೂ ಪರವಾಗಿರಲಿಲ್ಲ. ಅಂತಹ ಮುದುಕನ ಜೊತೆಗಾತಿಯಾಗುವ ಅವ ಕಾಶವನ್ನು ತಪ್ಪಿಸು ದೇವಾ... ಮನ ಕಣ್ಣೀರಿಳಿಸುತ್ತಾ ಬೇಡತೊಡಗಿತು.

ಅಕ್ಕನಿಗೆ ಹೇಗೆ ಸಹಾಯ ಮಾಡು ವುದು, ಅವಳನ್ನು ಈ ಗಂಡಾಂತರದಿಂದ ಹೇಗೆ ಪಾರು ಮಾಡುವುದು ಎಂಬು ದನ್ನರಿಯದ ತಂಗಿಯರು ಚಿಂತಾಕ್ರಾಂತ ರಾಗಿ ಒಂದೆಡೆ ಕುಳಿತಿದ್ದರು.

ಈ ಮಕ್ಕಳಿಗೆ ನಮ್ಮ ಕಷ್ಟಗಳು ಅರ್ಥವಾಗುವುದೇ ಇಲ್ಲ. ಅವರಿಗೆ ಕುದುರೆ ಮೇಲೆ ಕೂರಲೇ ಆಸೆ. ಅವರ ಆಸೆಯನ್ನು ನಾನು ಹೇಗೆ ಪೂರೈಸಲಿ? ವಟಗುಟ್ಟುತ್ತಲೇ ಅಮ್ಮ ಅಡಿಗೆಮನೆಯ ಕೆಲಸದಲ್ಲಿ ನಿರತರಾದರು.

ಮನದಲ್ಲಿ ನೋವು ಹೆಪ್ಪುಗಟ್ಟಿದ್ದರೂ ಹೊರಗೆ ತೋರ್ಪಡಿಸದೇ ಸ್ನಾನ, ನಮಾಝ್, ಕುರ್‌ಆನ್ ಪಠಣ ಎಂಬ ದೈನಂದಿನ ಚಟುವಟಿಕೆಯನ್ನು ಯಥಾ ವತ್ತಾಗಿ ನಿರ್ವಹಿಸಿ ಅಧ್ಯಯನಕ್ಕೆಂದು ತನ್ನನ್ನು ತೊಡಗಿಸಿಕೊಳ್ಳಲು ಶ್ರಮಿಸಿ ದಳು. ಬೇಡ ಬೇಡವೆಂದರೂ ಸಂಜೆ ನಡೆದ ಘಟನೆಗಳೇ ಮನಃಪಟಲದಲ್ಲಿ ಮೂಡಿಬರತೊಡಗಿತು...

ತಾನು ಅಮ್ಮನ ಬಳಿ ಉಸುರಿದ್ದು ಒಂದೇ ಮಾತು. ನನಗೀಗ ಮದುವೆ ಬೇಡಮ್ಮ ಎಂದು. ಅದಕ್ಕಾಗಿ ಈ ರೀತಿ ಹರಿಹಾಯುವ ಪ್ರಮೇಯವಿತ್ತೇ? ತನಗೆ ಅನುನಯಿಸಿ ಹೇಳಬಹುದಿತ್ತು. ಇಷ್ಟಕ್ಕೂ ತನಗೆ ಅನುರೂಪನಾದ ವರನನ್ನು ತಿರಸ್ಕರಿಸಿದ್ದರೆ ತನ್ನನ್ನು ಜರೆಯಬಹುದಿತ್ತು.

ಮದುವೆ ಎಂಬುದು ಹೆಣ್ಣು ಗಂಡು ಪರಸ್ಪರ ಒಬ್ಬರನ್ನೊಬ್ಬರು ನೋಡಿದ ಮೇಲೆ ನಿಶ್ಚಯಿಸಿ ನಡೆಯುವ ಪ್ರಕ್ರಿಯೆ. ಇದರಲ್ಲಿ ಗಂಡಿನಷ್ಟೇ ಸ್ವಾತಂತ್ರ್ಯವನ್ನು ಹೆಣ್ಣಿಗೂ ಇಸ್ಲಾಂ ನೀಡಿದೆ. ಮುಂಗೈ ಮತ್ತು ಮುಖಭಾಗವನ್ನು ನೋಡಲು ಸಮ್ಮತಿ ಇತ್ತಿದೆ. ಆದರೆ ಇದರ ಪಾಲನೆ ಮಾತ್ರ ಎಲ್ಲೋ ಒಂದು ಕಡೆ ನಡೆಯುತ್ತದೇನೋ... ಉಳಿದಂತೆ ಗಂಡು ಹೇಗಿದ್ದರೂ ಪರ್ವಾಗಿಲ್ಲ. ಹೆಣ್ಣು ಮಾತ್ರ ಗಂಡಿನ ಮನಸ್ಸಿಗೆ ಒಪ್ಪುವಂತಹದ್ದೇ ಆಗಿರಬೇಕು. ಹೆಣ್ಣಿಗೆ ಎಲ್ಲೂ ಆಯ್ಕೆಯ ಸ್ವಾತಂತ್ಯವನ್ನೇ ನೀಡುವುದಿಲ್ಲ. ಹೆಣ್ಣಿಗೆ ಹೃದಯವಿದೆ, ಭಾವನೆಯಿದೆ ಎಂದು ಅರ್ಥ ಮಾಡುವವರೇ ವಿರಳ.

ನೆಪಮಾತ್ರಕ್ಕೆ ಕೈಯಲ್ಲಿ ಪುಸ್ತಕ ಹಿಡಿದಿದ್ದರೂ ಮನ ಮಾತ್ರ ಎತ್ತೆತ್ತಲೂ ಹರಿದಾಡಿ ಕೊನೆಗೆ ತನ್ನ ಭವಿಷ್ಯದೆಡೆಗೆ ಬೊಟ್ಟು ಮಾಡುವಂತೆ ಅನ್ನಿಸಿದಾಗ ಭಯಭೀತಗೊಳ್ಳುವಂತಾಗುತ್ತಿತ್ತು. ತನಗಿಂತ ಮೂರು ಪಟ್ಟು ಪ್ರಾಯವಾದ ವ್ಯಕ್ತಿಯೊಡನೆ ಕೂಡಿಕೊಳ್ಳುವ ದೃಶ್ಯ ಕಲ್ಪಿಸಿಕೊಂಡಾಗ ತನ್ನನ್ನು ಈ ಕ್ಷಣವೇ ಭೂಮಿ ಬಾಯ್ದೆರೆದು ನುಂಗಬಾರದೇ ಅನ್ನಿಸಿತು. ಒಡನೆ ತಾನು ಆ ತರ ಎಲ್ಲಾ ಯೋಚಿಸುವುದು ತಪ್ಪು, ಆತ್ಮಹತ್ಯೆ ಮಹಾಪಾಪವಾದುದರಿಂದ ಅದಕ್ಕೆ ಸಮನಾಗಿ ಯೋಚಿಸುವುದು ಕೂಡಾ ಪಾಪ. ಇನ್ನು ಮುಂದೆ ಇಂತಹ ಯೋಚನೆಗಳೆಲ್ಲಾ ಬಾರದಿರಲಿ ಎಂದು ಸೃಷ್ಟಿಕರ್ತನಲ್ಲಿ ಬೇಡತೊಡಗಿದಳು.

ತಂಗಿ ಬಂದು ಊಟಕ್ಕೆ ಕರೆದಾಗ ಮನಸ್ಸಿಲ್ಲದ ಮನಸ್ಸಿನಿಂದ ಎದ್ದಳು. ತನ್ನಿಂದಾಗಿ ಮನೆಮಂದಿ ಬೇಸರ

ಪಡುವುದು ಬೇಡವೆಂಬಂತೆ. ಊಟಕ್ಕೆ ಕುಳಿತಳಾದರೂ ಎರಡು ತುತ್ತು ಉಣ್ಣಲೇ ಪ್ರಯಾಸ ಪಡುವಂತಾಯಿತು. ಎರಡು ತುತ್ತನ್ನು ಹೇಗೋ ನೀರು ಕುಡಿದು ನುಂಗಿಕೊಂಡು ಊಟದ ಶಾಸ್ತ್ರ ಮುಗಿಸಿದಳು. ತನಗೆ ಹಸಿವು, ನೀರಡಿಕೆ ಎಲ್ಲಾ ಇಂಗಿಹೋಗಿರುವಂತೆ ಭಾಸವಾಗತೊಡಗಿತು.

ಓದುವ ಮನಸ್ಸಿಲ್ಲದೆ ನಿದ್ದೆಗೆ ಶರಣಾಗಬೇಕೆಂದು ಬಂದರೂ ಅಲ್ಲೂ ನಿದ್ದೆ ಮರೀಚಿಕೆಯಾಯ್ತು. ಇಲ್ಲದಿದ್ದರೆ ದಿಂಬಿಗೆ ತಲೆಯಿಟ್ಟ ಕೂಡಲೇ ನಿದ್ದೆಗೆ ಜಾರಿಹೋಗುವ ತಾನು ಒಮ್ಮೊಮ್ಮೆ ಓದುವ ಪುಸ್ತಕದ ಮೇಲೆಯೇ ನಿದ್ದೆ ಹೋದ ದ್ದುಂಟು. ಈಗ ಎಷ್ಟೇ ಪ್ರಯತ್ನಪಟ್ಟರೂ ನಿದ್ದೆ ಬಳಿಗೆ ಬಾರದೇ ಹೋಯಿತು.

ಮನಸ್ಸು ಸರಿಯಿದ್ದರೆ ಮಾತ್ರ ಊಟ ತಿಂಡಿ ನಿದ್ದೆ ಬೇಕಾಗುವುದು. ಇಲ್ಲದಿದ್ದರೆ ಏನೂ ಬೇಡ ಎಂಬುದು ಮೊದಲ ಸಲಕ್ಕೆ ಅನುಭವಕ್ಕೆ ಬಂದಿದ್ದರಿಂದ ನಿದ್ದೆ ಬಾರದೆ ಹೊರಳಾಡತೊಡಗಿದಳು.

ತಂಗಿಯರು ಆಗಲೇ ನಿದ್ರಾವಶರಾಗಿ ದ್ದರು. ತಾನು ಮಾತ್ರ ನಿದ್ದೆ ಬಂದಂತೆ ಕಣ್ಣು ಮುಚ್ಚಿ ನಟಿಸುತ್ತಿರುವುದು.

ನಡುಮನೆಯಲ್ಲಿ ಅಪ್ಪ ಅಮ್ಮನ ಮೆಲುದನಿಯ ಮಾತುಗಳು ಕೇಳಿ ಬರುತ್ತಿದ್ದರೂ ಕೇಳಿಸಿಕೊಳ್ಳುವ ಉತ್ಸಾಹ ವಿರಲಿಲ್ಲ. ಅದು ಮುಂಚಿನಿಂದಲೇ ಬಂದ ಅಭ್ಯಾಸವಾದುದರಿಂದ ಕದ್ದು ಕೇಳಿಸಿ ಕೊಳ್ಳುವಂತಹ ಹೀನ ಪ್ರವೃತ್ತಿ ಬೆಳೆದಿರಲಿಲ್ಲ.

ಮಾತು ತುಸು ಜೋರಾಗಿ ಕೇಳಿ ಬರುತ್ತಿದ್ದುದರಿಂದ ಹಾಗೂ ತನ್ನ ಹೆಸರು ಕೇಳಿ ಬಂದಿದ್ದರಿಂದ ಕಿವಿ ಆನಿಸು ವಂತಾಯಿತು.

"ಇಂತಹ ಸಂಬಂಧಕ್ಕೆ ಇಷ್ಟೊಂದು ಅವಸರ ಪಟ್ಟುಕೊಂಡು ಮಾಡುವ ಅಗತ್ಯವಿತ್ತಾ?" ಅಪ್ಪನ ಸ್ವರ ತುಸು ಗಡುಸಾಗಿತ್ತು.

"ಮತ್ತೇನು? ನೀವು ವರದಕ್ಷಿಣೆ ವರೋಪಚಾರ ಎಂದು ಲಕ್ಷಗಟ್ಟಳೆ ಸುರಿದು ಮದುವೆ ಮಾಡಿಸ್ತೀರಾ?" ಪಟ್ಟುಬಿಡದ ಅಮ್ಮನ ಪ್ರಶ್ನೆಗೆ ಬಹುಶಃ ಅಪ್ಪ ನಿರುತ್ತರರಾಗಿರಬಹುದು.

"ಹೋಗಲಿ, ಅವಳ ಒಪ್ಪಿಗೆಯನ್ನಾ ದರೂ ಕೇಳಿದ್ದೀಯಾ?" ಅಪ್ಪನಿಗೆ ಅಷ್ಟಾದರೂ ವಿವೇಕ ಇದೆಯಲ್ಲಾ ಅನ್ನಿಸಿತು.

"ಕೋಳಿಯನ್ನು ಕೇಳಿ ಯಾರಾದರೂ ಮಸಾಲೆ ಅರೆಯುತ್ತಾರಾ? ನಿಮ್ಮನ್ನು ಮದುವೆ ಮಾಡಿಕೊಡುವಾಗ ನನ್ನ ಒಪ್ಪಿಗೆಯನ್ನು ಯಾರಾದರೂ ಕೇಳಿ ದ್ದಾರಾ?" ಅಮ್ಮನ ದಬಾಯಿಸುವ ಮಾತಿಗೆ ಅಪ್ಪನೂ ಬಿಟ್ಟುಕೊಡದೆ "ಇದು ಆಗಿನ ಕಾಲ ಅಲ್ಲವಲ್ಲ. ಈಗಿನ ಮಕ್ಕಳು ಕಲಿತವರು. ಎಲ್ಲಾ ತಿಳಿದವರು. ಅವರಿಗೆ ವಿವೇಚನಾ ಶಕ್ತಿಯಿದೆ."

"ಏನು ತಿಳಿದವರೋ.... ಮಣ್ಣಾಂಗಟ್ಟಿಯೋ... ಕಾಲ ಆಗಿನದ್ದಾ ದರೇನು? ಈಗಿನದ್ದಾದರೇನು? ಕಾಲ ಒಂದೇ ತರ. ಆಗಿನ ಕಾಲದಲ್ಲೂ ವರದಕ್ಷಿಣೆಗೆ ಜೀವ ಬಿಡ್ತಾ ಇದ್ದರು. ಈಗ ಕೂಡಾ ಅಷ್ಟೇ. ಇದರಲ್ಲಿ ಯಾವ ಬದಲಾವಣೆನೂ ಇಲ್ಲ. ಆಗ ಚಿನ್ನ ದುಡ್ಡು ಎರಡನ್ನೂ ಪೀಕಿಸುತ್ತಿದ್ದರು. ಈಗ ದುಡ್ಡಿಲ್ಲದಿದ್ದರೂ ಚಿನ್ನ ಮಾತ್ರ ಸುರಿಯಲೇ ಬೇಕಲ್ಲ. ಅದೂ ನಮ್ಮಂತಹ ವರಿಂದ ಅನ್ನಕ್ಕೆ ಗತಿಯಿಲ್ಲದವರು ಚಿನ್ನ ಮಾಡಿಸುವುದು ಹೇಗೆ?

ವರದಕ್ಷಿಣೆಯ ವಿಚಾರ ಬಂದದ್ದೇ ಅಪ್ಪ ಮೆತ್ತಗಾದರು ಅನ್ನಿಸುತ್ತೆ. ನಂತರ ಮಾತುಕತೆಗಳೇ ಕೇಳಿಬರಲಿಲ್ಲ.

ಅಮ್ಮನಂದಂತೆ ವರದಕ್ಷಿಣೆ ಪಡೆಯ ಬೇಡಿರೆಂದು ಬಾಯಿಮಾತಿಗಷ್ಟೇ ಹೇಳು ವುದಲ್ಲದೆ ಅದರಂತೆ ನಡೆಯುವವರು ಯಾರಿದ್ದಾರೆ? ಅದೆಲ್ಲಾ ಬರೀ ಭಾಷಣ, ಲೇಖನಕ್ಕಷ್ಟೇ ಸೀಮಿತ. ದೊಡ್ಡ ದೊಡ್ಡ ಲೇಖನಗಳನ್ನು ಬರೆದ ಮಾತ್ರಕ್ಕೆ ಮೇಜು ಕುಟ್ಟಿ ಭಾಷಣ ಮಾಡಿದ ಮಾತ್ರಕ್ಕೆ ವರದಕ್ಷಿಣೆ ನಿರ್ಮೂಲನಗೊಳ್ಳುತ್ತಾ...

ವರದಕ್ಷಿಣೆ ತೆಗೆಯದೆ ಮದುವೆ ಯಾಗುವವರು ಇಂತಹ ಪ್ರಾಯದವರೇ ಇರಬಹುದು. ಐವತ್ತು ಅರುವತ್ತರ ಆಸುಪಾಸಿನವರು ಹದಿನಾರು ಹದಿನೇಳರ ಕಿಶೋರಿಯರನ್ನು ವರದಕ್ಷಿಣೆ ರಹಿತವಾಗಿ ವರಿಸಿ ತಾನು ಆದರ್ಶ ಪುರುಷನೆಂದು ಬೆನ್ನು ತಟ್ಟಿಕೊಳ್ಳುತ್ತಾರೆ. ನಿಜದಲ್ಲಿ ನೋಡಿದರೆ ಇಂತಹವರು ವಿಧವೆಯನ್ನೋ ವಿಚ್ಛೇದಿತೆಯನ್ನೋ ವರಿಸಲು ಲಾಯ ಕ್ಕಾದವರು. ಅವರಿಗ್ಯಾಕೆ ಇದರ ಅರಿವು ಮೂಡುವುದಿಲ್ಲ. ಮೊಮ್ಮಕ್ಕಳ ಪ್ರಾಯದ ಕನ್ಯ ಹೆಣ್ಣನ್ನು ವರಿಸಲು ಪಣ ತೊಟ್ಟು ಅವರ ಕನಸನ್ನು ನುಚ್ಚುನೂರುಗೊಳಿಸು ತ್ತಾರೆ. ದುಡ್ಡಿನಾಸೆಗಾಗಿ ಹೆತ್ತವರು ಯಾವ ಮುಲಾಜಿಲ್ಲದೆ ಈ ಸಂಬಂಧಕ್ಕೆ ಒಪ್ಪಿಬಿಡುತ್ತಾರೆ.

ತನ್ನ ತಂದೆಯ ಪ್ರಾಯದ ಅಥವಾ ಅದಕ್ಕಿಂತಲೂ ಜಾಸ್ತಿಯಾಗಿರುವ ಗಂಡನ ಜೊತೆ ಹೇಗೆ ಕಾಲ ಕಳೆಯುತ್ತಾಳೆ ಎನ್ನುವುದು ಮುಖ್ಯವಲ್ಲ. ಆಕೆಯ ದೆಸೆಯಿಂದಲಾದರೂ ತಮ್ಮ ಮುಂದಿನ ಜೀವನ ಬೆಳಗಬೇಕು. ತನ್ನ ಇನ್ನಿತರ ಮಕ್ಕಳ ಮದುವೆಗಳೆಲ್ಲಾ ಸಾಂಗವಾಗಿ ನೆರವೇರಬೇಕು.

ಪ್ರವಾದಿ(ಸ)ರವರನ್ನು ಮಾದರಿ ಯಾಗಿಸಿಕೊಂಡ ಬಹುಪತ್ನಿ ವಲ್ಲಭರಿಗೂ ಪ್ರವಾದಿ(ಸ) ವರಿಸಿದ್ದು ವಿಧವೆ ವಿಚ್ಛೇದಿತೆಯರನ್ನು ಎಂಬ ಅರಿವನ್ನು ಮರೆ ಮಾಚಿಬಿಟ್ಟದ್ದು ನಗ್ನ ಸತ್ಯ.

ಸೊಳ್ಳೆಯೊಂದು ಕಚ್ಚಿದಾಗ ಕೈ ಅಚಾನಕ್ಕಾಗಿ ಅತ್ತ ಸರಿದು ಟಪ್ಪನೆ ಒಂದೇಟು ಬಿಗಿಯಿತು. ಸೊಳ್ಳೆ ಸತ್ತಿತೋ... ಬಿಟ್ಟಿತೋ... ಅಂತೂ ಸೊಳ್ಳೆ ಕಡಿತದ ಕೆರೆತಕ್ಕೆ ಪರಿಹಾರವೆಂಬಂತೆ ಬಿಗಿದ ಒಂದೇಟು ಉಪಶಮನವನ್ನು ತಂದು ಕೊಟ್ಟಿತು. ಅಪ್ಪ ಅಮ್ಮನ ವಾಗ್ವಾದಕ್ಕೆ ತೆರೆಬಿದ್ದದ್ದು ಯಾವಾಗಲೋ... ಈಗ ನೀರವ ಮೌನ ಗೋಚರಕ್ಕೆ ಬರತೊಡಗಿತು. ಅವರು ಮಲಗಿದ್ದಕ್ಕೆ ಸಾಕ್ಷಿಯೆಂಬಂತೆ ಗೊರಕೆಯ ಸದ್ದು ರಾತ್ರಿಯ ನೀರವತೆ ಯನ್ನು ಭೇದಿಸಿ ಬರತೊಡಗಿದ್ದವು.

ತನ್ನ ಬಳಿಗೆ ಸರಿದು ಮಲಗಿದ ತಂಗಿಯರತ್ತ ದಿಟ್ಟಿಸಿದಳು. ಮುಗ್ಧತೆ ತುಂಬಿದ ಮುಖ ಮಂದ ಬೆಳಕಿನಲ್ಲು ಎದ್ದು ಕಾಣುತ್ತಿತ್ತು. ತನ್ನಿಂದಾಗಿ ತಂಗಿಯರ ಬಾಳು ಬೆಳಗುವುದಾದರೆ ತಾನ್ಯಾಕೆ ಈ ಮದುವೆ ತಿರಸ್ಕರಿಸುವುದು?

ಹುಚ್ಚೀ... ತಂಗಿಯರ ಬಾಳ್ವೆಗಿಂತ ನಿನ್ನ ಭವಿಷ್ಯ ಮುಖ್ಯವಲ್ಲವೇ? ಮನಸ್ಸು ಚುಚ್ಚತೊಡಗಿತು. **[ಸಶೇಷ]**

'2014ರ ಮೊದಲು' ಕೆಲವು ಪ್ರಶ್ನೆಗಳು

■ ಶಹೀದ ಉಮರ್ ■

2014ರ ಮೊದಲು,

ಇದೇ ರೀತಿಯ ರೈತರ ಪ್ರತಿಭಟನೆ ನಡೆಯುತ್ತಿದ್ದಲ್ಲಿ ಏನಾಗುತ್ತಿತ್ತು? ಪಂಜಾಬ್, ಹರಿಯಾಣದಿಂದ ಸಾವಿರಾರು ಸಂಖ್ಯೆಯಲ್ಲಿ ರೈತ ಕಾರ್ಮಿಕರು ದಿಲ್ಲಿಯ ಗಡಿಯಲ್ಲಿ ಬಂದು ಸೇರಿದ್ದರೆ ಏನಾಗುತ್ತಿತ್ತು? ಪಂಜಾಬ್, ಹರಿಯಾಣದ ಅನೇಕ ಮೂಲೆ ಗಳಿಂದ ಸಾವಿರಾರು ಟ್ರ್ಯಾಕ್ಟರ್‌ಗಳು ಹೊರಟು ಬಂದು ದಿಲ್ಲಿಯ ಸೀಮಾರೇಖೆಯಲ್ಲಿ ಡೇರೆ ಹೂಡಿದ್ದರೆ ಏನಾಗುತ್ತಿತ್ತು? ದಿಲ್ಲಿ, ಉತ್ತರ ಪ್ರದೇಶ, ಪಂಜಾಬ್, ಹರಿಯಾಣ, ರಾಜಸ್ತಾನ್ ಮೊದಲಾದೆಡೆ ಸಾವಿರಾರು ಸಂಖ್ಯೆಯಲ್ಲಿ ರೈತರು ಪ್ರತಿಭಟನಾ ನಿರತರಾಗಿದ್ದು, ಕೃಷಿ ಕಾಯಿದೆಯನ್ನು ಹಿಂಪಡೆಯುವಂತೆ ಸರಕಾರದ ವಿರುದ್ಧ ಧ್ವನಿ ಎತ್ತಿದ್ದರೆ ಏನಾಗುತ್ತಿತ್ತು? ರಾತ್ರಿ ಹಗಲೆನ್ನದೆ, ಚಳಿಯಲ್ಲೂ ನಗ್ನ ಆಕಾಶದ ಕೆಳಗೆ ಟ್ರ್ಯಾಕ್ಟರ್‌ಗಳಲ್ಲಿ, ಟ್ರ್ಯಾಕ್ಟರ್‌ಗಳ ಅಡಿಯಲ್ಲಿ ರೈತರ ಇಷ್ಟೊಂದು ಸಂಖ್ಯೆಯ ಜಮಾವಣೆ, ದಿಲ್ಲಿಯಿಂದ ಕೆಲವೇ ಕಿ.ಮೀ. ಅಂತರದಲ್ಲಿ 2 ವಾರಗಳಿಗೂ ಅಧಿಕ ಸಮಯದಿಂದ ಇರುತ್ತಿದ್ದರೆ ಏನಾಗುತ್ತಿತ್ತು?

ಈ ಎಲ್ಲ ಪ್ರಶ್ನೆಗಳಿಗೂ ಇಂದಿನ ಮುಖ್ಯ ವಾಹಿನಿಯ ಮಾಧ್ಯಮ ಗಳಿಗೂ ಸಂಬಂಧವಿದೆ. ವಿಶೇಷ ವಾಗಿ, ಟಿ.ವಿ. ಮಾಧ್ಯಮಗಳು. ಒಂದು ವೇಳೆ 2014ರ ಮೊದಲು ಈ ರೀತಿಯಲ್ಲಿ ರೈತರ ಆದೋಲನ, ಪ್ರತಿಭಟನೆಗಳು ನಡೆಯುತ್ತಿದ್ದರೆ, ದಿಲ್ಲಿಯ ಗಡಿಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಮೈಲುಗಳುದ್ದ ಶಾಂತಿಯುತವಾಗಿ ರೈತರು ಧರಣಿ ಹೂಡಿದ್ದರೆ ದೇಶದ ಟಿ.ವಿ. ಮಾಧ್ಯಮಗಳ ಹೆಸರಾಂತ ಆ್ಯಂಕರ್‌ಗಳು ರೈತರ ಮಧ್ಯೆ ಕಾಣಿಸಿಗುತ್ತಿದ್ದರು. ಯಾವುದಾದರೂ ಆ್ಯಂಕರ್ ಒಬ್ಬರು ರೈತರೊಂದಿಗೆ ಹುಕ್ಕಾ ಸೇವನೆ ಮಾಡುತ್ತಾ ಅವರ ಬೇಡಿಕೆಯನ್ನು ಕೇಳುತ್ತಿದ್ದ. ಇನ್ನೊಬ್ಬ ಟ್ರ್ಯಾಕ್ಟರ್‌ನಲ್ಲಿ ರಾತ್ರಿಯಿಡೀ ತಂಗಿ

ಬೆಳಗ್ಗಿನ ವಿಚಾರಗಳನ್ನು ಜನರಿಗೆ ತಲುಪಿಸುತ್ತಿದ್ದ. ಯಾರಾದರೊಬ್ಬ ಪ್ರಸಿದ್ಧ ರಿಪೋರ್ಟರ್ ರೈತರ ಮಧ್ಯೆ ಕುಳಿತು ಅವರ ಅಹವಾಲುಗಳನ್ನು ಸರಕಾರಕ್ಕೆ ತಲುಪಿಸುವ ಪ್ರಯತ್ನ ದಲ್ಲಿರುತ್ತಿದ್ದ. ಇನ್ನೊಂದು ಪ್ರಸಿದ್ಧ ಮುಖ ರೈತರಿಗೆ ಬಡಿಸುತ್ತಿರುವ ಪಾಕ ಶಾಲೆಯ ಚಿತ್ರಣ ತೋರಿಸುತ್ತಾ ಆಂದೋಲನದ ಪ್ರಾಮುಖ್ಯತೆಯನ್ನು ವಿವರಿಸುತ್ತಿದ್ದ. ಯಾರಾದರೊಬ್ಬ ಆ್ಯಂಕರ್ ಲೈವ್ ಶೋ ನಡೆಸುತ್ತಾ ರೈತರ ಧ್ವನಿಯನ್ನು ಸರಕಾರಕ್ಕೆ ಆಡಳಿತ ದಲ್ಲಿರುವವರ ಗಮನಕ್ಕೆ ತರುವ ಪ್ರಯತ್ನ ಮಾಡುತ್ತಿದ್ದ.

ಆದರೆ ರೈತರ ಇಂದಿನ ಪ್ರತಿ ಭಟನೆಯಲ್ಲಿ ಈ ರೀತಿ ನಡೆಯು ತ್ತಿದೆಯೇ? ಸ್ಟುಡಿಯೋದಲ್ಲಿ ಮಿಂಚುವ ಆ ಪ್ರಸಿದ್ಧ ಮುಖಗಳು ಇಂದು ಪ್ರತಿಭಟನಾ ನಿರತ ರೈತರ ನಡುವೆ ಇವೆಯೇ? ರೈತರ ಮಾತು ಗಳನ್ನು ಅವರು ಕೇಳುತ್ತಿರುವರೇ? ರೈತರೊಂದಿಗೆ ಮಾತುಕತೆ ನಡೆಸಿ ಅವರ ಬೇಡಿಕೆಗಳನ್ನು ಸರಕಾರಕ್ಕೆ ತಲುಪಿಸುತ್ತಿರುವರೇ? ಕೆಲವೊಂದು ಚಹರೆಗಳು ಮಾತ್ರ ಕಾಣ ಸಿಗುತ್ತಿವೆ. 2014ರ ಮೊದಲು...

ದೇಶದಲ್ಲೊಂದು ಬಹುದೊಡ್ಡ ಪ್ರತಿಭಟನೆ ನಡೆದಿತ್ತು. 2011ರಲ್ಲಿ ಭ್ರಷ್ಟಾಚಾರದ ವಿರುದ್ಧ ಸರಕಾರದ ವಿರುದ್ಧ ದೊಡ್ಡ ಜನಾಂದೋಲನವೇ ನಡೆದಿತ್ತು. ದಿಲ್ಲಿಯ ಜಂತರ್ ಮಂತರ್‌ನಿಂದ ಪ್ರಾರಂಭಗೊಂಡು, ರಾಮ್‌ಲೀಲಾ ಮೈದಾನದವರೆಗೆ ಹಬ್ಬಿತ್ತು. ಈ ಪ್ರತಿಭಟನೆ 13 ದಿನಗಳ ಕಾಲ ಮುಂದುವರಿದಿತ್ತು. ಹಗಲು–ರಾತ್ರಿಯೆನ್ನದೆ ಟಿ.ವಿ. ಮಾಧ್ಯಮಗಳು ನೇರ ಪ್ರಸಾರವನ್ನು ಕೈಗೊಂಡಿದ್ದವು. ಎಲ್ಲ ದೊಡ್ಡ ದೊಡ್ಡ ದೃಶ್ಯ ಮಾಧ್ಯಮಗಳ ನಿರೂಪಕರು, ಪತ್ರಕರ್ತರು, ಸಂಪಾ ದಕರು ಈ ಪ್ರತಿಭಟನೆಯ ಮಧ್ಯೆ ನಿಂತು ಅದನ್ನು ನೇರ ಪ್ರಸಾರ ಮಾಡುತ್ತಿದ್ದರು. ಅವರ ಬೇಡಿಕೆ ಗಳನ್ನು, ದೂರುಗಳನ್ನು ಜನರ ಬಳಿಗೆ ಹಾಗೂ ಸರಕಾರಕ್ಕೆ ತಲುಪಿಸುತ್ತಿದ್ದರು. ಅದುವೇ ಅಣ್ಣಾ ಹಝಾರೆಯವರು ಭ್ರಷ್ಟಾಚಾರದ ವಿರುದ್ಧ ಕೈಗೊಂಡ ಆಂದೋಲನ.

ಆದರೆ ಇಂದಿನ ಈ ಆಂದೋ ಲನ ರೈತರದ್ದು. ದೇಶದ ಬೆನ್ನೆಲು ಬಾಗಿರುವ ದೇಶದ ಹೊಟ್ಟೆಯ ಹಸಿವನ್ನು ನೀಗಿಸುವ ಅನ್ನದಾತ ರದ್ದು. ಆಗ ಸರಕಾರ ಯು.ಪಿ.ಎ. ಯದ್ದಾಗಿತ್ತು. ಅಂದು ಮಾಧ್ಯಮಗಳು ಸರಕಾರವನ್ನು ಆಡಳಿತದ ಚುಕ್ಕಾಣಿ ಹಿಡಿದವರನ್ನು ತೀವ್ರವಾಗಿ ಟೀಕಿಸಿದ್ದವು, ವಿಮರ್ಶಿಸಿದ್ದವು, ಪ್ರಶ್ನಿಸಿದ್ದವು, ಜನರಿಗೆ ಉತ್ತರಿಸುವಂತೆ ಸರಕಾರಕ್ಕೆ ಒತ್ತಡ ಹೇರಿದ್ದವು. ಈಗ ಸರಕಾರ ಮೋದಿಯವರದ್ದು. ಈಗಿನ ಸರಕಾರ ಮಾಧ್ಯಮಗಳು ತಮ್ಮನ್ನು ಟೀಕಿಸುವುದನ್ನು, ವಿಮರ್ಶಿಸುವುದನ್ನು ಇಷ್ಟಪಡುತ್ತಿಲ್ಲ. ಹಾಗಾಗಿ ಸರಕಾರ ವನ್ನು ಅಸಂತೋಷಗೊಳಿಸುವುದಕ್ಕೆ (ಇಷ್ಟಪಟ್ಟರೂ, ಪಡದಿದ್ದರೂ) ಯಾವ ಮಾಧ್ಯಮಗಳೂ ಎದೆಗಾರಿಕೆ ತೋರಿಸುತ್ತಿಲ್ಲ. ಇದುವೇ ಮೋದಿಯ ಸಣ್ಣ ಇಂಡಿಯಾ. ಇದರಲ್ಲಿ ಸರಕಾರದೊಂದಿಗೆ ಪ್ರಶ್ನಿಸುವುದು, ವಿಮರ್ಶಿಸುವುದು, ನ್ಯಾಯೋಚಿತ ಬೇಡಿಕೆಗಳನ್ನು ಸರಕಾರದ ತನಕ ತಲುಪಿಸುವುದು, ಸರಕಾರವನ್ನು ಕಟಕಟೆಯಲ್ಲಿ ನಿಲ್ಲಿಸುವುದು, ಪ್ರತಿಭಟನಾಕಾರರ ಬೇಡಿಕೆಗಳನ್ನು, (ಅದರಲ್ಲಿ ಸರಿ, ತಪ್ಪು ಇರಬಹುದು, ನೈಜ ಬೇಡಿಕೆಗಳೂ ಇರಬಹುದು, ಕೆಲವೊಂದು ಅತಿಯಾಗಿರಲೂ ಬಹುದು) ಅಂದರೆ ರೈತರೊಂದಿಗೆ ನಿಂತು ರೈತರ ಅಹವಾಲುಗಳನ್ನು, ಬೇಡಿಕೆಗಳನ್ನು ಸರಕಾರದ ತನಕ ತಲುಪಿಸಿ, ಸರಕಾರವನ್ನು ಪ್ರಶ್ನಿಸುವ ಕಾರ್ಯ ಮಾಡಬೇಕಾಗಿದ್ದ 2014ರ ಮೊದಲು ನಡೆಸುತ್ತಿದ್ದ ಮಾಧ್ಯಮಗಳ ತಾಕತ್ತು ಇಂದೇಕೆ ಗೋಚರಿಸುತ್ತಿಲ್ಲ?

ಇಂದೇನಾಗುತ್ತಿವೆಯೆಂದರೆ, ಧರಣಿ ಕುಳಿತವರಲ್ಲಿ ಖಾಲಿಸ್ತಾನಿಗಳಾರು? ಪ್ರತಿಭಟನಾಕಾರರಲ್ಲಿ ಎಡಪಂಥೀಯರು ಯಾರು? ರೈತರನ್ನು ಉದ್ರೇಕಿಸುತ್ತಿರು ವವರು ಯಾರು? ಉತ್ತೇಜಿಸುವವರು ಯಾರು? ಈ ಆಂದೋಲನದ ಹಿಂದೆ ಯಾವ ದೇಶದ ಕೈವಾಡವಿದೆ? ಇದರ ಹಿಂದೆ ಯಾರ ಸಂಚಿರಬಹುದು? ಇದನ್ನೆಲ್ಲ ಮಾಧ್ಯಮಗಳು ಚಿಂತಿಸುತ್ತಿವೆ. ಟಿ.ವಿ. ಮಾಧ್ಯಮಗಳಲ್ಲಿ ಕೃಷಿ ಕಾಯಿದೆಯ ಪ್ರಯೋಜನಗಳ ಬಗ್ಗೆ ಮಂತ್ರಿಗಳಿಂದ ಗಂಟೆಗಟ್ಟಲೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ರೈತರು ಒಂದು ದಿನ ಭಾರತ ಬಂದ್‌ನ ಘೋಷಣೆ ಮಾಡಿದ ದಿನವೂ ಇದನ್ನೇ

ಮಾಧ್ಯಮಗಳು ಪ್ರಸಾರ ಮಾಡುತ್ತಿದ್ದವು. ಡಜನ್‌ಗಟ್ಟಲೆ ಮಂತ್ರಿಗಳು, ರಾಜಕೀಯ ನೇತಾರರು ಕಾಯಿದೆಯ ಉಪಯೋಗದ ಬಗ್ಗೆಯೇ ಮಾತನಾಡುತ್ತಿದ್ದರು. ಯಾಕೆಂದರೆ ಸರಕಾರ ಇದನ್ನೇ ಮಾಡಬೇಕಾಗಿ ಆಜ್ಞಾಪಿಸಿತ್ತು. ಸರಕಾರ ತನ್ನ ಮಾತನ್ನು ಎತ್ತಿ ಹಿಡಿಯುವುದರಲ್ಲಿ ಎರಡು ಮಾತಿಲ್ಲ. ಆದರೆ ಮಾಧ್ಯಮದವರ ನಿಲುವೇನಾಗ ಬೇಕಿತ್ತು? ರೈತರ ಮಧ್ಯೆ ಎಂದಾದರೂ ಕಂಡು ಬಂದಿದ್ದಾರೆಯೇ? ರೈತರು ಕೂಡಾ ಪೋಸ್ಟರ್‌ಗಳ ಮೂಲಕ ಮಾಧ್ಯಮಗಳಿಗೆ ಅದರಲ್ಲೂ ಸರಕಾರದ ಬೂಟು ನೆಕ್ಕುವ ಮಾಧ್ಯಮಗಳಿಗೆ ಬಹಿಷ್ಕಾರ ಹಾಕಿವೆ. ಕೆಲವೊಂದು ಮಾಧ್ಯಮಗಳ ಹೆಸರನ್ನು ಉಲ್ಲೇಖಿಸುವ ಮೂಲಕ, "ನೀವು ನಮ್ಮ ಪ್ರತಿಭಟನೆಯನ್ನು ಪ್ರಸಾರ ಮಾಡಬೇಡಿ" ಎಂದು ಕಟ್ಟಪ್ಪಣೆ ನೀಡಿದ್ದಾರೆ.

ಅಣ್ಣಾ ಹಝಾರೆಯ ಆಂದೋಲನದಲ್ಲಿ ಭ್ರಷ್ಟಾಚಾರದ ವಿರುದ್ಧ ಜನರು ಸರಕಾರವನ್ನು ಪ್ರಶ್ನಿಸಿದ್ದರು. ಆಗ ಮಾಧ್ಯಮಗಳು ಜನರೊಂದಿಗೆ ನಿಂತು ಸರಕಾರವನ್ನು ವಿಮರ್ಶಿಸುತ್ತಿತ್ತು ಹಾಗೂ ಜನರ ಬೇಡಿಕೆಗಳನ್ನು ಸರಕಾರಕ್ಕೆ ತಲುಪಿಸುವ ಕಾರ್ಯ ಮಾಡುತ್ತಿತ್ತು. ಆದರೆ ಇಂದಿನ ರೈತರ ಆಂದೋಲನದಲ್ಲಿ ದೊಡ್ಡ ದೊಡ್ಡ ಟಿ.ವಿ. ಮಾಧ್ಯಮಗಳು ಸ್ಟುಡಿಯೋದಲ್ಲೇ ಕುಳಿತು ಮಂತ್ರಿಗಳ ಸಂದರ್ಶನಗಳನ್ನು ನಡೆಸುತ್ತಿವೆ. ಸರಕಾರ ತಂದ ಕೃಷಿ ಕಾಯಿದೆಯು ರೈತರಿಗೆ ಸುತರಾಂ ಒಪ್ಪಿಗೆಯಿಲ್ಲ. ಸರಕಾರದ ನಿಲುವು, ರೈತರ ಬೇಡಿಕೆ– ಇವೆರಡರ ಮಧ್ಯೆ ಮಾಧ್ಯಮಗಳು ಜನರ ಧ್ವನಿಯಾಗಿ ನಿಲ್ಲಬೇಕಿತ್ತೇ ಹೊರತು ಸರಕಾರದ, ಆಡಳಿತದ ಹಿಂದೆ ಅವಿತು ಕೊಂಡಿರುವುದಲ್ಲ. ಮಾಧ್ಯಮಗಳು ಅಧಿಕಾರದಲ್ಲಿರುವವರನ್ನು ಪ್ರಶ್ನಿಸಬೇಕೇ ಹೊರತು ಪ್ರತಿಭಟನಾಕಾರರನ್ನೇ ವಿಮರ್ಶಿಸುವುದು ಮಾಧ್ಯಮಗಳ ನಿಲುವಾಗಬಾರದು. ಆಡಳಿತದಲ್ಲಿರುವವರು ಪ್ರತಿಭಟನಾಕಾರರ ಮಾತುಗಳನ್ನು ಆಲಿಸಿ ಸಂಧಾನದ ಮಾರ್ಗ ಹಾಗೂ ಸಮಯೋಚಿತ, ಸಂತುಲಿತ ನಿರ್ಧಾರವನ್ನು ತೆಗೆದುಕೊಳ್ಳಬೇಕಾಗಿದೆ. ಇದರ ಮಧ್ಯೆ ಮಾಧ್ಯಮಗಳು ರೈತರ ಅಭಿಪ್ರಾಯಗಳಿಗೆ, ಮನ್ನಣೆ ನೀಡಿ ಅವರ ಬೇಡಿಕೆಗಳನ್ನು ಸರಕಾರಕ್ಕೆ, ಜನರಿಗೆ ತಲುಪಿಸುವಲ್ಲಿ ಪಕ್ಷಪಾತಿ ಧೋರಣೆ ತಾಳದೆ, ಮಾಧ್ಯಮಗಳು ಪ್ರಜಾಪ್ರಭುತ್ವದ ನಾಲ್ಕನೆಯ ಸ್ತಂಭ ಎನ್ನುವಲ್ಲಿ ತಮ್ಮ ಕಾರ್ಯವನ್ನು ಸಂಪೂರ್ಣವಾಗಿ ನಿರ್ವಹಿಸಬೇಕಾದ ಅಗತ್ಯ ತುರ್ತಾಗಿದೆ. ■

"ನೀವು ಪರಸ್ಪರರ ಸಂಪತ್ತನ್ನು ಅನುಚಿತ ರೀತಿಯಿಂದ ಕಬಳಿಸಬೇಡಿರಿ. ಲೇವಾದೇವಿಗಳು ಪರಸ್ಪರ ಒಪ್ಪಿಗೆಯಿಂದಾಗಬೇಕು. ನಿಮ್ಮನ್ನು ನೀವೇ ವಧಿಸಿಕೊಳ್ಳಬೇಡಿರಿ. ಅಲ್ಲಾಹನು ನಿಮ್ಮ ಮೇಲೆ ಕೃಪೆಯುಳ್ಳವನೆಂದು ಖಾತ್ರಿಯಾಗಿ ನಂಬಿರಿ." (ಪವಿತ್ರ ಕುರ್‌ಆನ್: 4: 29)

"ಸತ್ಯವಿಶ್ವಾಸಿಗಳೇ, ಕರ್ಮಭ್ರಷ್ಟನೊಬ್ಬನು ನಿಮ್ಮ ಬಳಿಗೇನಾದರೂ ಸುದ್ದಿ ತಂದರೆ ಆ ಕುರಿತು ತನಿಖೆ ಮಾಡಿರಿ. (ಏಕೆಂದರೆ) ನೀವು ಪ್ರಮಾದವಶಾತ್ ಒಂದು ಸಮೂಹಕ್ಕೆ ಹಾನಿ ಮಾಡಿ ಆ ಬಳಿಕ ನಿಮ್ಮ ಕೃತ್ಯದ ಬಗ್ಗೆ ಪಶ್ಚಾತ್ತಾಪ ಪಡುವಂತಾಗಬಾರದು." (ಪವಿತ್ರ ಕುರ್‌ಆನ್: 49: 6)

With best compliments from:

Prop.: SYED ABDUL KHADER

ASHA PLASTIC INDUSTRIES

DAVANGERE

ಕುರ್‌ಆನ್ ಆಯ್ದ ವಚನಗಳು

ಅಲ್‌ಬಕರಃ

ಸೂಕ್ತ : 177 । ಅಧ್ಯಾಯ : 2

■ ಆರಿಫ್ ಪಡುಬಿದ್ರೆ ■

ಧರ್ಮಶೀಲತೆ ಯಾವುದು?

ನೀವು ನಿಮ್ಮ ಮುಖಗಳನ್ನು ಪೂರ್ವದಿಕ್ಕಿಗೆ ಅಥವಾ ಪಶ್ಚಿಮ ದಿಕ್ಕಿಗೆ ಮಾಡಿಕೊಳ್ಳುವುದು ಧರ್ಮಶೀಲತೆಯಲ್ಲ. ನಿಜವಾಗಿ ಒಬ್ಬನು ಅಲ್ಲಾಹನನ್ನೂ ನಿರ್ಣಾಯಕ ದಿನವನ್ನೂ ದೇವಚರರನ್ನೂ ಅಲ್ಲಾಹನು ಅವತೀರ್ಣಗೊಳಿಸಿದ ಗ್ರಂಥವನ್ನೂ ಅವನ ಸಂದೇಶವಾಹಕರನ್ನೂ ಹೃತ್ಪೂರ್ವಕ ಒಪ್ಪಿಕೊಳ್ಳುವುದೂ ಅಲ್ಲಾಹನ ಸಂಪ್ರೀತಿಗಾಗಿ ತನ್ನ ಮನ ಮೆಚ್ಚುಗೆಯ ಸಂಪತ್ತನ್ನು ಬಂಧುಗಳಿಗೂ ಅನಾಥರಿಗೂ ನಿರ್ಗತಿಕರಿಗೂ ಪ್ರಯಾಣಿಕರಿಗೂ ಸಹಾಯಾರ್ಥಿಗಳಿಗೂ ದಾಸ್ಯ ವಿಮೋಚನೆಗಾಗಿ ವ್ಯಯಿಸುವುದೂ ನಮಾಝ್‌ನ್ನು ಸಂಸ್ಥಾಪಿಸುವುದೂ ಝಕಾತ್(ಕಡ್ಡಾಯದಾನ) ನೀಡುವುದೂ ವಾಗ್ದಾನ ಮಾಡಿದರೆ ಪೂರೈಸುವುದೂ ಕಷ್ಟಕಾರ್ಪಣ್ಯಗಳಲ್ಲಿಯೂ ಸತ್ಯಾಸತ್ಯಗಳ ಸಮರವಾಗುತ್ತಿರುವಾಗಲೂ ಸಹನೆಯಿಂದಿರುವುದೂ ಧರ್ಮಶೀಲತೆಯಾಗಿರುತ್ತದೆ. ಇವರೇ ಸತ್ಯಸಂಧರು ಮತ್ತು ಇವರೇ ಧರ್ಮನಿಷ್ಠರು.

ಒಬ್ಬ ಸತ್ಯವಿಶ್ವಾಸಿಯಲ್ಲಿ ಇರಬೇಕಾದ ಎಲ್ಲ ಗುಣ ಲಕ್ಷಣಗಳನ್ನು ಈ ಒಂದು ಸೂಕ್ತದಲ್ಲಿ ವಿವರಿಸಲಾಗಿದೆ.

ಸೂಕ್ತ ಆರಂಭದಲ್ಲಿ ಪೂರ್ವ ಅಥವಾ ಪಶ್ಚಿಮ ದಿಕ್ಕಿಗಳಿಗೆ ಮುಖ ಮಾಡುವ ಮಾತನ್ನು ಕೇವಲ ಉಪಮೆಯಾಗಿ ಹೇಳಲಾಗಿದೆ. ಧರ್ಮದ ಕೆಲವು ಬಾಹ್ಯಾಚಾರಗಳ ಪಾಲನೆ, ಕೆಲವು ಸಾಂಪ್ರದಾಯಿಕ ವ್ರತಗಳ ಅನುಷ್ಠಾನ ಮತ್ತು ಧರ್ಮನಿಷ್ಠೆಯ ಕೆಲವು ನಿಶ್ಚಿತ ಹಾಗೂ ಪರಿಚಿತ ರೂಪಗಳ ಪ್ರದರ್ಶನ ಇವೆಲ್ಲಾ ಅಲ್ಲಾಹನ ಬಳಿ ಮಾನ್ಯವಾಗುವಂಥ ನಿಜವಾದ ಒಳಿತುಗಳಲ್ಲವೆಂಬುದನ್ನು ತಿಳಿಯಪಡಿಸುವುದೇ ಇದರ ನಿಜವಾದ ಉದ್ದೇಶ.

ಖಿಯಾಮತ್ ಅಥವಾ ನಿರ್ಣಾಯಕ ದಿನ, ದೇವಚರರು, ಅಲ್ಲಾಹನ ಗ್ರಂಥ, ಆತನ ಪ್ರವಾದಿಗಳನ್ನು ಹೃತ್ಪೂರ್ವಕವಾಗಿ ಒಪ್ಪಿಕೊಳ್ಳುವುದು, ತಮ್ಮಲ್ಲಿರುವ ಮೊತ್ತದಲ್ಲಿ ಅಗತ್ಯವುಳ್ಳವರಿಗೆ ನೆರವು ಅಥವಾ ಸಹಾಯ ಮಾಡುವುದು, ಅದೂ ಎಂಥವರಿಗೆ ಕೊಡಬೇಕು ಎಂಬುದನ್ನೂ ಸ್ಪಷ್ಟವಾಗಿ ತಿಳಿಸಲಾಗಿದೆ.

ನಮಾಝ್ ಮಾಡುವುದು ಮಾತ್ರವಲ್ಲ, ಅದನ್ನು ಸಂಸ್ಥಾಪಿಸುವುದು ಎಂದಿದೆ. ಅಂದರೆ ಸಮಯಕ್ಕೆ ಸರಿಯಾಗಿ ಅದರ ಎಲ್ಲ ಶಿಸ್ತು, ನಿಯಮಗಳನ್ನು ಪಾಲಿಸುವುದು, ನಮಾಝ್ ಮಾಡಲು ಬೇಕಾದ ವ್ಯವಸ್ಥೆಗಳನ್ನು ಮಾಡಿ ಕೊಡುವುದು ಮೊದಲಾದ ವಿಶಾಲ ಅರ್ಥವನ್ನು ಇದು ಒಳಗೊಂಡಿದೆ.

ಝಕಾತ್ ಕೊಡುವ ಬಗ್ಗೆ ನಮಾಝ್‌ನ ಆದೇಶದ ಜೊತೆಯಲ್ಲೇ ಉಲ್ಲೇಖವಿದ್ದು, ಅಷ್ಟೇ ಪ್ರಾಮುಖ್ಯತೆ ಇದೆ. ಝಕಾತ್ ಯಾರಿಗೆ ಕೊಡಬೇಕು ಎಂದು ಮೇಲೆ ತಿಳಿಸಿದ್ದು, ಈ ವಿಷಯದಲ್ಲಿ ನಿರ್ಲಕ್ಷ್ಯ ತೋರುವುದು ಸತ್ಯವಿಶ್ವಾಸಿಯ ಲಕ್ಷಣವಲ್ಲ.

ವಾಗ್ದಾನ ಪೂರೈಸುವುದು ಕೂಡಾ ಸತ್ಯವಿಶ್ವಾಸಿಯ ಗುಣ ಲಕ್ಷಣಗಳಲ್ಲಿ ಪ್ರಾಮುಖ್ಯವಾದುದು. ಇದನ್ನೂ ಶ್ರದ್ಧೆಯಿಂದ ಪಾಲಿಸಬೇಕು.

ಕಷ್ಟ ಕಾರ್ಪಣ್ಯ ಮಾತ್ರವಲ್ಲ, ಯುದ್ಧದಂಥ ಕ್ಲಿಷ್ಟಕರ ಸಂದರ್ಭದಲ್ಲೂ ಸಹನೆ ವಹಿಸುವುದು ಧರ್ಮಶೀಲತೆ ಎಂದು ಇಲ್ಲಿ ಅಲ್ಲಾಹು ಹೇಳಿದ್ದಾನೆ.

ಈ ಎಲ್ಲ ಗುಣಗಳುಳ್ಳವರೇ ಮುತ್ತಖೀಗಳು ಅಥವಾ ಸತ್ಯಸಂಧರು. ಇವರೇ ಧರ್ಮನಿಷ್ಠರು ಎಂದು ಸೂಕ್ತದ ಕೊನೆಯಲ್ಲಿ ಒತ್ತು ನೀಡಿ ಹೇಳಲಾಗಿದೆ.

– ಪವಿತ್ರ ಕುರ್‌ಆನನ್ನು ಅರ್ಥೈಸಿ ಓದಲು, ಬದುಕಿನಲ್ಲಿ ಅಳವಡಿಸಲು ಅಲ್ಲಾಹು ತೌಫೀಕ್ ನೀಡಲಿ. ಆಮೀನ್. ■

ವಿಶ್ವದ ಅತ್ಯುತ್ತಮ ವಿಜ್ಞಾನಿಗಳ ಪಟ್ಟಿಯಲ್ಲಿ ದಕ್ಷಿಣ ಕನ್ನಡದ

ಡಾ. ಅಬ್ದುಲ್ ರಹಿಮಾನ್ ಬೇಗ್

ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾನಿಲಯ ನಡೆಸಿದ ಜಾಗತಿಕ ಸಮೀಕ್ಷೆಯಲ್ಲಿ ಬಂಟ್ವಾಳ ತಾಲೂಕಿನ ವಿಟ್ಲದ ಡಾ. ಅಬ್ದುಲ್ ರಹಿಮಾನ್ ಬೇಗ್ ಜಗತ್ತಿನ ಅತ್ಯುತ್ತಮ ವಿಜ್ಞಾನಿಗಳ ಪಟ್ಟಿಯಲ್ಲಿ ಓರ್ವರಾಗಿ ಸ್ಥಾನ ಪಡೆದಿದ್ದಾರೆ.

ಅಬುಧಾಬಿಯ ಖಲೀಫಾ ಯುನಿವರ್ಸಿಟಿ ಆಫ್ ಸಾಯನ್ಸ್ ಆ್ಯಂಡ್ ಟೆಕ್ನಾಲಜಿಯಲ್ಲಿ ಇಲೆಕ್ಟ್ರಿಕಲ್ ಇಂಜಿನಿಯರಿಂಗ್ ಆ್ಯಂಡ್ ಕಂಪ್ಯೂಟರ್ ಸಯನ್ಸ್ ವಿಭಾಗದ ಅಸೋಸಿಯೇಟ್ ಪ್ರೊಫೆಸರ್ ಆಗಿದ್ದಾರೆ. ಖಲೀಫಾ ವಿಶ್ವವಿದ್ಯಾನಿಲಯದ 30 ಪ್ರೊಫೆಸರ್‌ಗಳ ಪೈಕಿ ಬೇಗ್ ಈ ಪಟ್ಟಿಯಲ್ಲಿ ಸ್ಥಾನ ಪಡೆದ ಏಕೈಕ ಭಾರತೀಯ ಪ್ರೊಫೆಸರ್ ಆಗಿದ್ದಾರೆ. ಮೊದಲು ಅವರು ಮಂಗಳೂರಿನ ಸುರತ್ಕಲ್‌ನ NITK ಯಲ್ಲಿ ಸಹಾಯಕ ಪ್ರೊಫೆಸರ್ ಆಗಿದ್ದರು. 1989 ರಿಂದ 1992 ರ ತನಕ ಮೈಸೂರಿನ ಕಿರ್ಲೋಸ್ಕರ್ ಇಲೆಕ್ಟ್ರಿಕ್ ಕಂಪೆನಿಯ R.D. ವಿಭಾಗದಲ್ಲೂ ಸೇವೆ ಸಲ್ಲಿಸಿದ್ದರು. ಅವರ 70ಕ್ಕೂ ಅಧಿಕ ಉನ್ನತ ಮಟ್ಟದ ವೈಜ್ಞಾನಿಕ ಲೇಖನಗಳು IEEE ಜರ್ನಲ್‌ಗಳಲ್ಲಿ ಪ್ರಕಟವಾಗಿದ್ದು 80 IEEE ಅಂತರ್‌ರಾಷ್ಟ್ರೀಯ ಸಮ್ಮೇಳನದಲ್ಲಿ ತಮ್ಮ ಪ್ರಬಂಧಗಳನ್ನು ಮಂಡಿಸಿದ್ದಾರೆ.

ಪ್ರಶಸ್ತಿಗಳು

2011ರಲ್ಲಿ ರಿಸರ್ಚ್ ಅವಾರ್ಡ್ ಹಾಗೂ 2009ರಲ್ಲಿ ಯಂಗ್ ಟೀಚರ್ ಅವಾರ್ಡ್ ಪಡೆದಿರುತ್ತಾರೆ. ಡಾ. ಬೇಗ್‌ರ ಪಿಎಚ್‌ಡಿ ಪ್ರಬಂಧವು 2005ರಲ್ಲಿ ಹೊಸ ದಿಲ್ಲಿಯ ಇಂಡಿಯನ್ ನ್ಯಾಷನಲ್ ಅಕಾಡೆಮಿ ಆಫ್ ಇಂಜಿನಿಯರ್ಸ್ ನ್ಯಾಶನಲ್ ಅವಾರ್ಡ್‌ನಲ್ಲಿ ಪ್ರಥಮ ಸ್ಥಾನ ಪಡೆದಿದೆ. 1998ರಲ್ಲಿ ಇಲೆಕ್ಟ್ರಾನಿಕಲ್ / ಇಲೆಕ್ಟ್ರಿಕಲ್ ಇಂಜಿನಿಯರಿಂಗ್‌ನಲ್ಲಿ ಎಲ್‌ಟಿ–ಐಎಸ್‌ಟಿಇ ನ್ಯಾಷನಲ್ ಅವಾರ್ಡ್‌ನಲ್ಲಿ ಪ್ರಥಮ ಸ್ಥಾನ ಪಡೆದರು.

2003ರಲ್ಲಿ ಅಮೇರಿಕಾದ ವರ್ಜೀನಿಯಾದ ರೋನೋಕೆ ಎಂಬಲ್ಲಿ ಸಂಶೋಧನಾ ಪ್ರಬಂಧಕ್ಕೆ ಸ್ಟೂಡೆಂಟ್ ಅವಾರ್ಡ್ ಮತ್ತು ಅತ್ಯುತ್ತಮ ಪ್ರೆಸೆಂಟೇಶನ್ ಅವಾರ್ಡ್ ಪಡೆದಿದೆ.

ಕಿರ್ಲೋಸ್ಕರ್‌ನಲ್ಲಿ ಅವರು ಹೊಸ ದಿಲ್ಲಿಯ IEEMA ಇದರ ಬೆಟ್ಟ್ ಇಂಡಿಜಿನಸ್ ಆರ್‌ಡಿ ಪ್ರಾಡಕ್ಟ್ ಪ್ರಶಸ್ತಿ ಪಡೆದಿದ್ದಾರೆ. ■

ಅಬ್ದುಸ್ಸಲಾಮ್ ದೇರಳಕಟ್ಟೆ ಅವರಿಗೆ

ಮುಸ್ಲಿಮ್ ಸಾಹಿತ್ಯ ಪ್ರಶಸ್ತಿ ಪ್ರದಾನ ಕಾರ್ಯಕ್ರಮ

ಮಂಗಳೂರು: ಸಹಜವಾದ ಪ್ರಕ್ರಿಯೆಯೊಂದು ಅಸಹಜ ವಾಗಿ ಕಾಡಿದಾಗಲೇ ಬರಹ ರೂಪು ಗೊಳ್ಳಲಿದೆ ಎಂದು ಹಂಪಿ ಕನ್ನಡ ವಿವಿಯ ನಿವೃತ್ತ ಪ್ರಾಧ್ಯಾಪಕ ಡಾ. ಚಂದ್ರ ಪೂಜಾರಿ ಅಭಿಪ್ರಾಯಪಟ್ಟರು.

ಮುಸ್ಲಿಮ್ ಬರಹಗಾರರ ಅತ್ಯುತ್ತಮ ಕೃತಿಗೆ ಮುಸ್ಲಿಮ್ ಲೇಖಕರ ಸಂಘ ನೀಡುವ 2018ನೇ ಸಾಲಿನ ರಾಜ್ಯ ಮಟ್ಟದ ದಿ. ಯು.ಟಿ. ಫರೀದ್ ಸ್ಮರಣಾರ್ಥ ನಗರದ ಸಹಕಾರಿ ಸದನದ ಶಾಂತಿ ಪ್ರಕಾಶನ ಸಭಾಂಗಣದಲ್ಲಿ ಶುಕ್ರವಾರ ನಡೆದ 'ಮುಸ್ಲಿಮ್ ಸಾಹಿತ್ಯ ಪ್ರಶಸ್ತಿ' ಪ್ರದಾನ ಕಾರ್ಯ ಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡುತ್ತಿದ್ದರು.

ಮಾತು ಸುಲಭ. ಆದರೆ, ಬರಹ ಕಷ್ಟ. ಹಾಗಾಗಿ ಒಬ್ಬ ಲೇಖಕ ಅಥವಾ ಲೇಖಕಿ ಯಾಕೆ ಬರೆಯ ಬೇಕು ಎಂಬ ಪ್ರಶ್ನೆ ಸಾಮಾನ್ಯವಾಗಿ ಹುಟ್ಟುತ್ತದೆ. ಸಮಾಜದ ಆಗು ಹೋಗುಗಳನ್ನು ಕಂಡು ಕೆಲವರಿಗೆ ಅದು ಸಹಜ ಅಂತ ಅನಿಸಬಹುದು. ಆದರೆ, ಯಾರಿಗೆ ಅದು ಅಸಹಜ ಅಂತ ಕಾಡಲು ಆರಂಭಿಸು ತ್ತದೆಯೋ ಆವಾಗ ಅವರಲ್ಲಿ ಬರಹದ ತುಡಿತ ಶುರುವಾಗುತ್ತದೆ. ಹೀಗೆ ತುಡಿತವಿದ್ದಾಗಲೇ ಅದು ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಲ್ಲಿ ಹೊರಹೊಮ್ಮ ಲಿದೆ ಎಂದು ಡಾ. ಚಂದ್ರಪೂಜಾರಿ ನುಡಿದರು.

ಕರಾವಳಿಯ ಮಟ್ಟಿಗೆ ಕೋಮುವಾದ, ಅಸ್ಪೃಶ್ಯತೆ ಸಹಜ ಪ್ರಕ್ರಿಯೆಯಂತೆ ಕಂಡು ಬಂದರೂ ಅದರ ನೋವುಂಡ ಬರಹಗಾರರಲ್ಲಿ ಬರೆಯುವ ತುಡಿತ ಇದ್ದೇ ಇದೆ. ಬರೆಯುವುದು ಪ್ರತಿಭಟನೆಯ ಅಸ್ತ್ರ ವಾಗಿದೆ. ಮತ್ತೊಬ್ಬರ ಪ್ರಜ್ಞೆ ಯನ್ನು ಪ್ರಭಾವಿಸುವ ಕಲೆ ಬರಹಕ್ಕಿದೆ ಎಂಬುದನ್ನು ನಾವು ಅರ್ಥ ಮಾಡಿ ಕೊಳ್ಳಬೇಕಿದೆ ಎಂದ ಚಂದ್ರ ಪೂಜಾರಿ, ಹಿಂದೆ ಕರಾವಳಿಯಲ್ಲಿ ದಲಿತರು ಮಾತ್ರ ಅಸ್ಪೃಶ್ಯರಾಗಿರಲಿಲ್ಲ. ಬಿಲ್ಲವರೂ ಅಸ್ಪೃಶ್ಯರಾಗಿದ್ದರು ಎಂಬುದನ್ನು ಮರೆಯಲು ಸಾಧ್ಯವಿಲ್ಲ ಎಂದರು.

ಪ್ರಶಸ್ತಿ ಪ್ರದಾನ:

ಲೇಖಕ ಅಬ್ದುಲ್ ಸಲಾಂ ದೇರಳಕಟ್ಟೆ ಬರೆದ 'ಮರೀಚಿಕೆ' ಕೃತಿಗೆ 2018ನೇ ಸಾಲಿನ ಮುಸ್ಲಿಮ್ ಸಾಹಿತ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು. ಅಬ್ದುಲ್ ಸಲಾಮ್ ಈ ಪ್ರಶಸ್ತಿಯನ್ನು ಇತ್ತೀಚೆಗೆ ನಿಧನರಾದ ಸಾಮಾಜಿಕ ಕಾರ್ಯಕರ್ತ ಮುಹಮ್ಮದ್ ಕೆ. ಅವರಿಗೆ ಸಮರ್ಪಿಸಿದರು. ಅಲ್ಲದೆ ಪ್ರಶಸ್ತಿಯ ನಗದು 10 ಸಾವಿರ ರೂ.ಯನ್ನು ಪ್ರತಿಭಾ ನ್ವಿತ ವಿದ್ಯಾರ್ಥಿನಿ ಫಾತಿಮಾ ಸಾನ್ವಿ ಅವರಿಗೆ ಹಸ್ತಾಂತರಿಸಿದರು.

ಮುಸ್ಲಿಮ್ ಲೇಖಕರ ಸಂಘದ ಅಧ್ಯಕ್ಷ ಉಮರ್ ಯು.ಎಚ್. ಅಧ್ಯಕ್ಷತೆ ವಹಿಸಿ ಮಾತನಾಡಿದರು. ■

ಹದಿಹರೆಯ– ಪೋಷಕರಿಗೊಂದು ಸವಾಲು

(46ನೇ ಪುಟದಿಂದ)

ಬರುವ ಪ್ರಯತ್ನ ನಡೆಯುತ್ತದೆ. ಸ್ವವ್ಯಕ್ತಿತ್ವವನ್ನು ಗುರುತಿಸಿಕೊಳ್ಳುವ ಪ್ರಯತ್ನವೆಂದು ಹೇಳಬಹುದು. ಸ್ವವ್ಯಕ್ತಿತ್ವವನ್ನು ಅಸ್ಮಿತೆಯಂತಲೂ ಕರೆಯುತ್ತಾರೆ.

ಮಗುವಾಗಿದ್ದಾಗಿನ ಬೆಳವಣಿಗೆ, ನಂಬಿಕೆ, ವಿಶ್ವಾಸ, ಬಾಲ್ಯದ ದಿನಗಳಾದ ನರ್ಸರಿಯಲ್ಲಿ ಹಾಗೂ ಶಾಲೆಯಲ್ಲಿ ಸಿಕ್ಕಿದ ಸ್ವಾತಂತ್ರ, ಇವೆಲ್ಲವೂ ಅಸ್ಮಿತೆ ರೂಪುಗೊಳ್ಳುವಲ್ಲಿ ಕಾರ್ಯ ನಿರ್ವಹಿಸುತ್ತದೆ.

ಕೆಲವು ಹದಿಹರೆಯದವರು ಈ ಬಿಕ್ಕಟ್ಟಿಗೆ ಒಳಪಡದೇ ಇರುತ್ತಾರೆ. ಇವರ ಪೋಷಕರು ಹಾಕಿ ಕೊಟ್ಟ ದಾರಿಯಲ್ಲಿ ನಡೆಯುತ್ತಾರೆ. ಇನ್ನು ಕೆಲವರು ಈ ಸಂಕ್ರಮಣ ಕಾಲದಲ್ಲಿ ಹೆಚ್ಚು ಕಷ್ಟ ಪಡುತ್ತಾರೆ. ಆದರೂ ತಮ್ಮ ವ್ಯಕ್ತಿತ್ವದ ಹುಡುಕಾಟದಲ್ಲಿ ಸಫಲರಾಗುತ್ತಾರೆ. ಇನ್ನು ಕೆಲವರು ಸುಲಭವಾಗಿಯೇ ದಾರಿ ಕಂಡುಕೊಳ್ಳುತ್ತಾರೆ. ತಮ್ಮನ್ನು ಗುರುತಿಸಿಕೊಳ್ಳಲು ದೃಢಸಂಕಲ್ಪ ಮತ್ತು ಹುಡುಕಾಟದ ಮನೋಭಾವನೆಗಳು ಇದ್ದರೆ ಸಾಕು. ಸಾಮಾನ್ಯವಾಗಿ ಒಮ್ಮೆ ಹದಿಹರೆಯ ಮುಗಿಯುವ ಒಂದು ಹಂತದಲ್ಲಿ ಅವರು ತಮ್ಮ ಅಸ್ಮಿತೆಯನ್ನು ಕಂಡುಕೊಳ್ಳುತ್ತಾರೆ. ಆಗ ಅವರ ಜೀವನ ಸುಗಮವಾಗುತ್ತದೆ. ಇಲ್ಲಿ ಪೋಷಕರ ಭಾವನಾತ್ಮಕ ಬೆಂಬಲ ಮತ್ತು ಮಕ್ಕಳ ಬಗ್ಗೆ ವಿಶ್ವಾಸ ಬಹಳ ಮುಖ್ಯ.

ಹಲವು ಬಾರಿ ಪೋಷಕರ ಮತ್ತು ಮಕ್ಕಳ ಮಧ್ಯೆ ಭಿನ್ನಾಭಿಪ್ರಾಯ ಬರುವುದು ಸಹಜ, ನಮಗೆ ಗೊತ್ತಾಗಿದೆ. ಪರಸ್ಪರ ತೃಪ್ತಿಕರವಾದ ಸಂಬಂಧ ಕಷ್ಟ, ಇದನ್ನು ಪೋಷಕರು ತಿಳಿದುಕೊಂಡು, ಕೆಲವೊಮ್ಮೆ ತಟಸ್ಥರಾಗುವುದು ಉತ್ತಮ. ಇದರ ಅರ್ಥ, ಅವರನ್ನು ಅಲಕ್ಷ್ಯ ಮಾಡಿಯೆಂದಲ್ಲ. ಮಾಮೂಲು ಮಾತುಕತೆ ಮುಂದುವರಿಸಿ, ಸಮಯ ಬಂದಾಗ ಸ್ಪಂದಿಸಿ, ಇಲ್ಲವಾದರೆ ಗಮನಿಸುತ್ತಿರಿ.

ನಿಮ್ಮ ನಡುವೆಯಿರುವ ಭಿನ್ನ ಅಭಿಪ್ರಾಯಗಳಿಗೆ ಮಧ್ಯೆ ಸೇತುವೆಯೊಂದು ಬೇಕು. ಮಕ್ಕಳ ಹೊಸ ಆಸಕ್ತಿಯಲ್ಲಿ, ಪೋಷಕರು ಆಸಕ್ತಿ ತೋರಿಸುವುದೇ ಸಂಬಂಧ ಸರಿದೂಗಿಸುವ ಉತ್ತಮ ಮಾರ್ಗ. ಮಕ್ಕಳಲ್ಲಿರುವ ಆಸಕ್ತಿಗಳನ್ನು ನೋಡಿ, ಮಕ್ಕಳನ್ನೇ ಕೇಳಿ, ನೀನು ಏನ್ನನ್ನ ಕಲಿತಿದೆಯಾ, ಹೇಗನ್ನಿಸುತ್ತದೆ, ನಿನ್ನ ಪ್ಲಾನ್ ಏನೇನಂತ ಹೇಳು, ನಮಗೂ ತಿಳಿದುಕೊಳ್ಳುವ ಆಸಕ್ತಿಯಿದೆ ಅಂತ ಹೇಳಿ. ಇದರಿಂದ ಮಕ್ಕಳ ಆತ್ಮ ಗೌರವ ಹೆಚ್ಚುತ್ತೆ. ಅವರು ಹೇಳುವಾಗ, ನೀವು ಅವರನ್ನು ಅರ್ಥ ಮಾಡಿಕೊಳ್ಳ

ಬಹುದು. ಅವರು ಸರಿಯಾಗಿ ಮಾಡಿದ ಕೆಲಸ ಚಿಕ್ಕದಾಗಿದ್ದರೂ ಪ್ರಶಂಸಿಸಿ.

2. ತಪ್ಪು–ಸರಿಯೆಂಬ ಎರಡು ಅಕ್ಷರದ ಮಂತ್ರವನ್ನು ಯಾವಾಗಲೂ ಜಪಿಸಬೇಡಿ (ನಾನ್ ಜಡ್ಜಮೆಂಟಲ್). ಅವರ ಮಾತನ್ನು ಕಣ್ಣಲ್ಲಿ ಕಣ್ಣಿಟ್ಟು ಕಿವಿಯಿಂದ ಆಲಿಸಿ, ಅವರು ನಿರೀಕ್ಷಿಸಿದಂತೆ ಕೆಲಸಗಳು ಆಗಿರುವುದಿಲ್ಲ, ತಪ್ಪು ಕಲ್ಪನೆ, ತಪ್ಪುಗಳು, ತಪ್ಪು ಕೆಲಸಗಳು ಆಗಿರಬಹುದು. ಇವುಗಳಿಂದಾಗಿ ಅವರು ಹತಾಶರಾಗಿರುತ್ತಾರೆ. ಆಗ ಪೋಷಕರಾದ ನೀವು, ಋಣಾತ್ಮಕ ಭಾವನೆ ತೋರಿಸಿ, ಮಗನನ್ನು ದೂಷಿಸಿದರೆ ಏನೂ ಸಹಾಯ ಆಗುವುದಿಲ್ಲ. ಬದಲಾಗಿ ಅವನು ತನ್ನ ನಿಲುವನ್ನೇ ಸಮರ್ಥಿಸಿಕೊಳ್ಳುತ್ತಾನೆ, ನಿಮ್ಮ ಮೇಲೇ ಸಿಟ್ಟಾಗುತ್ತಾನೆ. ಅವನನ್ನು ವೈಯಕ್ತಿಕವಾಗಿ ಹೀಯಾಳಿಸ ಬೇಡಿ, ತಿರಸ್ಕಾರ, ಮೂದಲಿಕೆ ಯಾವಾಗಲೂ ಭಾವನಾತ್ಮಕ ಸಂಬಂಧ ಉಳಿಸಿಕೊಳ್ಳಿ, ಯಾವುದೇ ಸಂದರ್ಭದಲ್ಲಿಯೂ ನಿಮ್ಮ ಬೆಂಬಲವೂ ಸದಾ ಅವರಿಗೆ ಸಿಗುತ್ತದೆಯೆಂಬ ಭಾವನೆ ಅವರಲ್ಲಿರಲಿ. ಸಂಸ್ಕೃತದಲ್ಲಿ ಒಂದು ಸುಭಾಷಿತವಿದೆ ನೆನಪಾಗುತ್ತಿದೆ. 16 ವರ್ಷದ ಮಕ್ಕಳನ್ನು ಪಾಲಕರು ಸ್ನೇಹಿತರಂತೆ ನಡೆಸಿಕೊಳ್ಳಬೇಕು.

4. ಹದಿಹರೆಯದವರು ತುಂಬಾ ಅಪಾಯಕಾರಿ ಕೆಲಸದಲ್ಲಿ ತೊಡಗುತ್ತಿದ್ದರೆ, ಆಕ್ರಮಣಕಾರಿ ಆಥವಾ ಸ್ವಯಂ ಘಾಸಿಗೊಳಿಸಿಕೊಳ್ಳುವ ವರ್ತನೆಯಿದ್ದರೆ, ಅಪರಾಧ ಎಸಗುವ ಕೃತ್ಯದಲ್ಲಿ ತೊಡಗುತ್ತಿದ್ದಾರೆ ಅನ್ನಿಸಿದರೆ ಮತ್ತು ಈ ವರ್ತನೆಗಳನ್ನು ಪೋಷಕ, ಶಿಕ್ಷಕರಿಂದ ತಡೆಯಲಾಗಲಿಲ್ಲ ವೆಂದರೆ, ಆಪ್ತ ಸಮಾಲೋಚಕರನ್ನು ಸಂಪರ್ಕಿಸುವುದು ಉತ್ತಮ. ■

ಆಯ್ಕೆಗಳನ್ನು ತಿಳಿಸಿ. ಅವರ ಉತ್ತಮವಾದ ಗುಣವನ್ನು ಪ್ರಶಂಸಿಸಿ. ಸಂಪರ್ಕವನ್ನು ಇಟ್ಟೊಳ್ಳಿ.

3. ಅವರು ಸಮಸ್ಯೆಯ ಪರಿಹಾರಕ್ಕೆ ಬಂದಾಗ, ನಿರ್ದಿಷ್ಟ ವಿಷಯಕ್ಕೆ ಮಾತ್ರ ಮಾತನಾಡಿ. ಒಟ್ಟಾರೆ ಒಂದು ಟೀಕೆ ಅಥವಾ ಸಮಾರೋಪ ಭಾಷಣ ಬೇಡ. ಅವರು ಏನು ತೊಂದರೆ ಹೇಳಿದ್ದಾರೆ, ಅದಕ್ಕೆ ಪರಿಹಾರ ಸಾಧ್ಯವಾದರೆ, ವಿಚಾರ ಮಾಡಿ, ಯಾಕೆ ಮತ್ತು ಹೇಗೆ ಸಹಾಯವಾಗುತ್ತೆಂದು ವಿವರಿಸಿ. ವಾದ ವಿವಾದಗಳನ್ನು ಸಂವಹನ ಎಂದು ಪರಿಗಣಿಸಿ.

ಕಾವಿಯೊಳಗಿರುವ ಆಧ್ಯಾತ್ಮಿಕ ಚೈತನ್ಯ- ಇದು ಜ್ಞಾನಭಂಡಾರ

■ ಅಬ್ದುಲ್ ಸಲಾಮ್,
ದೇರಳಕಟ್ಟೆ ■

ಇತಿಹಾಸದುದ್ದಕ್ಕೂ ಹಾದುಹೋದ ಪ್ರವಾದಿಗಳು, ಮಹಾಪುರುಷರು, ಸಾಧು ಸಂತರು, ಋಷಿ ಮುನಿಗಳು ಹಾಗೂ ಸಮಾಜ ಸುಧಾರಕರು ಸಮಾಜದಲ್ಲಿರುವ ಕೆಡುಕುಗಳನ್ನು ನಿರ್ಮೂಲನಗೊಳಿಸಿ ಒಳಿತನ್ನು ಸಂಸ್ಥಾಪಿಸಲು ಆಗಮಿಸಿದ್ದರು. ಸಮಾಜದಲ್ಲಿರುವ ಕೆಡುಕಿಗೆ ಆಸ್ಪದವಾಗುವ ಸನ್ನಿವೇಶವನ್ನು ಮನಗಂಡು ಅದನ್ನು ತಿದ್ದಿ ಸರಿಪಡಿಸಲು ಪ್ರಯತ್ನಪಟ್ಟಿದ್ದರು. ಇಲ್ಲಿ ಪ್ರಸ್ತಾಪಿಸುತ್ತಿರುವ ಓರ್ವ ಸಮಾಜ ಸುಧಾರಕ ಪ್ರಸಕ್ತ ಸಮಾಜವನ್ನು ಒಳಿತಿನ ಮೂಲಕ ಜೀವಂತವಾಗಿರಿಸಲು ಪ್ರಯತ್ನ ಪಡುತ್ತಿರುವ ಆಧ್ಯಾತ್ಮಿಕ ಚೈತನ್ಯ, ಸ್ವಾಮೀ ಆತ್ಮದಾಸ್ ಯಮಿ. ಮುಂದೆ ಓದಿ..

ಮಾನವ ಇತಿಹಾಸದಲ್ಲಿ ಧರ್ಮಕ್ಕೆ ಅದರದೇ ಆದ ಪ್ರಾಮುಖ್ಯತೆ ಇದೆ. ಮೊದಲು ಮನುಷ್ಯ ಹುಟ್ಟಿದನೋ ಅಥವಾ ಧರ್ಮ ಹುಟ್ಟಿತೋ ಎಂಬ ವಿಷಯ ಕೆಲವೊಮ್ಮೆ ಚರ್ಚೆಗೆ ಗ್ರಾಸವಾಗುವುದಿದೆ. ಅದಕ್ಕೆ ಉತ್ತರ ಮೊದಲು ಮನುಷ್ಯನನ್ನು ಸೃಷ್ಟಿಸಲಾಯಿತು ಮತ್ತು ತದನಂತರ ಮನುಷ್ಯನು ಧರ್ಮವನ್ನು ಹುಟ್ಟು ಹಾಕಿದನು ಎಂಬುದೇ ಆಗಿದೆ. ದೇವನೊಬ್ಬನು ಮನುಷ್ಯನನ್ನು ಸೃಷ್ಟಿಸಿದನು ಮತ್ತು ಮನುಷ್ಯನು ಹಲವು ದೇವರುಗಳನ್ನು ಸೃಷ್ಟಿಸಿದನು ಮತ್ತು ಹಲವು ಧರ್ಮಗಳನ್ನು ಹುಟ್ಟು ಹಾಕಿದನು. ಆದರೆ ಇತಿಹಾಸವನ್ನು ನಾವು ತದಕಿದರೆ, ಗತಿಸಿಹೋದ ಪ್ರವಾದಿಗಳಾಗಲಿ ಅಥವಾ ಮಹಾಪುರುಷರಾಗಲಿ ಕಾಲಕ್ಕೆ ತಕ್ಕಂತೆ ವಿವಿಧ ಧರ್ಮಗಳನ್ನು ರೂಪಿಸಲು ಬಂದವರಲ್ಲ. ಬದಲಾಗಿ ದೇವನ ಆಜ್ಞೆಯನ್ನು ಪಾಲಿಸಿ ಅದನ್ನು ಸಮುದಾಯಕ್ಕೆ ವ್ಯಾಪಿಸಲು ಮತ್ತು ಆ ಮೂಲಕ ಸಮಾಜವನ್ನು ಸುಧಾರಣೆಗೊಳಿಸಲು ಆಗಮಿಸಿದ್ದರೆಂಬುದನ್ನು ನಮಗೆ ಕಾಣಬಹುದು.

ಆಧುನಿಕತೆಯ ಸೋಗಿಗೆ ಮಾರು ಹೋದ, ಸುಖಲೋಲುಪತೆ ಮತ್ತು ಸ್ವಹಿತಾಸಕ್ತಿಗಾಗಿ ಧರ್ಮವನ್ನು ಅಡವಿಟ್ಟ, ಜನರನ್ನು ತಿದ್ದಿ ತೀಡಿ ಸರಿಪಡಿಸಬೇಕಾದ ಧಾರ್ಮಿಕ ವಿದ್ವಾಂಸರು, ಮುಲ್ಲಾಗಳು,

ಪಾದ್ರಿಗಳು ಮತ್ತು ಸ್ವಾಮಿಗಳು ಮತ್ತು ತಾವು ಸನ್ಯಾಸಿಗಳು ಹಾಗೂ ದೇವ ಮಾನವರೆಂದು ಸ್ವತಃ ಬಿಂಬಿಸುವವರು ಇಂದು ವ್ಯಾಪಕವಾಗಿ ಅಪಹಾಸ್ಯಕ್ಕೆ ಗುರಿಯಾಗುವುದಿದೆ. ಅದಕ್ಕೆ ಕಾರಣ ಧಾರ್ಮಿಕ ಜ್ಞಾನದ ಕೊರತೆ ಮತ್ತು ಧರ್ಮದ ಮುಖಮುದ್ರೆಯನ್ನು ಲೇಪಿಸುವ ಮೂಲಕ ತಾನೊಬ್ಬ ಸುಧಾರಕನೆಂದು ಕಂಡರೂ ವಾಸ್ತವದಲ್ಲಿ ಅವರು ಆ ಗುಣಮಟ್ಟಕ್ಕೆ ತಲುಪಿದವರಲ್ಲ. ಅವರನ್ನು ಪವಿತ್ರ ಕುರ್‌ಆನ್ ಬಹಳ ಕಟುವಾಗಿ ಈ ರೀತಿ ವಿಮರ್ಶಿಸಿತು. ನೀವು ಮಾಡ ದ್ದನ್ನು ಆಡುತ್ತೀರೇಕೆ? ಮಾಡದ್ದನ್ನು ಆಡುವುದು ಸೃಷ್ಟಿಕರ್ತನ ಬಳಿ ಅತ್ಯಂತ ಅಪ್ರಿಯ ಕೃತ್ಯವಾಗಿದೆ. (61:2) ಆದ್ದ ರಿಂದಲೇ ಆಡುವುದೊಂದು ಮತ್ತು ಮಾಡುವುದು ಇನ್ನೊಂದಾದರೆ ಅಥವಾ ಆಡುವುದಕ್ಕೂ ಮಾಡುವುದಕ್ಕೂ ಅಜ ಗಜಾಂತರ ವ್ಯತ್ಯಾಸವಿದ್ದರೆ ಸಮಾಜದಲ್ಲಿ ಅಪಹಾಸ್ಯಕ್ಕೆ ಗುರಿಯಾಗುವುದು ಅಥವಾ ನಗೆಪಾಟಲಿಗೀಡಾವುದು ಸಹಜ.

ಮನುಷ್ಯನಿಗೆ ಜೀವಿಸಲು ಧರ್ಮದ ಅಗತ್ಯವಿದೆಯೇ ಎಂದು ಕೇಳಿದರೆ ಖಂಡಿತ ಅಗತ್ಯವಿದೆ. ಏಕೆಂದರೆ ಅವನಿಗೆ ಈ ಭೂಮಿಯಲ್ಲಿ ಬದುಕಲು ಕಲಿಸುವುದೇ ಧರ್ಮ. ಮನುಷ್ಯನನ್ನು ಸೃಷ್ಟಿಸಿ ಅವನಿಗೆ ಉತ್ತಮ ಸಂಸ್ಕಾರ, ಜ್ಞಾನ, ಸದುಪದೇಶ ಮತ್ತು ಸನ್ಮಾರ್ಗದ ದಾರಿಯಲ್ಲಿ ಸಂಚರಿಸಲು ಮತ್ತು ದುರ್ಮಾರ್ಗದ ಹಾದಿಯನ್ನು ತೊರೆಯಲು ಧರ್ಮದ ಮೂಲಕವೇ ತೋರಿಸಿಕೊಡಲಾಗುತ್ತದೆ. ಧಾರ್ಮಿಕತೆಯನ್ನು ಮೈಗೂಡಿಸಿಕೊಂಡ ವಿಶ್ವಾಸಿ ಮತ್ತು ಧಾರ್ಮಿಕತೆಯಲ್ಲಿ ನಂಬಿಕೆ ಯಿಡದ ನಾಸ್ತಿಕ ಇವರಿಬ್ಬರೂ ಪರೋಕ್ಷ ವಾಗಿ ಸಮಾನರಾಗಿದ್ದರೂ ಇವರಿಬ್ಬರಲ್ಲೂ ಅಗಾಧವಾದ ವ್ಯತ್ಯಾಸವಿದೆ. ಏಕೆಂದರೆ, ಅಜ್ಞಾನಿ ಮತ್ತು ಸುಜ್ಞಾನಿ ಸಮಾನರಲ್ಲ. ಕುರುಡನೂ ಕಣ್ಣುಳ್ಳವನೂ ಸಮಾನರಲ್ಲ. ಅಂಧಕಾರವೂ ಪ್ರಕಾಶವೂ ಸಮಾನವಲ್ಲ.

ಈ ನಿಟ್ಟಿನಲ್ಲಿ ಸ್ವಾಮೀ ಆತ್ಮದಾಸ್ ಯಮಿಯ ಕುರಿತು ನಾವು ತಿಳಿಯ ಬೇಕಾದುದು ಬಹಳಷ್ಟಿದೆ. ಸ್ವಾಮೀ ಆತ್ಮಾದಾಸ್ ಯಮಿ ಧರ್ಮಪಕ್ಷ, ಕೇರಳದ ಮಲಪ್ಪುರಮ್ ಜಿಲ್ಲೆಯಲ್ಲಿ ಅಂತರ್ ಧರ್ಮೀಯ (ಕ್ರೈಸ್ತ ತಂದೆ ಮತ್ತು ಹಿಂದೂ ತಾಯಿ) ದಂಪತಿಗಳಿಗೆ ಹುಟ್ಟಿ ಚಿಕ್ಕಂದಿನಿಂದಲೇ ಧರ್ಮದ ಬಗ್ಗೆ ಕಲಿಯುವ ಮತ್ತು ಅಧ್ಯಯನ ನಡೆಸುವ ಆಸಕ್ತಿಯೊಂದಿಗೆ ವಿವಿಧ ಧರ್ಮಗಳ ಬಗ್ಗೆ ಅಧ್ಯಯನ ನಡೆಸಿದುದರ ಪರಿ ಣಾಮ ಕ್ರೈಸ್ತ ಪಾದ್ರಿಯಾಗಿ ತನ್ನ ಬದು ಕನ್ನು ರೂಪಿಸಿಕೊಂಡರು. ಆದಾಗ್ಯೂ ಭಾರತೀಯ ಆಶ್ರಮಗಳಲ್ಲೂ ತನ್ನದೇ ಆದ ಸಾನಿಧ್ಯವನ್ನು ಖಚಿತಪಡಿಸುವಲ್ಲಿ ಗಮನಹರಿಸಿದ್ದರು. ಕಲ್ಲಿಕೋಟೆಯ ಅದ್ವೈತಾಶ್ರಮ, ಮುಂಬೈಯ ಚಿನ್ಮಯ ಮಿಷನ್, ಊಟಿಯ ನಾರಾಯಣ ಗುರು ಕುಲಮ್, ಆರ್ಯ ಸಮಾಜ ವೈಕೋಮ್, ಉಪನಯನಮ್, ಕೊಯಮುತ್ತೂರಿನ ಇಸ್ಕೊನ್, ಮತ್ತು ಕೊನೆಯದಾಗಿ ಕೊಟ್ಟಯಮ್ ನಲ್ಲಿರುವ ತೀರ್ಥಪಾದ ಆಶ್ರಮದಲ್ಲೂ ಗುರು ದಕ್ಷಿಣೆಯನ್ನು ಸ್ವೀಕರಿಸುವ ಮೂಲಕ ತನ್ನ ಜ್ಞಾನ ದಾಹವನ್ನು ತಣಿಸಲು ಪ್ರಯತ್ನಿಸಿದ್ದಾರೆ. ಇವೆಲ್ಲದರ ಮಧ್ಯೆ ಈಜಿಪ್ಟಿಗೆ ತೆರಳಿ ಅಲ್ಲಿಂದ ಖ್ಯಾತ ಸೂಫಿ ಸಂತ ಡಾ. ಮುಖ್ತಾರ್ ಅಲಿ ಅಲ್ ದಸೂಖಿಯಿಂದ ಇಸ್ಲಾಮಿನ ಕುರಿತು ಅಧ್ಯಯನವನ್ನೂ ನಡೆಸಿದ್ದಾರೆ.

ಪವಿತ್ರ ಕುರ್‌ಆನ್, ಪ್ರವಾದಿವರ್ಯರ ಜೀವನ ಮತ್ತು ಇಸ್ಲಾಮಿನ ಬಗ್ಗೆ ಅವರಿಗೆ ಅಗಾಧವಾದ ಜ್ಞಾನವಿದ್ದು ಅದರ ಬೆಳಕಿನಲ್ಲಿ ನಿರರ್ಗಳವಾಗಿ ಪ್ರವಚನ ನೀಡುವಲ್ಲಿ ಯಶಸ್ವಿಯನ್ನು ಕಂಡಿದ್ದಾರೆ. ಇಸ್ಲಾಮಿನ ಧಾರ್ಮಿಕ ವೇದಿಕೆಗಳಲ್ಲಿ ಅವರು ತನ್ನದೇ ಆದ ಛಾಪನ್ನು ಮೂಡಿಸಿದ್ದು, ಯುವ ಪೀಳಿಗೆಯನ್ನು ಸನ್ಮಾರ್ಗದ ಹಾದಿಗೆ ಕೈಹಿಡಿಯುವ ಉದ್ದೇಶದಿಂದಲೇ ಎಷ್ಟು ದೂರವಾದರೂ ಸಂಚರಿಸಿ ಪ್ರವಚನ ನೀಡಲು ಸಿದ್ಧರಿರುವ ಓರ್ವ ಅಪರೂಪದ ವ್ಯಕ್ತಿತ್ವ.

ಧರ್ಮವು ವ್ಯಾಪಾರೀಕರಣಗೊಂಡ ಇಂದಿನ ಸಮಾಜದಲ್ಲಿ ಧಾರ್ಮಿಕ ವಿದ್ವಾಂಸರು ಧರ್ಮದ ಉತ್ಪನ್ನವಾಗಿ ಮಾರ್ಪಾಟುಗೊಂಡಿರುವುದು ನಮಗೆ ಕಾಣಬಹುದು. ಅತ್ಯಂತ ಉತ್ತಮವಾಗಿ ಪ್ರವಚನ ನೀಡುವ ವಿದ್ವಾಂಸರಿಗೆ ಸಮಾಜ ದಲ್ಲಿ ಬಹಳ ಬೇಡಿಕೆಯಿದೆ. ಪ್ರತಿಯೊಂದು ಪ್ರವಚನಕ್ಕೂ ಮುಂಗಡವಾಗಿ ಬುಕ್ಕಿಂಗ್ ಮಾಡಬೇಕಾಗಿ ಬರುತ್ತೆ. ಅವರ ಪ್ರತಿಯೊಂದು ಪ್ರವಚನಕ್ಕೂ ಇಂತಿಷ್ಟು ಮೊತ್ತವನ್ನು ಪಾವತಿಸಬೇಕಾಗುತ್ತೆ ಮತ್ತು ಅದನ್ನು ಭಕ್ತಾದಿಗಳಿಂದ ವಸೂಲಿ ಮಾಡಲಾಗುತ್ತದೆ. ಆದರೆ ಇವೆಲ್ಲದರಲ್ಲೂ ಗಮನಿಸಬೇಕಾದ ವಿಚಾರವೇನೆಂದರೆ ಧಾರ್ಮಿಕ ವಿದ್ಯಾ ಕೇಂದ್ರಗಳಿಂದ ವಿವಿಧ ಬಿರುದುಗಳನ್ನು ಪಡೆದು ಹೊರಬರುತ್ತಿರುವ ವಿದ್ವಾಂಸರುಗಳು ಕೆಡುಕು ತುಂಬಿದ ಸಮಾಜವನ್ನು ತಿದ್ದಿ ಸಂಸ್ಕರಿಸಿ ಕೆಡುಕು ಮುಕ್ತ ಸಮಾಜವಾಗಿ ಪರಿವರ್ತಿಸಲು ಪ್ರಯತ್ನಿಸಿದ ಮತ್ತು ಒಂದು ಮಾದರೀ ಸಮಾಜವನ್ನು ರೂಪಿಸಿ ತೋರಿಸಿ ಗತಿಸಿಹೋದ ಮಹಾಪುರುಷರುಗಳ ಮಾದರಿಯನ್ನು ಅವಲಂಬಿಸಲು ಇಂದಿನ ವಿದ್ವಾಂಸರಿಗೆ ಸಾಧ್ಯವಾಗುತ್ತಿಲ್ಲ.

ನಮ್ಮಲ್ಲಿ ಧಾರ್ಮಿಕ ವಿದ್ಯಾ ಕೇಂದ್ರ ಗಳಿಗೆ ಕೊರತೆಯಿಲ್ಲ. ವಿದ್ವಾಂಸರುಗಳಿಗೂ ಕೊರತೆಯಿಲ್ಲ. ಧರ್ಮದಲ್ಲಿ ನಂಬಿಕೆ ಯಿಡುವ ವಿಶ್ವಾಸಿಗಳಿಗೂ ಕೊರತೆಯಿಲ್ಲ. ಆದರೆ ಸಮಾಜದಲ್ಲಿ ಬೆರಳಣಿಕೆಯಷ್ಟು ಸಂಖ್ಯೆಯಲ್ಲಿರುವ ಧರ್ಮದಲ್ಲಿ ನಂಬಿಕೆ ಯಿಡದ ನಾಸ್ತಿಕವಾದಿಗಳ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರಿಸಬಲ್ಲ ಮತ್ತು ಸಮಾಜ ಸುಧಾರಣೆಯ ಪರಿಕಲ್ಪನೆಯ ಸಂಕಲ್ಪವನ್ನು ಹೊತ್ತ ವಿದ್ವಾಂಸರುಗಳ ಕೊರತೆ ಖಂಡಿತ ಇದೆ. ಇದು ಏಕೆ ಹೀಗಾಯಿತು ಅಥವಾ ನಾವೆಲ್ಲಿ ಎಡ ವಿದ್ದೇವೆಂದು ಕೇಳಿದರೆ ಅದಕ್ಕೆ ಉತ್ತರ, ನಮ್ಮಲ್ಲಿ ಆಳವಾದ ಅಧ್ಯಯನದ ಕೊರತೆ ಮತ್ತು ಸಮಾಜವನ್ನು ಮುನ್ನಡೆಸುವ ಸಮರ್ಪಕವಾದ ನಾಯಕತ್ವದ ಕೊರತೆ ಎದ್ದು ಕಾಣುತ್ತದೆ.

ವೇಷಭೂಷಣವು ಧಾರ್ಮಿಕ ಐಡೆಂಟಿಟಿಯಾಗಿ ಗುರುತಿಸಲ್ಪಡುತ್ತೆ. ಅವರು ಸಮುದಾಯವನ್ನು ಮುನ್ನಡೆಸುವ, ಸಮೂಹಕ್ಕೆ ನಾಯಕತ್ವ ವಹಿಸಲು ಅರ್ಹತೆ ಹೊಂದಿರುವ ವ್ಯಕ್ತಿಗಳಾಗಿ ಗುರುತಿಸ ಲ್ಪಡುತ್ತಾರೆ. ನಿಜವಾಗಿ ಸಮುದಾಯಕ್ಕೆ ನಾಯಕತ್ವ ವಹಿಸಲು ಅರ್ಹತೆ ಹೊಂದ

ಲ್ಪಡುವುದರ ಮಾನದಂಡವು ಜನರೊಡನೆ ಬೆರೆತು, ಜನರ ಕಲ್ಯಾಣಕ್ಕಾಗಿ ದುಡಿಯುವ ಮತ್ತು ಜನಸಾಮಾನ್ಯರನ್ನು ಸದ್ಗುಣ ಸಂಪನ್ನರಾಗಿ ಮಾರ್ಪಾಟುಗೊಳಿಸುವು ದಾಗಿದೆ. ಇದುವೇ ಸಕಲ ಪ್ರವಾದಿಗಳ ಮತ್ತು ಮಹಾ ಪುರುಷರ ಮಾದರಿ.ಈ ಮಾದರಿಯನ್ನು ಅವಲಂಬಿಸುವುದರ ಹೊರತು ಓರ್ವ ಸನ್ಯಾಸಿಗೆ ಅಥವಾ ವಿದ್ವಾಂಸನಿಗೆ ಸಮುದಾಯದ ನಾಯಕತ್ವ ವನ್ನು ವಹಿಸಲು ಸಾಧ್ಯವಿಲ್ಲ.

ಪೌರೋಹಿತ್ಯವು ಧರ್ಮಕ್ಕೆ ಅನ್ಯ. ನಮಗೆ ಧಾರ್ಮಿಕ ರೀತಿ ರಿವಾಜುಗಳನ್ನು ತೋರಿಸಿಕೊಟ್ಟ ಮತ್ತು ಜಗತ್ತಿಗೆ ಸನ್ಮಾರ್ಗದ ಜ್ಯೋತಿಯನ್ನು ಬೆಳಗಿಸಿದ ಪ್ರವಾದಿಯ ಮಾದರಿ ಶಿಕ್ಷಣದಲ್ಲಿ ಪೌರೋಹಿತ್ಯ ವಿದ್ದುದು ಕಂಡುಬರುತ್ತಿಲ್ಲ. ಆದರೆ ಆಧು ನಿಕ ವಿದ್ವಾಂಸರು ತಿಳಿದೋ ತಿಳಿಯ ದೆಯೋ ಪೌರೋಹಿತ್ಯದ ಕಪಿಮುಷ್ಠಿ ಯಲ್ಲಿ ಬಂಧಿಸಲ್ಪಟ್ಟಿದ್ದಾರೆ ಮತ್ತು ಜನ ನಾಯಕರ ತಾಳಕ್ಕೆ ತಕ್ಕಂತೆ ಕುಣಿಯು ತ್ತಿದ್ದಾರೆ. ತತ್ಪರಿಣಾಮವಾಗಿ ಯಾವ ಒಳಿತಿನ ಬೀಜವನ್ನು ಬಿತ್ತಬೇಕಿತ್ತೋ, ಯಾವ ರೀತಿಯಲ್ಲಿ ಸಮಾಜವನ್ನು ಸುಧಾರಿಸಬೇಕಿತ್ತೋ ಅದು ಅವರಿಂದ ಪ್ರಾಯೋಗಿಕವಾಗಿ ಸಾಧ್ಯವಾಗುತ್ತಿಲ್ಲ ವೆಂಬುದು ಒಂದು ದುರಂತ.

ಆದ್ದರಿಂದಲೇ ವಿದ್ವಾಂಸರು ಸುಖ ಲೋಲುಪತೆಯ ಕಡೆಗೆ ಮೈಯೊಡ್ಡಿದಾಗ, ನಿಸ್ವಾರ್ಥ ಸೇವೆಯು ಬದಲಾಗಿ ಸ್ವಾರ್ಥತೆಯ ಕಡೆಗೆ ವಾಲಿದಾಗ, ಸೃಷ್ಟಿಕರ್ತನನ್ನು ಆಶ್ರಯಿಸುವುದರ ಬದಲಿಗೆ ಜನನಾಯಕರ ಕೈಯಾಳಾದಾಗ ಸಹಜ ವಾಗಿ ಅವರಿಂದ ಸಮಾಜಕ್ಕೆ ಅನು ಕರಣೆಯ ಪ್ರತಿಬದ್ಧತೆ ನಷ್ಟಹೊಂದುತ್ತದೆ. ಪರಿಣಾಮವಾಗಿ ಸಮುದಾಯಕ್ಕೆ ಸನ್ಮಾರ್ಗದ ಪ್ರಕಾಶವನ್ನು ಬೀರಲು ಅವರಿಂದ ಸಾಧ್ಯವಾಗಲಾರದು. ನಿಷ್ಕಳಂಕ ವಾದ ಹೃದಯ ವೈಶಾಲ್ಯತೆಯಿರುವ, ಸದ್ಗುಣವಂತರಾದ, ಸಮಾಜವನ್ನು ಮುನ್ನಡೆಸುವ ಪಾಂಡಿತ್ಯವುಳ್ಳ ವಿದ್ವಾಂಸರು ಮತ್ತು ಸಂತರು ಬೆಳೆದು ಬರುವ ಅಗತ್ಯವಿದೆ. ಅವರಲ್ಲಿ ಆಡಂಭರರಹಿತರಾಗಿ, ಸಮಾಜಕ್ಕೆ ವೈವಿಧ್ಯತೆಯ ಕೊಡುಗೆಯನ್ನು ನೀಡಬಲ್ಲ ನೈಪುಣ್ಯತೆ ಇರಬೇಕಾದುದು ಅತೀ ಅಗತ್ಯ. ನಿಜವಾಗಿ ಮಸೀದಿಯಲ್ಲಿ ಪ್ರವಚನ ನೀಡುವ ಖತೀಬರು, ಮಂದಿರದಲ್ಲಿ ಪೂಜೆ ಪುರಸ್ಕಾರಗಳೊಂದಿಗೆ ಭಕ್ತಾದಿಗಳ ಮನ ತಣಿಸುವ ಪೂಜಾರಿ ಮತ್ತು ಕ್ರೈಸ್ತ ಚರ್ಚಿಗಳಲ್ಲಿ ಸಭಾ ಕಾರ್ಯಕ್ರಮವನ್ನು ನಡೆಸಿ ಯೇಸುವಿನ ಸಂದೇಶವನ್ನು ನೀಡುವ ಪಾದ್ರಿಗಳ ಸಂದೇಶಗಳು ಎಷ್ಟು ಜನಸಾಮಾನ್ಯರ ಮನಃಪರಿವರ್ತಿಸಿದೆ ಎಂಬುದು ಪ್ರಶ್ನಾರ್ಹ ವಾಗಿದೆ. ಏಕೆಂದರೆ ಸಮಾಜದ ಸುಧಾ ರಣೆಯಲ್ಲಿ ಇವರುಗಳ ಪರಿಶ್ರಮ ನಿರ್ಣಾಯಕವಾಗಿದೆ. ಈ ನಿಟ್ಟಿನಲ್ಲಿ ಸ್ವಾಮೀ ಆತ್ಮದಾಸರಂತಹ ಮಹಾ ಪುರುಷರಾದ ಮುತ್ತು ರತ್ನಗಳು ಇನ್ನೂ ಹುಟ್ಟಿ ಬರಲಿ. ಆ ಮೂಲಕ ಸಮಾಜವು ಪ್ರಕಾಶಮಯವಾಗಲಿ. ■

ಪ್ರವಾದಿ(ಸ) ಹೇಳಿದರು: "ಅಸೂಯೆಯಿಂದ ದೂರವಿರಿ. ಏಕೆಂದರೆ ಬೆಂಕಿಯು ಕಟ್ಟಿಗೆಯನ್ನು ನುಂಗುವಂತೆ ಅಸೂಯೆಯು ಒಳಿತುಗಳನ್ನು ನುಂಗಿ ಬಿಡುತ್ತದೆ." [ವರದಿ: ಅಬೂಹುರೈರಾ(ರ) – ಅಬೂದಾವೂದ್]

Md. Shafi : 9448274262
Noor Ahmed : 9448093545
Ilyas Ahmed : 9448786055

STD : Code : (0836)
Shop : 2324262
Res : 2223545

ನೋಬಲ್ ಟ್ರೇಡರ್ಸ್

ಉಳ್ಳಾಗಡ್ಡಿ, ಆಲೂಗಡ್ಡಿ ಕಮಿಶನ್ ಏಜೆಂಟ್ಸ್

ಸಿ–8, ಎ.ಪಿ.ಎಂ.ಸಿ. ಯಾರ್ಡ್, ಅಮರಗೋಳ, ಹುಬ್ಬಳ್ಳಿ – 580025

NOBLE TRADERS

ONION, PATATO COMMISION AGENTS

C.8, A.P.M.C. Yard, Amargol, **HUBLI** - 580 025

ಶಿಝಾ ಮರ್ಯಮ್



ಅಕ್ಟೋಪಸ್

ಸಮುದ್ರದ ಅಡಿಯಲ್ಲಿ ಹೊಸದಾಗಿ ಒಂದು ಪ್ಲಾಸ್ಟಿಕ್ ಪರ್ವತ ಹುಟ್ಟಿಕೊಂಡಿತ್ತು. ಅದರ ಸಮೀಪವೇ ಅಕ್ಟೋಪಸ್‌ನ ಮರಿಯ ವಾಸ ಸ್ಥಾನವಿತ್ತು. ತೀರದಿಂದ ಬರುತ್ತಿದ್ದ ಪ್ಲಾಸ್ಟಿಕ್‌ಗಳು ಬಂದು ಬಂದು ರಾಶಿಬಿದ್ದು ಒಂದು ದೊಡ್ಡ ಗುಡ್ಡವಾಗಿ ಪರಿವರ್ತಿತವಾಗಿತ್ತು. ಅಪ್ಪ ಮತ್ತು ಅಮ್ಮ ಆಹಾರ ಹುಡುಕಿಕೊಂಡು ದೂರ ಹೋದಾಗ, ಅಕ್ಟೋಪಸ್ ಮರಿ ಅದರ ಹೆಸರು ಸೆಂಥಿಲ್ ಪ್ಲಾಸ್ಟಿಕ್ ಬಳಿ ಬರುತ್ತಿತ್ತು. ಅಲ್ಲಿರುವ ಪ್ಲಾಸ್ಟಿಕ್ ಕವರುಗಳು, ಬಾಟ್ಲಿಗಳು, ಚೀಲಗಳು ಎಲ್ಲವು ಗಳೊಂದಿಗೆ ಆಟವಾಡುತ್ತಿತ್ತು. ದೊಡ್ಡ ದೊಡ್ಡ ಬಾಟಲಿಗಳೊಳಗೆ ನುಗ್ಗುತ್ತಲೂ, ಸಣ್ಣ ಬಾಟಲಿ ಗಳೊಳಗೆ ತನ್ನ ಶರೀರವನ್ನು ಮುದುಡಿಸಿಕೊಂಡು ಒಳಹೋಗು ವುದು, ಹೊರಬರುವುದು ಮಾಡು ತ್ತಿತ್ತು. ದೊಡ್ಡ ಅಕ್ವೇರಿಯಂನಲ್ಲಿ ಸರ್ಕಸ್ ಮಾಡುವ ಮೀನಿನಂತೆ ಹಲವಾರು ರೀತಿ ವಿಧಾನ, ಆಟ ಗಳನ್ನು ಕಲಿತುಕೊಂಡಿತು. ಪ್ಲಾಸ್ಟಿಕ್ ಚೀಲಗಳೊಂದಿಗೆ ಕೂಡಾ ಏನೆಲ್ಲಾ ಕಸರತ್ತು ಮಾಡುತ್ತಿತ್ತು. ಅದನ್ನು ಕೈಯಲ್ಲಿ ಹಿಡಿದು ಗಿರಗಿರನೇ ತಿರುಗಿಸುತ್ತಾ ವರ್ಣ ಪ್ರಪಂಚವನ್ನೇ ಸೃಷ್ಟಿಸುತ್ತಿತ್ತು. ಒಂದು ದಿನ ಹೀಗೆ ಆಟವಾಡುತ್ತಿರುವಾಗ ತುಂಬಾ ಮೀನುಗಳು ಪ್ಲಾಸ್ಟಿಕ್ ಗುಡ್ಡದ ಬಳಿ ಬಂದು ಅಡಗಿಕೊಳ್ಳುವುದು ಕಂಡಿತು. ಸೆಂಥಿಲ್‌ಗೂ ಭಯ ವಾಯ್ತು. ಅದೂ ಒಂದೆಡೆ ಬಾಟಲಿಯ ಒಳಗೆ ಅಡಗಿ ಕೊಂಡಿತು. ಅದರ ಹಿಂದೆ ಒಂದು ದೊಡ್ಡ ಬಲೆ, ಗುಡ್ಡವನ್ನೆಲ್ಲಾ ಸುತ್ತಾಡಿ ಕೊನೆಗೆ ಮೆಲ್ಲ ಮೆಲ್ಲನೆ ತಾನೂ ಮೇಲೇರುತ್ತಿದ್ದಂತೆ ಸೆಂಥಿಲ್‌ಗೆ ಅನಿಸಿತು. ತಾನೂ ಬಲೆಯಲ್ಲಿ ಸಿಕ್ಕಿಕೊಂಡಿದ್ದೇನೆಂದು ಅದಕ್ಕೆ ತಿಳಿಯಿತು. ಬಲೆಯನ್ನು ಬೋಟ್‌ಗೆ ಹಾಕಿದ ಮೀನುಗಾರ ತೀರ ತಲುಪಿದ ಬಳಿಕ ಬಲೆಯಲ್ಲಿ ಸಿಲುಕಿದ ಬಾಟಲಿಗಳನ್ನು ಒಂದೊಂದಾಗಿ ತೀರಕ್ಕೆ ಎಸೆದ. ಮೀನನ್ನು ಬುಟ್ಟಿಗೆ ಹಾಕಿ ಬೇರೆಯೇ ಇರಿಸಿದ. ಬಾಟಲಿಯ ಒಂದು ಮೂಲೆಯಲ್ಲಿ ಸಣ್ಣದಾಗಿ ಕುಳಿತುಕೊಂಡಿದ್ದ ಸೆಂಥಿಲ್ ಅವರಿಗೆ ಕಾಣಲೇ ಇಲ್ಲ.

ಫಾಯಿಝ್ ತಾಯಿ ಮತ್ತು ತಂದೆಯೊಂದಿಗೆ ಸಮುದ್ರ ತೀರದಲ್ಲಿ ನಡೆಯುತ್ತಿದ್ದಾಗ ಬಾಟಲಿಯ ಒಳಗೆ ಒಂದು ಅಕ್ಟೋಪಸನ್ನು ನೋಡಿದ. ಅದು ಮೆಲ್ಲ ಮೆಲ್ಲನೇ ಹೊರ ಬರಲು ಪ್ರಯತ್ನಿಸುತ್ತಿತ್ತು. ಫಾಯಿಝ್ ನನ್ನು ಕಂಡು ಬಾಟಲಿಯ ಒಳಗೆಯೇ ಸುರುಟಿ ಕುಳಿತಿತು. ಹೆದರಬೇಡ ನಿನ್ನನ್ನು ನಾನು ಮನೆಯ ಅಕ್ವೇರಿಯಂನಲ್ಲಿ ಇರಿಸು ತ್ತೇನೆ ಎಂದು ಹೇಳಿ ಅದನ್ನು ತನ್ನ ಮನೆಗೊಯ್ದು ಅಕ್ವೇರಿಯಂನಲ್ಲಿ ಬಿಟ್ಟು ಅಕ್ವೇರಿಯಂನ ಮೂಲೆಯಲ್ಲಿ ಸೆಂಥಿಲ್ ದುಃಖದಿಂದ ಬಿದ್ದು ಕೊಂಡಿತು. ಸ್ವಲ್ಪ ದಿನ ಕಳೆಯುವಾಗ ಇರುವ ನೀರಿನಲ್ಲಿ ಈಜಿಕೊಂಡು ನಡೆಯಿತು. ಅಕ್ವೇರಿಯಂನ ಮೀನು ಗಳೊಂದಿಗೆ ತನ್ನ ಎಲ್ಲಾ ಕೈಗಳನ್ನು ಹರಟಿಕೊಂಡು ಚಲಿಸಿತು. ಫಾಯಿಝ್ ಅಕ್ವೇರಿಯಂನಲ್ಲಿ ಅವನು ಅದನ್ನು

ಯೂಟ್ಯೂಬ್‌ನಲ್ಲಿ ನೋಡಿದ್ದ.

ಪ್ಲಾಸ್ಟಿಕ್ ಪರ್ವತದಲ್ಲಿ ತಾನು ಆಡುತ್ತಿದ್ದಂತೆ ಇಲ್ಲೂ ಸೆಂಥಿಲ್ ಏನೆಲ್ಲಾ ಸರ್ಕಸ್ ಮಾಡಲು ಆರಂಭಿಸಿದ. ಎಲ್ಲರೂ ಸಂತೋಷ ಗೊಂಡರು. ಆತನ ಸ್ನೇಹಿತರೂ, ನೆರೆಕರೆಯವರೂ ಎಲ್ಲರೂ ಬಂದು ಆಶ್ಚರ್ಯಪಟ್ಟರು. ಎಲ್ಲರೂ ಫಾಯಿಝ್‌ನನ್ನು ಹೊಗಳಿದರು.

ಒಂದು ದಿನ ಸೆಂಥಿಲ್ ಚೆಂಡಿ ನಂತೆ ಮೂಲೆಯಲ್ಲಿ ಕುಳಿತಿತು. ಏನೂ ಮಾಡದೆ, ಮಾತನಾಡದೆ, ಅಲುಗಾಡದೆ ಕುಳಿತಿತು. ಫಾಯಿಝ್ ಏನು ಹೇಳಿದರೂ ಕೇಳಲಿಲ್ಲ. ಯಾರು ಹೇಳಿದ್ದನ್ನೂ ಅದು ಅನುಸರಿಸಲಿಲ್ಲ. ನಂತರ ಸೆಂಥಿಲ್ ಫಾಯಿಝ್‌ನೊಂದಿಗೆ ಏನೋ ಹೇಳುತ್ತಿರುವಂತೆ ಫಾಯಿಝ್‌ಗೆ ಅನಿಸಿತು. "ನನ್ನ ಅಮ್ಮ ಅಪ್ಪನನ್ನು ನೋಡಬೇಕು. ನಾನು ಕಡಲಿಗೆ ಹೋಗುತ್ತೇನೆ" ಎಂದು ಹೇಳುತ್ತಿ ರುವಂತೆ ತೋಚಿತು. ಫಾಯಿಝ್ ಅದರ ದುಃಖ ಅರ್ಥಮಾಡಿಕೊಂಡು ಸಮುದ್ರ ತೀರಕ್ಕೆ ಹೋದ. ಸಮುದ್ರ ತೀರವು ಪ್ಲಾಸ್ಟಿಕ್ ಮಾಲಿನ್ಯಗಳಿಂದ ತುಂಬಿ ಹೋಗಿತ್ತು. ಸೆಂಥಿಲ್ ಬಾಟಲಿಯಿಂದ ಹೊರ ಬಂದವನೇ ತನ್ನ ಎಂಟು ಹಸ್ತವನ್ನು ಚಾಚಿ ಒಂದೊಂದೇ ಕಸವನ್ನು ಹೆಕ್ಕಿ ಬುಟ್ಟಿಗೆ ಹಾಕಲಾರಂಭಿಸಿತು. ಫಾಯಿಝ್ ಕೂಡಾ ಜೊತೆಯಾದ. ಅಲ್ಲಿದ್ದ ಇತರರೂ ಅವರೊಂದಿಗೆ ಕೈ ಜೋಡಿಸಿದರು. ಸ್ವಲ್ಪವೇ ಹೊತ್ತಿನಲ್ಲಿ ತೀರವು ಸ್ವಚ್ಛವಾಯಿತು. ಅಕ್ಟೋಪಸ್ ಸಂತಸದಿಂದ ನಕ್ಕಿತು.

ಫಾಯಿಝ್ ಹೇಳಿದ, "ಪ್ಲಾಸ್ಟಿಕ್ ಮಾಲಿನ್ಯದ ಅಕ್ಟೋಪಸ್ ಹಿಡಿತದಿಂದ ನಾವು ನಾಡನ್ನು ರಕ್ಷಿಸೋಣ. ಸಮುದ್ರವನ್ನೂ ಉಳಿಸೋಣ..." ಸೆಂಥಿಲ್ ಎಲ್ಲರಿಗೂ ಬೈ ಬೈ ಹೇಳಿ ಸಮುದ್ರದೊಂದಿಗೆ ಲೀನವಾಯಿತು. ■

ವಿದ್ವಾಂಸರು ಮತ್ತು ನೆರೆಮನೆಯಾತ

■ ಎ. ಶಕೀಲ್ ■

ಇರಾಕಿನ ಕೂಫಾ ಎಂಬ ಪಟ್ಟಣದಲ್ಲಿ ಖ್ಯಾತ ವಿದ್ವಾಂಸರೊಬ್ಬರಿದ್ದರು. ಅವರ ಹೆಸರು ಅಬೂ ಹನೀಫ ಎಂದಾಗಿತ್ತು. ಅವರ ನೆರೆಮನೆಯ ವ್ಯಕ್ತಿಯೋರ್ವ ಯಾವಾಗಲೂ ಮದ್ಯಪಾನ ಮಾಡಿ ನೆರೆಕರೆಯವರಿಗೆ ತೊಂದರೆ ನೀಡುತ್ತಿದ್ದ. ಹೇಗೆಂದರೆ ರಾತ್ರಿಯಲ್ಲಿ ಆತನ ಬೊಬ್ಬೆ, ಗದ್ದಲ, ಹಾಡಿನಿಂದಾಗಿ ನೆರೆಯವರಿಗೆ ನಿದ್ರೆ ಇರಲಿಲ್ಲ. ಇದರಿಂದ ನೆರೆಕರೆಯವರು ರೋಸಿ ಹೋಗಿದ್ದರು. ಆದರೆ ಯಾರೂ ಪ್ರತಿಕ್ರಿಯಿಸುತ್ತಿರಲಿಲ್ಲ.

ನೆರೆಮನೆಯಾತನ ಕೃತ್ಯದಿಂದ ಅಬೂ ಹನೀಫ ಬಹಳ ತೊಂದರೆಗೊಳಗಾಗಿದ್ದರು. ಏಕಾಗ್ರತೆಯಿಂದ ಕುರ್‌ಆನ್ ಓದಲು, ರಾತ್ರಿ ಎದ್ದು ನಮಾಝ್ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಈ ಉಪಟಳ ಹೇಗೆ ನಿಲ್ಲಿಸಬಹುದು ಎಂಬ ಕುರಿತು ಇಮಾಮರಿಗೆ ಯಾವುದೇ ಉಪಾಯವೂ ಇರಲಿಲ್ಲ. ಇದನ್ನು ತಾಳ್ಮೆಯಿಂದ ಸಹಿಸುವುದೇ ಲೇಸೆಂದು ಮೌನವಹಿಸಿದ್ದರು.

ಒಂದು ದಿನ ರಾತ್ರಿ ಗಸ್ತು ತಿರುಗುತ್ತಿದ್ದ ಪೊಲೀಸರು ಈತನ ಆಟಾಟೋಪ ಕಂಡು ಈತನನ್ನು ಬಂಧಿಸಿಕೊಂಡು ಹೋದರು.

ಇದು ಯಾವುದೂ ಇಮಾಮ್ ಹನೀಫರಿಗೆ ತಿಳಿಯಲಿಲ್ಲ. ಎಲ್ಲಾ ರಾತ್ರಿಯೂ ಕೇಳುವ ಬೊಬ್ಬೆ ಗದ್ದಲ ಕೇಳುತ್ತಿಲ್ಲ. ಇದ್ದೇಗೆ ಸಾಧ್ಯವೆಂದು ಆಶ್ಚರ್ಯವಾಯಿತು. ಹೊರಗೆ ಹೋಗಿ ನೆರೆಕರೆಯವರೊಡನೆ ವಿಚಾರಿಸಿದಾಗ ವಿಷಯ ತಿಳಿಯಿತು.

ಮರುದಿನ ಬೆಳಿಗ್ಗೆ ನ್ಯಾಯಾಧೀಶರಾದ ಈಸಬ್ನು ಮೂಸಾರ ಬಳಿಕ ಇಮಾಮ್ ಹನೀಫ ಹೊರಟರು. ಅವರೊಡನೆ ವಿಷಯ ಹೇಳಿದರು. ಇನ್ನು ಏನೂ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆಂದು ಹೇಳಿ ಜಾಮೀನು ನಿಂತು ಅವನನ್ನು ಬಿಡಿಸಿಕೊಂಡು ಬಂದರು. ಜಡ್ಜ್‌ಗೆ ಇಮಾಮ್ ಹನೀಫಾರ ಮೇಲೆ ಬಹಳ ಗೌರವವಿತ್ತು. ಹೀಗೆ ನೆರೆಯವರನ್ನು ಬಿಡುಗಡೆಗೊಳಿಸಲಾಯಿತು. ತಾನು ದಿನಾಲೂ ಇಮಾಮ್‌ರಿಗೆ ತೊಂದರೆ ಕೊಡುತ್ತಿದ್ದರೂ ಇಮಾಮ್ ನನ್ನನು ರಕ್ಷಿಸಿದರಲ್ಲಾ ಎಂದು ಯೋಚಿಸಿ ಆತನಿಗೆ ನಾಚಿಕೆಯಾಯಿತು. ತಲೆತಗ್ಗಿಸಿ ನಿಂತು ಇಮಾಮರಿಗೆ ಕೃತಜ್ಞತೆ ಹೇಳಿದ. ನಂತರ ಇಮಾಮರ ಶಿಷ್ಯನಾಗಿ, ಶಿಷ್ಟ ವ್ಯಕ್ತಿಯಾಗಿ ಬಾಳಿ ಎಲ್ಲರಿಗೂ ಉಪಕಾರಿಯಾದ. ■

ಸೈನಿಕರು ನಮ್ಮ ಕಣ್ಣಾದರೆ...

(10ನೇ ಪುಟದಿಂದ)

ನಂತರ ಈ ಬಂಡವಾಳ ಶಾಹಿಗಳು ರೈತರ ಹೊಲಗಳನ್ನು ಖರೀದಿಸಿ ದೇಶದ ಆಹಾರ ಭದ್ರತೆಯನ್ನು ನಾಶಮಾಡಬಹುದೆಂಬ ಆಶಂಕೆಯಿಂದ ರೈತರು ಬೀದಿಗಿಳಿದರು. ಸ್ವತಂತ್ರ ವಿಪಣಿಗಳೆಂಬ ಕಾರ್ಪೊರೇಟರ್‌ಗಳು ತಾತ್ಕಾಲಿಕವಾಗಿ ಲಾಭದಾಯಕವೆಂದು ಮೇಲ್ನೋಟಕ್ಕೆ ಕಂಡರೂ ಭವಿಷ್ಯದಲ್ಲಿ ಅದು ವಿನಾಶಕ್ಕೆ ಕಾರಣವಾಗಬಹುದು. ಅಮೇರಿಕಾದ ಹಂದಿ ಸಾಕುಗಾರರ ಇಂದಿನ ಪರಿಸ್ಥಿತಿಯೇ ಇದಕ್ಕೆ ಜ್ವಲಂತ ಉದಾಹರಣೆಯಾಗಿದೆ.

ಒಂದಂತೂ ನೆನಪಿರಲಿ... ಕೋಮುವಾದ, ದ್ವೇಷ ಸಾಧನೆಯಿಂದ ನಮ್ಮ ಹೊಟ್ಟೆ ತುಂಬಲಾರದು. ಹೊಟ್ಟೆ ತುಂಬಬೇಕಾದರೆ ರೈತರ ದುಡಿಮೆಯೇ ಬೇಕು. ನಾವಿರುವ ನೆಲದ ಫಲಗಳನ್ನು ಅನುಭವಿಸಬೇಕಾದರೆ ನಾವು ಅವರೊಂದಿಗೆ ಕರ ಜೋಡಿಸಬೇಕೇ ಹೊರತು ಈ ಕಾರ್ಪೊರೇಟರ್‌ಗಳನ್ನು ನಂಬಿಯಲ್ಲ. ಅದು ನಮಗೆ ಕೇಡುಗಾಲ ತರಬಹುದು. ಫ್ಯಾಸಿಸ್ಟ್‌ಗಳ ಹುನ್ನಾರ, ಪಿತೂರಿಗಳ ವಿರುದ್ಧ ರೈತರ ಹೋರಾಟವೇ ವಿನಾ ಸ್ವಂತ ಸ್ವಾರ್ಥ ಲಾಭಕ್ಕಾಗಿಯಲ್ಲ... ಇದು ಜಾತಿ, ಧರ್ಮದ ವಿರುದ್ಧದ ಹೋರಾಟವಲ್ಲ... ಒಂದು ಸಂಸ್ಥೆಯ ವಿರುದ್ಧದ ಹೋರಾಟವಲ್ಲ... ಬದಲಾಗಿ ಹಕ್ಕುಗಳ ಸಂರಕ್ಷಣೆ ಮತ್ತು ದೇಶದ ಆಹಾರ ಭದ್ರತೆಯ ಸುರಕ್ಷಿತೆಗಾಗಿ ಅವರೆಲ್ಲ ಒಟ್ಟುಗೂಡಿ ಪ್ರತಿಭಟಿಸುತ್ತಿರುವುದು.

"ಜೈ ಜವಾನ್ ಜೈ ಕಿಸಾನ್" ಎಂದರೆ ಸೈನಿಕರಿಗೂ ಜಯವಾಗಲಿ ಮತ್ತು ಕೃಷಿಕರಿಗೂ ಜಯವಾಗಲಿ. ಜವಾನ್ ದೇಶದ ಸುರಕ್ಷತೆಗಾಗಿ ಜಯಿಸಬೇಕು. ಕೃಷಿಕ ಆಹಾರ ಸಾಮಗ್ರಿಗಳ ಭದ್ರತೆ ಹಾಗೂ ಸಂರಕ್ಷಣೆಗಾಗಿ ಜಯಿಸಬೇಕು. ತನ್ನ ಮಗ ದೇಶದ ಸೈನಿಕನಾದರೆ ಬೀಗುವ ಆ ರೈತ ತಂದೆ ದೇಶಕ್ಕಾಗಿ ನೆಲ, ಸಂತಾನವನ್ನು ಅರ್ಪಿಸಲೂ ಸಿದ್ಧ. ದೇಶಕ್ಕಾಗಿ ಸೈನಿಕರನ್ನು, ಆರಕ್ಷಕರನ್ನು ಸಮರ್ಪಿಸಿದ ತ್ಯಾಗಮಯಿ ತಂದೆತಾಯಿಗಳು ಅವರಾಗಿದ್ದಾರೆ. ಯೋಧನಾದ ಮಗ ದೇಶಕ್ಕಾಗಿ ಹುತಾತ್ಮನಾಗಬೇಕೆಂದು ಬಯಸುವರೇ ಹೊರತು ಅನ್ಯಾಯದ ಪರ ನಿಲ್ಲುವಂತೆ ಅವರು ಕನಸು ಮನಸ್ಸಿನಲ್ಲೂ ಊಹಿಸಲಾರರು. ಅಂತಹ ರೈತ ಸಮೂಹವನ್ನು ಗೌರವಿಸಬೇಕೇ ವಿನಾ ಥಳಿಸುವುದು ನ್ಯಾಯವೇ..?

ಸರಕಾರ ಅವರ ನೋವಿಗೆ ಸ್ಪಂದಿಸುವ ಕಿವಿಗಳಾಗಬೇಕು. ಕೃಷಿ ಮಂತ್ರಿ ಅಥವಾ ಪ್ರಧಾನ ಮಂತ್ರಿಗಳು ಅವರ ಪರವಾಗಿ ನಿಂತು ಸಮಸ್ಯೆಯನ್ನು ಬಗೆಹರಿಸಬೇಕು. "ರೈತ ಈ ದೇಶದ ಸಂಪತ್ತು... ಅವರ ದುಡಿಮೆಯೇ ದೇಶದ ಭದ್ರತೆ... ಅವರ ಪರಿಶ್ರಮವೇ ದೇಶದ ಆಹಾರ ಸಮೃದ್ಧಿ... ಸೈನಿಕನಿದ್ದರೆ ದೇಶ ಉಳಿಯುತ್ತದೆ, ರೈತನಿದ್ದರೆ ಭದ್ರತೆ ಇರುತ್ತದೆ... ಉತ್ತಮ ಸೈನಿಕ ದೇಶದ ಆಸ್ತಿಯಾದರೆ ಶ್ರಮಪಟ್ಟು ದುಡಿಯುವ ರೈತ ದೇಶದ ಬೆನ್ನೆಲುಬು." ■

ನಾಕ್ವ ಎಂಟರ್‌ಪ್ರೈಸಸ್

NAKWA ENTERPRISES (SINCE 1952)

H.O.: OPP. RAILWAY STATION B.H. ROAD, BHADRAVATHI - 577-301
BRANCH: M.S. TOWER, K.R. PURAM, SHIMOGA - 577-201

PRODUCTS: FISHING NET, FISHERIES REQUISITES, HOUSE HOLD CLEANING ARTICLES, ROPE, TARPAULIN AND OTHERS ARTICLES

FOUNDER: JANAB N. ABDULLA SAHEB
CONTACT: N. MOHAMMED ALI - 9341623811, nakwabharavathi@gmail.com
N. HYDER ALI, - 9845577501, nakwahyder@gmail.com
BHADRAVATHI: 08282-266265, SHIMOGA - 08182-404064

ಹೃದಯದ ಮಾತು

2020 ವರ್ಷವನ್ನು ಈ ಜಗತ್ತು ಎಂದಿಗೂ ಮರೆಯದು. 'ಸಾವು'ಗಳ ಸುನಾಮಿಯ ಅಲೆಯು ನಮ್ಮ ಬದುಕಿನಲ್ಲಿ 'ಕೊರೋನಾ' ಎಂಬ ವೈರಸ್‌ನ ರೂಪದಲ್ಲಿ ಅಪ್ಪಳಿಸಿತ್ತು. ಕಳೆದು ಹೋದ ಈ ತಿಂಗಳುಗಳನ್ನು ಒಮ್ಮೆ ನೆನೆದುಕೊಂಡರೆ 'ನೋವು'ಗಳೇ ಅಧಿಕ. ಲಾಕ್‌ಡೌನ್ ಆದಾಗ ಮನುಷ್ಯನಿಗೆ ಬದುಕಲು ಯಾವ ವಸ್ತು ಅಗತ್ಯ ಎಂಬ ಸತ್ಯದ ಅರಿವು ಆಗಿರಬಹುದು. ಹಸಿವೆಯನ್ನು ತಣಿಸಲು 'ಆಹಾರ'ವೇ ನಮ್ಮ ಪ್ರಥಮ ಆಯ್ಕೆ ಆಗಿತ್ತು. ದೊಡ್ಡ ಮನೆ ಒಳಗೆ ಐಷಾರಾಮಿಯ ಹಲವಾರು, ವಸ್ತುಗಳು, ಬಂಗಾರ, ಹಣ, ಸಂಪತ್ತು ಎಲ್ಲಾ ಇದ್ದರೂ ತಿನ್ನಲು ಅಕ್ಕಿ, ಗೋಧಿ, ಹಾಲು, ತರಕಾರಿ, ಮಸಾಲೆ ಸಾಮಾನುಗಳ ರೇಶನ್ ಇಲ್ಲದೇ ಹೋದಾಗ ಎಷ್ಟು ಸಂಪತ್ತುಗಳಿದ್ದೂ ಏನು ಪ್ರಯೋಜನ? ಎಂದು ಅನಿಸಿರಬಹುದು. ನಿಜ... ಮನುಷ್ಯ ಬದುಕಲು ಬೇಕಾಗಿರುವುದು ಆಹಾರವೇ ಹೊರತು ಅನ್ಯ ಸಾಮಾನಿನ ದಾಸ್ತಾನು ಅಲ್ಲ. ಇಂದು ನಮ್ಮ ರೈತರನ್ನು ನಾವು ಬೀದಿಗೆ ಇಳಿಸಿ ಹೋರಾಟ ಮಾಡುವಂತಹ ಅಸಹಾಯಕತೆಗೆ ದೂಡಿದ್ದೇವೆ. ಅವರ ಕಾಲು, ಕೈ ಕೆಸರಲ್ಲಿದ್ದರೆ ಮಾತ್ರ ನಮ್ಮ ಹೊಟ್ಟೆಗೆ 'ಅನ್ನ ಭಾಗ್ಯ' ಎಂಬುವುದನ್ನು ಮರೆಯಬಾರದು. ಗಾಂಧೀಜಿ ಹೇಳಿದ್ದರು... 'ಹಳ್ಳಿ'ಯು ದೇಶದ 'ಹೃದಯ' ಎಂದು. ಈ ಹೃದಯವು ಆರೋಗ್ಯವಾಗಿದ್ದರೆ (ನೆಮ್ಮದಿಯಿಂದ) 'ದಿಲ್ಲಿ'ಯೂ ನೆಮ್ಮದಿಯಾಗಿರುತ್ತದೆ. ಮಳೆ, ಬಿಸಿಲು ಗಳಿಗೆ ಮೈ ಒಡ್ಡಿ ದುಡಿಯುವ ಕೈಗಳನ್ನು ನಾವು ಪ್ರೀತಿಸಬೇಕು, ಗೌರವಿಸಬೇಕು. ದೇಶದ ಎಲ್ಲಾ ಜನರ ಹಿತ, ಶಾಂತಿಯನ್ನು ಬಯಸಿ ಆಡಳಿತ ಮಾಡಬೇಕಾದ ಸರಕಾರ ಯಾಕಾಗಿ ಬುದ್ಧಿಹೀನ ಕಾರ್ಯಗಳತ್ತ ತಲೆ ಓಡಿಸುತ್ತದೋ...!? "ವಿನಾಶಕಾಲೇ ವಿಪರೀತ ಬುದ್ಧಿ" ಎಂಬ ಮಾತು ಇಂದಿನ ಸರಕಾರಕ್ಕೆ ಸೂಕ್ತ ಅನಿಸುತ್ತಿದೆ. ದೇಶದಲ್ಲಿ ಹಲವು ಸಮಸ್ಯೆಗಳಿವೆ. ಡ್ರಗ್ಸ್ ಜಾಲ, ಕಲಬೆರಕೆಯ ಆಹಾರದಿಂದಾಗಿ ಅಪಾರವಾಗಿ ಜನರು ನಾನಾ ವಿಧದ ರೋಗಗಳಿಗೆ ಬಲಿಯಾಗುತ್ತಿದ್ದಾರೆ. ಮಕ್ಕಳು, ಮಹಿಳೆಯನ್ನು ಕಳ್ಳ ಸಾಗಾಟ ಮಾಡುವ ದಂಧೆ, ಭ್ರಷ್ಟಾಚಾರ, ಕಪ್ಪು ಹಣ... ಹೀಗೆ ಬಹಳಷ್ಟಿದೆ. ಇದಕ್ಕೆಲ್ಲಾ ಕಠಿಣವಾದ ಶೀಘ್ರ ಪರಿಹಾರದ ಮಾರ್ಗ ಹುಡುಕುವ ಬದಲು ಹೊಸ ಹೊಸ ಮಸೂದೆ, ಕಾನೂನುಗಳನ್ನು ಜನರ ಮೇಲೆ ಹೇರುವ ಸರಕಾರ ದೇಶವನ್ನು ಎತ್ತ ಸಾಗಿಸುತ್ತಿದೆ? ಮಕ್ಕಳ ಮೇಲೆ ಅತ್ಯಾಚಾರಗಳು ಮಿತಿ ಮೀರುತ್ತಿದೆ. ಒಂದೇ ವಾರದಲ್ಲಿ ಎರಡು ಬಾಲಕಿಯರ ಮೇಲೆ ಅತ್ಯಾಚಾರ ಉತ್ತರ ಕರ್ನಾಟಕದಲ್ಲಿ ನಡೆಯಿತು. ರೋಗಿ ತಾಯಿಯನ್ನು ನೋಡಿಕೊಳ್ಳಲು ಆಸ್ಪತ್ರೆಯಲ್ಲೇ ಉಳಿದ ಬಾಲಕಿಯನ್ನು ಆಸ್ಪತ್ರೆಯ ವಾರ್ಡ್ ಬಾಯ್ 'ಊಟ' ಕೊಡಿಸುವ ನೆಪ ಹೇಳಿ ತನ್ನ ಸ್ನೇಹಿತರೊಂದಿಗೆ ಕಾರಲ್ಲಿ ಕರೆದೊಯ್ದು ಅತ್ಯಾಚಾರ ಮಾಡಿದ. ಅದೇ ರೀತಿ ಕಬ್ಬಿನ ಗದ್ದೆಯಲ್ಲಿ ಕೂಲಿ ಕೆಲಸ ಮಾಡಲು ಬಂದ ಬಾಲಕಿಯನ್ನು 'ಮೀನು' ಕೊಡಿಸುತ್ತೇನೆ ಎಂದ್ಹೇಳಿ ಕಬ್ಬಿನ ಗದ್ದೆ ಒಳಗೇ ಅತ್ಯಾಚಾರ ಮಾಡಿ, ಆಕೆಯ ಕೊರಳನ್ನು ಕೊಯ್ದು ಕೊಲೆ ಮಾಡಿದ. ನಮ್ಮ ಕಾನೂನುಗಳು ಆಮೆ ನಡಿಗೆಯಂತೇ ಸಾಗುತ್ತಾ ಶಿಕ್ಷೆ ವಿಧಿಸುವ ಹೊತ್ತಿಗೆ ಬಾಲಕಿ ಮಹಿಳೆಯಾಗಿ ಬೆಳೆದಿರು ತ್ತಾಳೆ! ಗಲ್ಲು ಶಿಕ್ಷೆಯನ್ನು 'ಬಹಿರಂಗ'ವಾಗಿ ವಿಧಿಸಿ ದೃಶ್ಯವನ್ನು ಕಾಮುಕರು ವೀಕ್ಷಿಸುವಂತೇ ಪ್ರಚಾರ ಮಾಡಿದ್ದರೆ... ಸ್ವಲ್ಪನಾದ್ರೂ ಭಯ ಹುಟ್ಟುತ್ತಿತ್ತು. ಮೊಬೈಲ್‌ಗಳಲ್ಲಿ ಬರುವ ಅಶ್ಲೀಲ ಲೈಂಗಿಕ ಪ್ರಚೋದನೆಯೇ... ಹಿಂಸೆಗೆ ಕಾರಣ. ಪುಟ್ಟ ಹೆಣ್ಣು ಮಕ್ಕಳನ್ನು ತಾಯಿಯಂದಿರು ರೆಪ್ಪೆ ಮುಚ್ಚದೇ ಕಾಯುವ ಪರಿಸ್ಥಿತಿ ಇಂದು ಉಂಟಾಗುತ್ತಿದೆ. ನಾವೆಲ್ಲಾ ಚಿಕ್ಕದಿರುವಾಗ ಅಮ್ಮ ನಮ್ಮನ್ನು ರೇಶನ್ ಅಂಗಡಿಗೆ ರಾತ್ರಿಯಾದರೂ ಕಳಿಸಲು ಹಿಂಜರಿಯುತ್ತಿರಲಿಲ್ಲ. ಆದ್ರೆ... ಇಂದು ಹಗಲಿಗೇ ತಮ್ಮ ಮಕ್ಕಳನ್ನು ನೆರೆಮನೆಗೂ ಕಳಿಸಲು ಭೀತಿ ಪಡುವಂತಾಗಿದೆ. ಹೇಗೆ ಕಾಪಾಡುವುದು ಮುಗ್ಧ ಬಾಲಕಿಯರನ್ನು...? ಇಂತಹ ವಿಷಯಗಳ ಕುರಿತು ಕಾನೂನು ತಂದರೆ ಸಾಕೆ? ಮಾಧ್ಯಮಗಳು ಲವ್ ಜಿಹಾದ್, ಗೋ ಹತ್ಯೆ... ಇತ್ಯಾದಿ ವಿಷಯದ ಬಗ್ಗೆ ಸುದ್ದಿಗಳನ್ನು ವೈಭವೀಕರಿಸುತ್ತಾ ಇರುತ್ತದೆ. ಸಮಾಜದ ನಿಜವಾದ ಸಮಸ್ಯೆ, ಭೀತಿಯ ಕುರಿತು ಚರ್ಚೆ ಆಗುವುದಿಲ್ಲ. ಈ ವರ್ಷ ಮಕ್ಕಳು 'ಶಾಲೆ' ಇಲ್ಲದೇ ಮನೆಗಳಲ್ಲೇ ಉಳಿದಾಗ ಬಹಳಷ್ಟು ಕ್ರಿಮಿನಲ್ ಕೇಸ್‌ಗಳು ಸಂಭವಿಸುತ್ತಿದೆ. ಒಂದು ಬಾರಿ 'ಶಾಲೆ' ಆರಂಭವಾದರೆ ಸಾಕಿತ್ತು.... ಎನ್ನುವ ಹೆತ್ತವರ ಸೋತ ಧ್ವನಿಯೂ ಕ್ಷೀಣಿಸುತ್ತಿದೆ. ಆನ್‌ಲೈನ್ ಕ್ಲಾಸ್‌ಗಾಗಿ ಮಕ್ಕಳ ಕೈಗೆ ಕೊಟ್ಟ ಮೊಬೈಲ್‌ಗಳಿಂದಲೇ ದುರುಪಯೋಗ ಕೂಡಾ ಆಗ್ತಿದೆ. ಬಹಳಷ್ಟು ಹೆಣ್ಣು ಮಕ್ಕಳು ಮಾನಸಿಕವಾಗಿ ಖಿನ್ನತೆಗೆ ಜಾರಲು ಸೋಶಿಯಲ್ ಮೀಡಿಯಾದಲ್ಲಿ ಕಾಡುವ ಕಿರುಕುಳಗಳೂ ಕಾರಣ ಎಂದು ವೈದ್ಯರೋರ್ವರು ಹೇಳುತ್ತಾರೆ.

'ಅನುಪಮ' ಮಾಸಿಕದ ಅಭಿಯಾನ ನಿಮಿತ್ತ ದೂರದ ಅಬುಧಾಬಿಗೆ ಹೋಗಿದ್ದ ಸಮಯದಲ್ಲಿ ಪತ್ರಿಕೆಯ ಅಭಿಮಾನಿ ಓರ್ವರ ಭೇಟಿ ಆಗಿತ್ತು. ಈಗ ಆ ವ್ಯಕ್ತಿಯು ವಿಶ್ವದ ಅಗ್ರ ವಿಜ್ಞಾನಿಗಳ ಪಟ್ಟಿಯಲ್ಲಿ ಓರ್ವರಾಗಿದ್ದಾರೆಂದು ವಾರ್ತೆ ತಿಳಿದು ಅವರ ಕುರಿತು ಅಚ್ಚರಿ ಮತ್ತು ಹೆಮ್ಮೆ ಅನಿಸಿತು. ಈ 'ವಿಜ್ಞಾನಿ'ಯ ಭೇಟಿ ಆಗಿದ್ದು ನನಗೆ ಹೆಮ್ಮೆ ಅನಿಸಿತು. ಸರಳ, ನಗುಮುಖದ, ಡಾ। ಅಬ್ದುಲ್ ರಹಿಮಾನ್ ಬೇಗ್‌ರಿಗೆ ಅನುಪಮ ಬಳಗದಿಂದ ಶುಭಾಶಯಗಳು. ನಮ್ಮ ಪತ್ರಿಕೆಯ ಲೇಖಕರೂ, ಹಿತೈಷಿಯೂ ಆದ ಅಬ್ದುಲ್ ಸಲಾಮ್ ದೇರಳಕಟ್ಟೆಯವರಿಗೆ ಅವರ ಕಥಾ ಸಂಕಲನ 'ಮರೀಚಿಕೆ'ಗೆ ಮುಸ್ಲಿಮ್ ಸಾಹಿತ್ಯ ಪ್ರಶಸ್ತಿಯೂ ಲಭ್ಯವಾಗಿದೆ. ಅವರಿಗೂ ನಮ್ಮ ಅಭಿನಂದನೆಗಳು. ಪ್ರಶಸ್ತಿಯ ಬಹುಮಾನ ಹಣವನ್ನು ಇವರು ಓರ್ವ ಬಡ ಹೆಣ್ಣುಮಗಳಿಗೆ ಆಗಲೇ ದಾನ ಮಾಡಿದ್ದು ತಿಳಿದು ಸಂತೋಷವಾಯಿತು.

'ಅನುಪಮ' ಪತ್ರಿಕೆಯ ಅಭಿಯಾನದಲ್ಲಿ ಭಾಗವಹಿಸಿದ, ಯಶಸ್ವಿಗೊಳಿಸಿದ ನನ್ನ ಎಲ್ಲ ಸಹೋದರ, ಸಹೋದರಿಯರಿಗೆ ನಾನು ಧನ್ಯವಾದ ಸಲ್ಲಿಸುತ್ತೇನೆ.

ಹೊಸ ವರುಷ ನೆಮ್ಮದಿ ಮತ್ತು ಸಂತೋಷವನ್ನು ತರಲಿ ಎಂದು ಹಾರೈಸುತ್ತಾ...

ಶಹನಾಝ್ ಎಂ.
(ಪ್ರಧಾನ ಸಂಪಾದಕಿ)

ನೀವು ನೋಡುತ್ತಿಲ್ಲವೇ? ಅಲ್ಲಾಹನು ಆಕಾಶದಿಂದ ನೀರು ಸುರಿಸಿದನು. ಅನಂತರ ಅದನ್ನು ಚಿಲುಮೆ ಮತ್ತು ನದಿಗಳ ರೂಪದಲ್ಲಿ ಭೂಮಿಯೊಳಗೆ ಹರಿಸಿದನು. ತರುವಾಯ ಆ ನೀರಿನ ಮೂಲಕ ಅವನು ವಿವಿಧ ಜಾತಿಯ ವಿಭಿನ್ನ ಬೆಳೆಗಳನ್ನು ಹೊರ ತೆಗೆಯುತ್ತಾನೆ. ಅನಂತರ ಆ ಬೆಳೆಗಳು ಹಣ್ಣಾಗಿ ಒಣಗುತ್ತವೆ. ಆಗ ಅವು ಹಳದಿಯಾಗಿ ಬಿಡುವುದನ್ನು ನೀವು ನೋಡುತ್ತೀರಿ. ಕೊನೆಗೆ ಅಲ್ಲಾಹನು ಅವುಗಳನ್ನು ಹೊಟ್ಟಾಗಿ ಮಾಡಿ ಬಿಡುತ್ತಾನೆ. ವಾಸ್ತವದಲ್ಲಿ ಇದರಲ್ಲಿ ಬುದ್ಧಿಜೀವಿಗಳಿಗೆ ಒಂದು ಪಾಠವಿದೆ. ಅಲ್ಲಾಹನು ಯಾರ ಹೃದಯವನ್ನು ಇಸ್ಲಾಮಿಗಾಗಿ ತೆರೆದುಬಿಟ್ಟನೋ ಹಾಗೂ ಯಾರು ತನ್ನ ಪ್ರಭುವಿನ ಕಡೆಯಿಂದ ಒಂದು ಪ್ರಕಾಶದಲ್ಲಿ ನಡೆಯುತ್ತಿರುವನೋ ಅವನು (ಇವುಗಳಿಂದ ಯಾವ ಪಾಠವನ್ನೂ ಕಲಿಯದವನಂತೆ ಆಗಬಲ್ಲನೇ?) ಯಾರ ಹೃದಯಗಳು ಅಲ್ಲಾಹನ ಬೋಧನೆಯಿಂದ ಇನ್ನಷ್ಟು ಕಠಿಣವಾಗಿ ಹೋದುವೋ ಅವರಿಗಾಗಿ ವಿನಾಶವಿದೆ. ಅವರು ಸುವ್ಯಕ್ತ ಪಥಭ್ರಷ್ಟತೆಯಲ್ಲಿ ಬಿದ್ದಿರುತ್ತಾರೆ.

(ಪವಿತ್ರ ಕುರ್‌ಆನ್ 39: 21–22)

FURQAN ACADEMY AND CHARITABLE TRUST'S

فرقان اُردو نرسری و پرائمری اسکول

FURQAN URDU PRIMARY SCHOOL

NURSERY TO 6TH STANDARD
VALUE BASED ALONG WITH RELIGIOUS EDUCATION

Opp. KEB Office, Bhandiwad Base, Hubli - 580 020

SHAHEEN
GROUP OF INSTITUTIONS

SHAHEEN EDUCATIONAL TRUST

H.No. 1-11-123/3, Nijalingappa Colony, RAICHUR - 584 101.
Email: shaheenpuraichur@gmail.com

Shaheen School & P.U. College Bidar	- 8892825786
Shaheen Academy Bengaluru	- 8050889589
Shaheen Academy Aurangabad	- 9158716958
Shaheen P.U. College Gulbarga	- 9035223111
Shaheen School & P.U. College Humnabad	- 9663746237
Shaheen Public School Zaheerabad	- 9885596961
Shaheen School of Excellence Sadasivpet	- 9885596961

Head Office: Ahmed Bagh, Gole Khana, Bidar - 585 401
Tel: 08482-230900, Fax: 08482-230062
Email: info@shaheengroup.org | www.shaheengroup.org

Ph: 08535 - 222007
Mob: 9448464653

M/s BANDENAWAZ & COMPANY

Fertilizers & Pesticides Dealers

New APMC, Plot No. 51, SINDHANUR - 584 128.
Dist. Raichur, St: Karnataka

REGD. NO.KA/SK/MNG/477/2021-23 LICENCED TO POST WPP LICENCE NO. SK/WPP/MNG/97/2021-23

MAKE A
WARM WINTER
FOR **POOR & NEEDY**

APPEAL FOR

WINTER RELIEF

PROJECT 2020-21

DONATE A BLANKET
₹500

DEPOSIT YOUR CONTRIBUTION

SOCIETY FOR BRIGHT FUTURE

Current A/C No.
6318812353

Bank
INDIAN BANK
JAMIA MILLIA ISLAMIA, NEW DELHI-25

IFSC
IDIB000J029

(email us the detail of transaction with postal address at **account@sbfindia.org** or **whatsapp 9958614153**)

Indian Citizens Can Donate From Their Accounts In India To This Account

Donation to Society for Bright Future is eligible for exemption under section 80G of Income Tax Act

BRINGING HELP and HOPE
SOCIETY FOR BRIGHT FUTURE

SOCIETY FOR BRIGHT FUTURE
E-89, Hari Kothi Lane, Abul Fazl Enclave, Jamia Nagar, New Delhi - 110025 (India)
Email : info@sbfindia.org | Mobile : +91 70428 98307 | +91 98913 35828

Vol. No. 11, Issue No. 12, Printed & Published by **M. Sadullah**, 20-7-496, Badria 3rd Cross, Kandak, Mangalore-575001 on behalf of Sanmarga Publication Trust and Printed & Published at Comprint, Hidayath Centre, Beebi Alabi Road, Mangalore - 575001, Editor: **Shahnaz M.**
Anupama Women's Monthly **RNI. KARKAN 2010/31373 - Posted at R.M.S. M'lore,** **On 21st & 24th of every Month**